
ಪುಸ್ತಕ ಪ್ರಪಂಚ

ಏಪ್ರಿಲ್-೧೯೯೭



ಕರ್ನಾಟಕ ರಾಜ್ಯ ವಯಸ್ಕರ ಶಿಕ್ಷಣ ಸಮಿತಿ
ಮೈಸೂರು-೫೭೦ ೦೦೬

ಯುಗಾದಿ

ಯುಗಯುಗಾದಿ ಕಳೆದರೂ
ಯುಗಾದಿ ಮರಳಿ ಬರುತಿದೆ.
ಹೊಸ ವರುಷಕೆ ಹೊಸ ಹರುಷವ
ಹೊಸತು ಹೊಸತು ತರುತಿದೆ.

ಹೊಂಗೆಹೂವ ತೊಂಗಲಲ್ಲಿ
ಭೃಂಗದ ಸಂಗೀತಕೇಲಿ
ಮತ್ತೆ ಕೇಳಬರುತಿದೆ.
ಬೇವಿನ ಕಹಿಬಾಳಿನಲ್ಲಿ
ಹೂವಿನ ನಸುಗಂಪು ಸೂಸಿ
ಜೀವಕಳೆಯ ತರುತಿದೆ.

ಕಮ್ಮನೆ ಬಾಣಕ್ಕೆ ಸೋತು
ಜುಮ್ಮನೆ ಮಾಮರವು ಹೂತು
ಕಾಮವಾಗಿ ಕಾದಿದೆ.
ಸುಗ್ಗಿ ಸುಗ್ಗಿ ಸುಗ್ಗಿ ಎಂದು
ಹಿಗ್ಗಿ ಗಿಳಿಯ ಸಾಲು ಸಾಲು
ತೋರಣದೊಲು ಕೋದಿದೆ.

ವರುಷಕೊಂದು ಹೊಸತು ಜನ್ಮ
ಹರುಷಕೊಂದು ಹೊಸತು ನೆಲೆಯು
ಅಖಿಲ ಜೀವಜಾತಕೆ!
ಒಂದೆ ಒಂದು ಜನ್ಮದಲ್ಲಿ
ಒಂದೆ ಬಾಲ್ಯ ಒಂದೆ ಹರೆಯ
ನಮಗದಷ್ಟೆ ಏತಕೆ?

ನಿದ್ದೆಗೊಮ್ಮೆ ನಿತ್ಯ ಮರಣ
ಎದ್ದ ಸಲ ನವೀನ ಜನನ
ನಮಗೆ ಏಕೆ ಬಾರದೋ?
ಎಲೆ ಸನತ್ಕುಮಾರದೇವ!
ಸಲೆ ಸಾಹಸಿ ಚಿರಂಜೀವ!
ನಿನಗೆ ಲೀಲೆ ಸೇರದೋ?

ಯುಗಯುಗಾದಿ ಕಳೆದರೂ
ಯುಗಾದಿ ಮರಳಿ ಬರುತಿದೆ.
ಹೊಸ ವರುಷಕೆ ಹೊಸ ಹರುಷವ
ಹೊಸತು ಹೊಸತು ತರುತಿದೆ
ನಮ್ಮನಷ್ಟೆ ಮರೆತಿದೆ!

—ದ. ರಾ. ಬೇಂದ್ರೆ

ಪುಸ್ತಕ ಪ್ರಪಂಚ

ಮಾಸಿಕ

ಸಂಪುಟ ೪೭ ಸಂಚಿಕೆ ೭

ಏಪ್ರಿಲ್ ೧೯೯೭

ರಕ್ಷಾಪುಟ ಚಿತ್ರ :
ತಿಟ್ಟೆ ಕೃಷ್ಣ ಅಯ್ಯಂಗಾರ್

ಪರಿವಿಡಿ

PUSTAKA PRAPANCHA: Monthly

Published and printed by Karnataka State Adult Education Council, Mysore-6. Price : Rupees Six

ಬಿಡಿಪ್ರತಿ : ರೂ. ೬

ವಾರ್ಷಿಕ ಚಂದಾ : ರೂ. ೬೦

ಆಜೀವ ಸದಸ್ಯತ್ವ ಚಂದಾ :

ವ್ಯಕ್ತಿಗೆ : ರೂ. ೪೦೦

ಸಂಸ್ಥೆಗೆ : ರೂ. ೬೦೦

ಪ್ರಕಟಣೆ

ಕರ್ನಾಟಕ ರಾಜ್ಯ ವಯಸ್ಕರ ಶಿಕ್ಷಣ ಸಮಿತಿ

ಮೈಸೂರು–೫೭೦ ೦೦೬

ಟಿಟ್ಟೆ ಕೃಷ್ಣ ಅಯ್ಯಂಗಾರ್

ಕರ್ನಾಟಕದಲ್ಲಿ ಸಂಗೀತ ತಪಸ್ವಿಗಳು ಸಮೃದ್ಧವಾಗಿ ಜನಿಸುತ್ತಾರೆ. ಆದರೆ ಹುಟ್ಟಿದ ನೆಲದಲ್ಲಿ ಇವರಿಗೆ ಮನ್ನಣೆ ದೊರೆತು ತನ್ಮೂಲಕ ಸಾರ್ವತ್ರಿಕ ನೆಲೆಯಲ್ಲಿ ಪ್ರಖ್ಯಾತರಾದವರು ಪ್ರಾಯಶಃ ಇಲ್ಲ. ಮೈಸೂರು ವಾಸುದೇವಾಚಾರ್ಯ, ಬಿಡಾರಂ ಕೃಷ್ಣಪ್ಪ, ವೀಣೆ ಶೇಷಣ್ಣ ಮೊದಲಾದ ಸಾರ್ವಕಾಲಿಕ ಮಹಾಕಲಾವಿದರಿಗೆ "ಹೆಸರು" ಬಂದದ್ದು ಅವರು ಕರ್ನಾಟಕದ ಹೊರಗೆ, ವಿಶೇಷವಾಗಿ ತಮಿಳುನಾಡಿನಲ್ಲಿ, ತಮ್ಮ ಅಂಕಿತವನ್ನು ಛಾಪಿಸಿದ ತರುವಾಯವೇ. ನಮ್ಮವರ ಬಗ್ಗೆ ಅತಿ ಅಥವಾ ಅಂಧ ವ್ಯಾಮೋಹ ಬೇಕಾಗಿಲ್ಲ ನಿಜ, ಆದರೆ ಅವಜ್ಞೆ ಸಲ್ಲ. ತಮಿಳುನಾಡಿನಿಂದ ಬಂದವರೆಲ್ಲರೂ "ಅಮೋಘ"ರು ಸ್ಥಳೀಯರೆಲ್ಲರೂ "ಅನರ್ಹ"ರು ಎಂಬ ಕೀಳರಿಮೆ ಕರ್ನಾಟಕ ಸಂಗೀತ ಪ್ರಪಂಚದಲ್ಲಿ ಇಂದಿಗೂ (೧೯೯೭) ಅಂತರಗಂಗೆಯಾಗಿ ಪ್ರವಹಿಸುತ್ತಿದೆ. ಹಾಗೆಂದು ಇಲ್ಲಿಯ ಸಾಂಸ್ಕೃತಿಕ ಪರಿಸರ ಮತ್ತೆ ಮತ್ತೆ ಮಹಾಕಲಾವಿದರನ್ನು ರೂಪಿಸುವುದರಲ್ಲಿ ಕೃಪಣತೆ ಪ್ರದರ್ಶಿಸಿಲ್ಲ.

ತಮ್ಮ ಏರು ಬಾಳಿನ ದಿನಗಳಂದು ತೀರ ಅವಜ್ಞೆಗೊಳಗಾದ ಮಹಾಕಲಾವಿದರ ಸಾಲಿನಲ್ಲಿ ಟಿಟ್ಟೆ ಕೃಷ್ಣ ಅಯ್ಯಂಗಾರ್ಯರು ಸೇರಿದ್ದಾರೆ. ಅನುಭವಿಸಿ ಸಂತೋಷಪಟ್ಟು ಇನ್ನಷ್ಟು ಉತ್ಕೃಷ್ಟ ಸಂಗೀತವನ್ನು ಧಾರೆ ಎರೆಯಬಹುದಾಗಿದ್ದ—ಅಥವಾ ಪ್ರವಾಹೋಪಮವಾಗಿ ಹರಿಯಬಿಡಬಹುದಾಗಿದ್ದ—ತಾರುಣ್ಯದ ಕಾಲದಲ್ಲಿ ಅವರು ಇಲ್ಲಿಯವರಿಗೆ ಗೇಲಿಯ ವಸ್ತುವಾದರು. ಕಾರಣ? ಸ್ವಭಾವಾಂತರ್ಗತ ಮುಗ್ಧತೆ, ಸಂಗೀತದ ಹೊರಗೆ ಏನನ್ನೂ ಅರಿಯದ ಸರಳತೆ ಮತ್ತು ಜೀವನದ ವಕ್ರ ವಿಸಂಗತಿಗಳು ಅರ್ಥವೇ ಆಗದ ನಿಷ್ಕಪಟತೆ.

ಕಾವೇರೀ ನದಿ ಮೈಸೂರು ಮೂಲಕ ತಂಜಾವೂರಿಗೆ ಹರಿದು ಮುಂದೆ ಸಾಗುವ ಕರ್ನಾಟಕ–ತಮಿಳು ನಾಡುಗಳ ಜೀವನದಿ. ಟಿಟ್ಟೆವಂಶ ತಂಜಾವೂರಿನಿಂದ ಮೈಸೂರಿಗೆ ಹರಿದು ಬಂದ ಸಂಗೀತ ನದಿ. ಸಂಗೀತ ತ್ರಿಮೂರ್ತಿಗಳ ಆಡುಂಬೊಲ ತಂಜಾವೂರು ಜಿಲ್ಲೆ. ಅಲ್ಲಿಯ ಟಿಟ್ಟೆ ಎಂಬ ಹಳ್ಳಿಯಿಂದ ಹೊರಟು ಹೊಸ ಅವಕಾಶಗಳನ್ನು ಅರಸುತ್ತ ರಾಜರ ಮೈಸೂರಿಗೆ ಬಂದವರು ಕೃಷ್ಣ ಅಯ್ಯಂಗಾರ್ಯರ ಅಜ್ಜ, ಜೊತೆಯಲ್ಲಿ ಬಂದ ಅಣುಗನೇ ನಮ್ಮ ಟಿಟ್ಟೆಯವರ ತಂದೆ. ಹೀಗೆ ತಂಜಾವೂರಿನ ಶಿಶು ಮೈಸೂರಿನ ಉಲ್ಲಾಸಮಯ ಸಂಗೀತ ಪರಿಸರದಲ್ಲಿ ಬೆಳೆದು ಅರಳಿತು.

ಕೃಷ್ಣ ಅಯ್ಯಂಗಾರ್ಯರು ಹೇಳುವುದಿತ್ತು: "ನಾನು ಸಂಗೀತವಿದ ತಂದೆ ತಾಯಿಯರ ಮಗನಾಗಿ ಮೈಸೂರಿನ ಸಂಗೀತ ಪರಿಸರದಲ್ಲಿ ಆ ಸಂಗೀತ ಪರಂಪರೆಯನ್ನು ಮುಂದುವರಿಸಲೋ ಎಂದು ಹುಟ್ಟಿದೆ (೨೪–೧೧–೧೯೦೨)." ತಂದೆಯೇ ಮೊದಲ ಗುರು. ವೀಣೆ ಶೇಷಣ್ಣ. ಬಿಡಾರಂ ಕೃಷ್ಣಪ್ಪ ಮತ್ತು ವಾಸುದೇವಾಚಾರ್ಯ ಎಂಬ ಹಿಂದಿನ ಸಂಗೀತ ದಿಗ್ಗಜಗಳು ಈ ಎಳೆ ಪ್ರತಿಭೆಯ ವಿಕಾಸವನ್ನು ಆಲಿಸಿ ಲಾಲಿಸಿ ಪಾಲಿಸಿ ಬೆಳೆಸಿದರು: ಗಾತ್ರ ಶಾರೀರ, ಸ್ಫುಟ ಉಚ್ಚಾರಣೆ, ಅರ್ಥವರಿತು ಅನುಭವಿಸಿ ಹಾಡುವ ಗತ್ತು, ಹಾಡುವಾಗ ಪರಮ ಉತ್ಸಾಹ ಮತ್ತು ಜೊತೆಯಲ್ಲೇ ಅಪಾರ ವಿನಯ ಇವು ಟಿಟ್ಟೆಯವರ ಶಾಶ್ವತ ಆಸ್ತಿಗಳಾಗಿದ್ದುವು. ತೊಂಬತ್ತರ ಏರು ವಯಸ್ಸಿನಲ್ಲಿಯೂ ಧ್ವನಿವರ್ಧಕವಿಲ್ಲದೇ ಹಾಡಿ ಪಂಡಿತಪಾಮರರಿಂದ ಭಲೆ ಎನ್ನಿಸಿಕೊಳ್ಳಬಲ್ಲ ತಾಕತ್ತು ಇವರದು.

ಸಂಗೀತ, ಬಡತನ, ದೈನ್ಯ, ಅನ್ಯಾಶ್ರಯ ಮುಂತಾದವು ಅನ್ಯೋನ್ಯ ಸಂಬಂಧಿಗಳೋ ಏನೋ! ಮನೆಪಾಠ, ಶಾಲಾಮಾಸ್ತರಿಕೆ, ಶ್ರೀ ಜಯಚಾಮರಾಜೇಂದ್ರ

ಒಡೆಯರ ಸಾಹಚರ್ಯ ಮುಂತಾದವು ಶಿಟ್ಟಿಯವರ ಬದುಕು ಜಟಕಾಬಂಡಿಯನ್ನು ಉರುಳಿಸಿದುವು. ಎಲ್ಲಿಗೆ? ಇವರ ವೈದುಷ್ಯ ಗಮನಿಸಿದ ಒಡೆಯರ್ ಶಿಟ್ಟಿಯವರಿಗೆ ಆಸ್ಥಾನ ವಿದ್ವಾನ್ ಬಿರುದು ನೀಡಿ ಗೌರವಿಸಿದರು. ವಾಗ್ಗೇಯಕಾರ ಒಡೆಯರ ಕೃತಿಗಳ ಮೊದಲ ಪರೀಕ್ಷಕರು ಶಿಟ್ಟಿಯವರಾಗಬೇಕಾಯಿತು. ರಾಜರ ಸಮ್ಮುಖದಲ್ಲಿ ಶಿಟ್ಟಿಯವರು ಆ ಕೃತಿಗಳನ್ನು ಹಾಡಬೇಕು, ಅವುಗಳ ಸಂಗೀತ, ಸಾಹಿತ್ಯ, ಭಾವ ರಾಚನಿಕ ಶಿಲ್ಪ ಮುಂತಾದವನ್ನು ಕುರಿತು ವಿಮರ್ಶಿಸಬೇಕು—ಹೀಗೆ ಸಾಗಿತು ಆ ವಾಗ್ಗೇಯಕಾರ-ಗಾಯಕ ಸಾಹಚರ್ಯ. ತಮ್ಮ ಕೃತಿಗಳನ್ನು ಸಾರ್ವಜನಿಕವಾಗಿ ಹಾಡತಕ್ಕದ್ದಲ್ಲ ಎಂಬುದು ಒಡೆಯರ ಕಟ್ಟಪ್ಪಣೆ. ಈ ಕಾರಣದಿಂದ ಈ ಅನರ್ಘ್ಯ ರತ್ನಗಳು ಅರಮನೆಯ ಪೆಠಾರಿಯಿಂದ ಹೊರಗೆ ಇಣುಕಲೇ ಇಲ್ಲ.

ಒಡೆಯರ್ ಬದುಕಿದ್ದ ದಿನಗಳ ಮಾತು. ಶಿಟ್ಟಿಯವರ ಸಂಗೀತ ಚೆನ್ನೈ ನಗರದ ಒಂದು ವಿದ್ವತ್ಸಭೆಯಲ್ಲಿ ಏನಿಕೆಯಾಯಿತು. ಸ್ವಾತಿತಿರುನಾಳರ ಅನೇಕ ಅಪೂರ್ವ ಕೃತಿಗಳನ್ನು ಇವರು ಹಾಡಿ ಆ ವಿದ್ವಾಂಸರಿಂದ ಮೆಚ್ಚುಗೆ ಗಳಿಸಿದರು. "ಎಂಥ ಮಹಾ ವಾಗ್ಗೇಯಕಾರ ಸ್ವಾತಿ, ಎಂಥ ಮಹಾ ಸಂಗೀತಗಾರ ಶಿಟ್ಟಿ!" ಎಂಬ ಸಹಜ ಉದ್ಗಾರ ಅನುರಣಿಸಿದಾಗ "ನಮ್ಮ ಮೈಸೂರು ಮಹಾರಾಜರೇನು ಕಡಿಮೆ. ನೋಡಿ ಒಂದು ಸ್ಯಾಂಪಲ್" ಎಂದರು ಶಿಟ್ಟಿ ತುಸು ದಿಟ್ಟತನದಿಂದ, ಹಿಂದೋಳ ರಾಗದ "ಚಿಂತಯಾಮಿ ಜಗದಂಬಾ" ಹಾಡಿಯೇ ಹಾಡಿದರು. ಇದರಲ್ಲಿಯ ವಿಶಿಷ್ಟ ಬಂಧ, ರೂಪಕಗಳು, ಕಲ್ಪನೆ ತಳದಲ್ಲಿದ್ದ ಹಿಂದೋಳದ ವೈಭವ ಆ ರಸಿಕರಿಗೆ ಮಾತ್ರವಲ್ಲ ಅರಸಿಕರಿಗೆ ಕೂಡ ನೂತನ ಅನುಭವ ನೀಡಿದುವು. "ಮೈಸೂರು ಮಹಾರಾಜರ ಬೇರೆ ಕೃತಿಗಳನ್ನು ಹಾಡಿ" ಎಂದು ದುಂಬಾಲು ಬಿದ್ದರು. ಕಾಲಮೀರಿತ್ತು, ಹಾಡಲಿಲ್ಲ.

ಹೌದು, ಕಾಲ ಮೀರಿತ್ತು: ಶಿಟ್ಟಿಯವರು ಮೈಸೂರು ತಲಪುವ ಮೊದಲೇ ಈ "ಘೋರ ರಾಜದ್ರೋಹ ವಾರ್ತೆ" ಒಡೆಯರ ಕಿವಿಗೆ ಬಿದ್ದಿತ್ತು. ಮರುದಿನ ರಾಜರ ಸಮಕ್ಷಮ: "ನಮ್ಮ ಆಜ್ಞೆಯನ್ನು ಉಲ್ಲಂಘಿಸುವ ಧಾರ್ಷ್ಟ್ಯವೇ ನಿಮಗೆ?"

ಸಂಗೀತವನ್ನು ಯಾರು ರಕ್ಷಿಸುತ್ತಾನೋ ಅವನನ್ನು ಸಂಗೀತ ರಕ್ಷಿಸುತ್ತದೆ (ಧರ್ಮೋ ರಕ್ಷತಿ ರಕ್ಷಿತಃ) ಇದು ಶಿಟ್ಟಿಯವರ ಜೀವನ ಮಂತ್ರ. ರಾಜರ ಪ್ರಶ್ನೆ ಎಷ್ಟು ಅನಿರೀಕ್ಷಿತ ಕ್ರೂರವಾಗಿತ್ತೋ ಶಿಟ್ಟಿಯವರ ಉತ್ತರ ಅಷ್ಟೇ ಸಹಜ ಶಾಂತವಾಗಿತ್ತು: ನಡೆದ ಸಂಗತಿಯನ್ನು ನೇರ ವಿವರಿಸಿ "ನಮ್ಮ ಮಹಾರಾಜರು ಸ್ವಾತಿಯವರಷ್ಟೇ ಸಮರ್ಥರೂ ಪ್ರಾಯಶಃ ಒಂದು ಕೈ ಮೇಲು ಎಂದು ಸಾಧಿಸುವುದು ನನ್ನ ಉದ್ದೇಶವಾಗಿತ್ತು. ಇದರಲ್ಲಿ ನಾನು ಯಶಸ್ವಿಯಾದೆನೆಂದು ಹೆಮ್ಮೆ ಇದೆ. ಅಪರಾಧವಾಗಿದ್ದರೆ ಪ್ರಭುಗಳು ಶಿಕ್ಷೆ ವಿಧಿಸಬೇಕು. ಅನುಭವಿಸಲು ಸಿದ್ಧನಾಗಿದ್ದೇನೆ." ಒಡೆಯರ್ ನಸುನಕ್ಕು "ಹಾಡಿ, ಬೇಕಾದಷ್ಟು ಹಾಡಿ! ಹಾಡು ಹಕ್ಕಿಯನ್ನು ತಡೆಯಲು ನಾವ್ಯಾರು?"

ಚೆನ್ನೈ ಸಂಗೀತ ಅಕಾಡೆಮಿಯ ಪರಿಣತರ ಸಮಿತಿ ಸದಸ್ಯರಾಗಿದ್ದರು. ರಾಜ್ಯ ಸಂಗೀತ ನೃತ್ಯ ಅಕಾಡೆಮಿ ಇವರಿಗೆ ಪ್ರಶಸ್ತಿ ನೀಡಿ ಗೌರವಿಸಿತ್ತು. ಕರ್ನಾಟಕ ಸರ್ಕಾರ ಕನಕ–ಪುರಂದರ ಪ್ರಶಸ್ತಿ ಪ್ರಾರಂಭಿಸಿದಾಗ, ೧೯೯೨, ಆ ಪ್ರಶಸ್ತಿ ಮೊತ್ತಮೊದಲು ಶಿಟ್ಟಿಯವರಿಗೆ ಬಂದದ್ದು ಅರ್ಹತೆಗೆ ಸಂದ ಸಹಜ ಪುರಸ್ಕಾರ. ೧೬–೩–೧೯೯೭ ರಂದು ಈ ಹಾಡುಹಕ್ಕಿಯ ಭೌತಗಾನ ವಿಶ್ವಗಾನದಲ್ಲಿ ಲೀನವಾಯಿತು. ಆದರೆ ಅವರ ನೆನಪು ಚಿರಕಾಲ ಉಳಿದಿರುವುದು: "ಶ್ರುತಗಾನಂ ಅಭಿರಾಮಂ ಅಶ್ರುತಗಾನಂ ಅಭಿರಾಮತರಂ" (ಡಿವಿಜಿ).

ಜಿ. ಟಿ. ನಾರಾಯಣರಾವ್

ಏಪ್ರಿಲ್ ಒಂದು ಮೂರ್ಖರ ದಿನ ಏಕೆ?

ಗ. ನಾ. ಭಟ್ಟ
ಇ.ಡಬ್ಲ್ಯೂ. ಎಸ್. ೪೦, ೪ನೇ ಅಡ್ಡ ರಸ್ತೆ
ಗಂಗೋತ್ರಿ ಬಡಾವಣೆ, ಮೈಸೂರು-೯

ನಾಳೆ ಎಂಬುವದು ನಿನ್ನಿನ ಮನಸು
ಮುಂದೆ ಎಂಬುವದು ಇಂದಿನ ಕಣಸು
ಭೂತದಿಂದಲೇ ಭಾವವು ಬಂತು
ಭಾವವಿಲ್ಲದೇ ಉದ್ಭವವೆಂತು ?

ಉತ್ತರ ಭೂಖಂಡದಲ್ಲಿ ಏಪ್ರಿಲ್ ೧ ಕೊರೆಯುವ ಚಳಿಗಾಲದ ನಿರ್ಗಮನವನ್ನು ಸೂಚಿಸುತ್ತದೆ. "ವಸಂತ ಬಂದ ಋತುಗಳ ರಾಜ ತಾಬಂದ" ಆರಂಭವಾಗುವ ಪರ್ವ ಕಾಲವನ್ನು ಪ್ರತೀಕಿಸುತ್ತದೆ. ಬೆಳಕಿನ (ಹಗಲು) ಅವಧಿ ಇರುಳಿನದಕ್ಕಿಂತ (ಕತ್ತಲೆ) ಅಧಿಕವಾಗಿ ಮುಂದೆ ಹೆಚ್ಚು ಹೆಚ್ಚು ಆಗುವ ಶುಭ ಕಾಲಾಗಮನವನ್ನು ಸಾರುತ್ತದೆ. ಉಲ್ಲಾಸ ಆನಂದ ಸಂಭ್ರಮಾಚರಣೆ ಹೇಗೆ? ಒಂದು ವಿಧಾನ ಇತರರನ್ನು ಬೇಸ್ತು ಬೀಳಿಸುವುದು ಅಥವಾ ಮಂಗ ಮಾಡುವುದು. ಹೀಗೆ ಏಪ್ರಿಲ್ ೧ ಮೂರ್ಖರ ದಿನವಾಗಿ ರೂಪುಗೊಂಡಿರಬಹುದು.

ನಾಳೆ ಎನ್ನುವುದು ಯಾವಾಗಲೂ ಹೊಸ ದಿನವೇ. ಅದು ಪ್ರತಿ ದಿನವೂ ಬಂದು 'ನಿನ್ನೆ' ಹಳೆಯ ದಿನವಾಗುತ್ತದೆ. ಅಂತೆಯೇ ತಿಂಗಳುಗಳೂ, ವರ್ಷಗಳೂ ಹೊಸದಾಗಿ ಬರುತ್ತಲೇ ಹಳೆಯದಾಗುತ್ತಲೇ ಇರುತ್ತವೆ. ಈ ಉರುಳುವಿಕೆಗೆ ಕೊನೆ ಮೊದಲಿಲ್ಲ. ಇದನ್ನೇ ಕಾಲಚಕ್ರದ ಗತಿಯೆನ್ನುವುದು. ಈ ಕಾಲಚಕ್ರದ ಗತಿಯಲ್ಲಿ ೧೯೯೭ರ ಏಪ್ರಿಲ್ ಹೊಸ ವರ್ಷದ ಹೊಸ ಉಡುಗೆಯಲ್ಲಿ ಮತ್ತೆ ಬಂದಿದೆ. ಈ ಮಾಸದ "ಮೊದಲ ದಿನ, ಅನೇಕ ದೇಶಗಳಲ್ಲಿ, "ಮೂರ್ಖರ ದಿನ" ವೆಂದು ಆಚರಿಸಲ್ಪಡುತ್ತದೆ. ಬುದ್ಧಿವಂತರನ್ನು ಮೂರ್ಖರನ್ನಾಗಿಸುತ್ತಾ, ಮೂರ್ಖರನ್ನು ಬುದ್ಧಿವಂತರನ್ನಾಗಿಸುತ್ತಾ ಮೋಜು, ಸುಳ್ಳು, ಕುಚೇಷ್ಟೆಗಳಲ್ಲಿ ಮಿಂಚಿಸುತ್ತಾ, ವಿನೋದದಲ್ಲಿ ಪಾಲ್ಗೊಳ್ಳುವ ಈ ದಿನ ಮೂರ್ಖರ ದಿನವಾಗಲು ಕಾರಣವಾದರೂ ಏನು? ಇದರ ಹುಟ್ಟು ಹೇಗಾಯಿತು? ಇದಕ್ಕೇನಾದರೂ ಖಚಿತ ದಾಖಲೆಗಳಿವೆಯೇ? ಈ ಮುಂತಾದ ಪ್ರಶ್ನೆಗಳಿಗೆ ಉತ್ತರ ಹುಡುಕುವ ಯತ್ನ ಇಲ್ಲಿದೆ.

"ಮೂರ್ಖ ದಿನಾಚರಣೆ"ಯ ಹುಟ್ಟು ಹೇಗಾಯಿತೆನ್ನುವುದರ ಬಗ್ಗೆ ಖಚಿತ ದಾಖಲೆಗಳೇನೂ ಇಲ್ಲ. ಆದರೆ ಒಂದು ಕಾಲದಲ್ಲಿ ಹೊಸ ವರ್ಷದ ಆರಂಭವೆಂದು ಪರಿಗಣಿತವಾದ ಮಾರ್ಚ್ ಕೊನೆಯ ಅಥವಾ ಏಪ್ರಿಲ್ ಮೊದಲ ದಿನಕ್ಕೆ ಸಂಬಂಧಿಸಿದಂತೆ

ಮೂರ್ಖ ದಿನಾಚರಣೆಯ ಹುಟ್ಟಿಗೆ ಕಾರಣವನ್ನು ಕಾಣಬಹುದು.

ಕೆಲವು ಚರಿತ್ರೆಕಾರರು ಇದಕ್ಕೆ ಮೂಲವನ್ನು ಗ್ರೀಕ್ ಮತ್ತು ರೋಮನ್ ಪುರಾಣಗಳಲ್ಲಿ ಹುಡುಕಲು ಯತ್ನಿಸಿದ್ದಾರೆ.. ಡಿಮೀಟರ್ ಎಂಬ ಮಹಿಳೆ ಪ್ಲುಟೋವಿನಿಂದ ಅಪಹರಿಸಲ್ಪಟ್ಟ ತನ್ನ ಮಗಳು ಪರ್ಸ್‌ಫೋನಳನ್ನು ಹುಡುಕುತ್ತಾ ಕಣಿವೆಯೊಂದರ ಬಳಿ ಬರುತ್ತಾಳೆ. ಅಲ್ಲಿ ಅವಳಿಗೆ ಕೆಲವು ಹೆಣ್ಣು ಮಕ್ಕಳು ಅಳುತ್ತಿರುವುದರ ಮಾರ್ದನಿ ಕೇಳಿಬರುತ್ತದೆ. ಮೂರ್ಖರ ಹುಡುಕುವಿಕೆಯಂತೆ ಆಕೆ ಏನನ್ನೋ ವಿವರಿಸಬಹುದಾದ ಆ ಅಳುವ ಧ್ವನಿಯನ್ನು ಅನುಸರಿಸುತ್ತಾಳೆ. ಆದರೆ ಆಕೆ ಅಲ್ಲಿ ಪ್ರತಿಧ್ವನಿಯ ಹೊರತಾಗಿ ಏನನ್ನೂ ಕೇಳುವುದಿಲ್ಲ, ಕಾಣುವುದಿಲ್ಲ.

ಕೆಲವು ಸಂಸ್ಕೃತಿ ಅಧ್ಯಯನಶೀಲರು ಭಾರತದಲ್ಲಿ, ಮಾರ್ಚ್ ಕೊನೆಯ ವಾರದಲ್ಲಿ ಆಚರಿಸಲ್ಪಡುವ "ಹೋಲಿ ಹುಣ್ಣಿಮೆ" ಅಥವಾ "ಕಾಮನ ಹಬ್ಬ"ಕ್ಕೆ ಇದನ್ನು ಹೋಲಿಸಿದ್ದಾರೆ. ಹೋಲಿ ಹುಣ್ಣಿಮೆಯ ದಿನ ಭಾರತಾದ್ಯಂತ ಅದರಲ್ಲೂ ಉತ್ತರ ಭಾರತದಲ್ಲಿ ಹಾಡುತ್ತಾ, ಕುಣಿಯುತ್ತಾ, ಡೋಲು, ನಗಾರಿ ಬಾರಿಸುತ್ತಾ, ಒಬ್ಬರಿಗೊಬ್ಬರು ಬಣ್ಣವೆರಚುತ್ತಾ ಸಂತೋಷಪಡುವುದನ್ನು ನಾವು ಕಾಣುತ್ತೇವೆ. ಹಿರಣ್ಯಕಶಿಪುವಿನ ತಂಗಿ ಹೋಲಿಕಾ ಎನ್ನುವವಳು ತನ್ನ ಅಣ್ಣನ ಮಗ ಪ್ರಹ್ಲಾದನನ್ನೇ ಬೆಂಕಿಯಲ್ಲಿ ಸುಟ್ಟು ಕೊಲ್ಲಲು ಯತ್ನಿಸಿ ಅವಳೇ ಸುಟ್ಟುಹೋಗಿ ಲೋಕಕ್ಕೆ ಕ್ಷೇಮ ಉಂಟಾಗುತ್ತದೆ. ಅವಳನ್ನು ಗೆದ್ದ ಸಂತೋಷವನ್ನು ಆಚರಿಸುವುದಕ್ಕಾಗಿ ಆರಂಭವಾದ ಈ ಬಣ್ಣವೆರಚುವ ಕ್ರಿಯೆಗೂ, ಏಪ್ರಿಲ್ ಮೊದಲನೆಯ ದಿನ ಸುಳ್ಳು ಹೇಳಿ ವಂಚಿಸುವ ಕ್ರಿಯೆಗೂ, ಪರಸ್ಪರ ಸಾಮ್ಯತೆ ಇರುವುದು. ಎರಡೂ ಹಬ್ಬಗಳ ಆಚರಣೆಯಲ್ಲಿ ಸಿಗಬಹುದಾದ ಉಲ್ಲಾಸ, ರೋಮಾಂಚನ ಒಂದು ಕಾರಣವಾದರೆ, ಭಾರತದ ಹೊಸ ವರ್ಷಾರಂಭ 'ಯುಗಾದಿ' ಹಾಗೂ ಪಾಶ್ಚಾತ್ಯರ ಹೊಸ ವರ್ಷಾರಂಭ 'ಏಪ್ರಿಲ್ ೧' ಒಂದೇ ಸಮಯದಲ್ಲಿ ಘಟಿಸುವುದು ಇನ್ನೊಂದು ಕಾರಣವಾಗಿದೆ. ವಸಂತ ಋತುವಿನ ಆಗಮನದೊಂದಿಗೆ ಹೊಸ ವರ್ಷ ಆರಂಭವಾಗುವ ಪ್ರಕ್ರಿಯೆ ಪಾಶ್ಚಾತ್ಯ ಹಾಗೂ ಭಾರತೀಯರಲ್ಲಿ ಒಂದೆರಡು ವಾರಗಳ ಅಂತರದಲ್ಲೇ ಆಗುವುದು ಇಲ್ಲಿ ಸ್ಮರಣೀಯ.


ಇಂಥಹ ಸಾಂಪ್ರದಾಯಿಕ ಹಬ್ಬ ಪ್ರಾಚೀನ ಕಾಲದಿಂದ ಇದ್ದರೂ "ಮೂರ್ಖ ದಿನಾಚರಣೆ" ಬಹುಶಃ ಇತ್ತೀಚಿನ ಹುಟ್ಟು ಎಂದೇ ಹೇಳಬಹುದು. ೧೫೬೪ ರಲ್ಲಿ ಫ್ರೆಂಚರು ಜನವರಿ ಮೊದಲ ದಿನಾಂಕವನ್ನು ಹೊಸ ವರ್ಷವಾಗಿ ಆಚರಿಸಲು ನಿರ್ಧರಿಸಿದರು. ಅಲ್ಲಿಯವರೆಗೆ (ಜನವರಿ ೧ ಹೊಸ ವರ್ಷವೆಂದು ಆರಂಭವಾಗುವುದಕ್ಕೆ ಮೊದಲು) ಮಾರ್ಚ್ ಕೊನೆಯ ವಾರದಲ್ಲಿ ಬರುವ ಯೇಸುಕ್ರಿಸ್ತನ 'ಪುನರುತ್ಥಾನ' (ಈಸ್ಟರ್ ಹಬ್ಬ) ಮತ್ತು ಹೊಸ ವರ್ಷ ಆರಂಭ ಏಪ್ರಿಲ್ ೧ ಒಂದೇ ಸಮಯದಲ್ಲಿ ಬರುವುದರಿಂದ ಇವೆರಡನ್ನೂ ಒಟ್ಟಿಗೇ ಆಚರಿಸುವುದು ಸುಲಭವೆನ್ನುವ ಕಾರಣಕ್ಕಾಗಿ ಒಬ್ಬರಿಗೊಬ್ಬರು ಹೊಸವರ್ಷದ ಉಡುಗೊರೆ ಕೊಡುವುದು ರೂಢಿಯಲ್ಲಿತ್ತು. ಯಾವಾಗ ಕ್ಯಾಲೆಂಡರ [illegible]

ಆಗ ಚರ್ಚಿನವರು ಮತ್ತು ಸರಕಾರಿ ಅಧಿಕಾರಿಗಳು ಮೊದಲಿನಂತೆ ಅಂದರೆ ಏಪ್ರಿಲ್ ಒಂದನೆಯ ತಾರೀಖನ್ನೇ ಹಬ್ಬವಾಗಿ ಮುಂದುವರಿಸಲು ನಿರ್ಧರಿಸಿದರು.

ಒಂದು ವಿವರಣೆಯ ಪ್ರಕಾರ ಕ್ಯಾಲೆಂಡರ್ ಬದಲಾದದ್ದು ಫ್ರೆಂಚ್ ನಾಗರಿಕರು ಕೆರಳುವಂತಾಯಿತಂತೆ. ಅದಕ್ಕೆ ಪ್ರತೀಕಾರವಾಗಿ ಅವರು ಸರಕಾರಿ ಅಧಿಕಾರಿಗಳಿಗೆ ಸುಳ್ಳುಸಂದೇಶ ಕಳುಹಿಸಲು ನಿರ್ಧರಿಸಿದರಂತೆ. ಅದರ ಪರಿಣಾಮವೇ ಇಂದು ಜಗತ್ತಿನಾದ್ಯಂತ ಹಬ್ಬಿರುವ, ಒಬ್ಬರನ್ನೊಬ್ಬರು ನಂಬಿಸಿ ವಂಚಿಸುವ "ಮೂರ್ಖ ದಿನಾಚರಣೆ"ಯಾಗಿದೆ. ಇನ್ನೊಂದು ಹೇಳಿಕೆಯ ಪ್ರಕಾರ ನಿಜವಾದ ಹೊಸ ವರ್ಷ (ಏಪ್ರಿಲ್ ೧) ಯಾವುದಾಗಿತ್ತೋ ಅದೇ ದಿನ ಮಿತ್ರರನ್ನು ಭೇಟಿಯಾಗಿ ಅವರಿಗೆ ಗಲಿಬಿಲಿಯನ್ನುಂಟು ಮಾಡುವ ಸಣ್ಣ ಸಣ್ಣ ಉಡುಗೊರೆ ಕೊಡುವುದು, ಸುಳ್ಳು ಸುದ್ದಿ ಹಬ್ಬಿಸುವುದು ಮೊದಲಾದವು ಹಾಗೆಯೇ ಮುಂದುವರಿಯಿತೆಂದು ತಿಳಿದುಬರುತ್ತದೆ.

ಅನೇಕ ಸಂಸ್ಕೃತಿಗಳಲ್ಲಿ ಹೊಸ ವರ್ಷದ ದಿನ ಮೋಜು, ಚೆಲ್ಲಾಟ, ತಮಾಷೆಗಳಿಗೆ ದಿನವಾಗಿರುವುದನ್ನು ಕಾಣಬಹುದು.

"ಮೂರ್ಖ ದಿನಾಚರಣೆಯು" ಹುಟ್ಟು, ಬೆಳವಣಿಗೆ ಹೇಗಾಯಿತೆನ್ನುವುದು ಹೇಗಾದರೂ ಇರಲಿ. ಆದರೆ ಅದರ ಜನಪ್ರಿಯತೆ ಮಕ್ಕಳ ಸಾಮ್ರಾಜ್ಯವನ್ನು ಮೀರಿ ಅನೇಕ ದೇಶಗಳನ್ನು ವ್ಯಾಪಿಸಿದೆ. ಇಂದು ಹಲವು ವೃತ್ತಪತ್ರಿಕೆಗಳು, ಆಕಾಶವಾಣಿ, ದೂರದರ್ಶನದಂತಹ ಪ್ರಭಾವೀ ಮಾಧ್ಯಮಗಳು ಪರಿಷ್ಕೃತ ವೇದಿಕೆಯೊಂದಿಗೆ ವಿನೋದದಲ್ಲಿ ಪಾಲ್ಗೊಳ್ಳುವುದು ಅದರ ಅಂತಃಸತ್ವವನ್ನು ಜಗತ್ತಿಗೆ ಸಾರುವಂತಾಗಿದೆ.



ಪ್ರಜಾಪ್ರಭುತ್ವದಲ್ಲಿ ಬಲಿಷ್ಠನಿಗೆ ಇರುವ ಅವಕಾಶಗಳು ದುರ್ಬಲನಿಗೂ ಇರಬೇಕು. ಅದು ನಿಜವಾದ ಪ್ರಜಾಪ್ರಭುತ್ವ.

—ಮಹಾತ್ಮ ಗಾಂಧೀಜಿ

ಸ್ತ್ರೀ ಸಮಾನತೆ ಸಾಧ್ಯವೇ?

ಎ. ಪಿ. ಚಂದ್ರಶೇಖರ
'ಇಂದ್ರಪ್ರಸ್ಥ'
ಸಾವಯವ ಫಾರ್ಮ್ ಮತ್ತು ನರ್ಸರಿ
ಕಳಲವಾಡಿಗ್ರಾಮ, ಉದ್ಬೂರು ಅಂಚೆ
ಮೈಸೂರು-೫೭೦೦೦೮

ನಿಸರ್ಗಕ್ಕೆ ಗಂಡು ಹೆಣ್ಣು ಎಂಬ ಪೂರಕ (ಶೋಷಕ ಅಲ್ಲ) ಜೀವಿಗಳನ್ನು ಸೃಷ್ಟಿಸುವಲ್ಲಿಯ ಉದ್ದೇಶವೇನು? ಇದನ್ನು ಅರಿತು ತದನುಸಾರ ಬದುಕನ್ನು ರೂಪಿಸಿದರೆ ಶೋಷಣೆ, ಕ್ರೌರ್ಯ ಮುಂತಾದ ದೌರ್ಬಲ್ಯಗಳು ಮಾಯವಾಗುತ್ತವೆ. ಇದು ಸಾಧ್ಯವೇ? ವಾಚಕರ ಪ್ರತಿಕ್ರಿಯೆಯನ್ನು ನಿರೀಕ್ಷಿಸುತ್ತೇವೆ.

ಶೋಷಣೆ, ಸಮಾನತೆ, ಕೋಮುವಾದ ಮೊದಲಾದ ಘೋಷಣೆಗಳು ಇಂದಿನ ನಮ್ಮ ಅವ್ಯವಸ್ಥೆಯೊಳಗೆ ವ್ಯವಸ್ಥಿತವಾಗಿ ಸೇರಿಕೊಂಡಿವೆ. ಆದರೆ ನಮ್ಮಲ್ಲಿ ನಿಜವಾಗಿ ಸ್ತ್ರೀ ಶೋಷಣೆ, ಜಾತಿ ಅಸಮಾನತೆ ಮೊದಲಾದವು ಇವೆಯೇ? ಇದ್ದರೆ ಅವನ್ನು ಕಿತ್ತು ಹಾಕಲು ಸಾಧ್ಯವೇ? ಎಂಬ ವಿಷಯ ಕುರಿತಾಗಿ ಮರು ಚಿಂತನೆ ಅಗತ್ಯವಾಗಿದೆ.

ಹೆಣ್ಣು ಗಂಡಿನಷ್ಟೇ ಸಮರ್ಥೆ, ಯಾವುದರಲ್ಲೂ ಕಡಿಮೆ ಇಲ್ಲ. ಆದರೆ ಗಂಡು ಅವಕಾಶ ಕೊಡುವುದಿಲ್ಲ. ಹೆಣ್ಣನ್ನು ಕೇವಲ ಕಾಮದ ವಸ್ತುವಾಗಿಯೂ, ಮಕ್ಕಳನ್ನು ಹೆರುವ ಯಂತ್ರವಾಗಿಯೂ ಗುರುತಿಸಲಾಗಿದೆ. ಶೋಷಣೆ ನಡೆದಿದೆ. ಸ್ತ್ರೀಯರಿಗೆ ಪುರುಷರೊಡನೆ ಸಮಾನತೆ ಬೇಕು ಎಂಬುದು ಇಂದಿನ ಕೂಗು. ಸಮಾನತೆ ಬೇಕು ಎಂದು ಹೇಳುವಾಗ ಅಸಮಾನತೆ ಇದೆ ಎಂದು ಒಪ್ಪಿದಂತಾಯಿತಲ್ಲವೇ? ಹೆಣ್ಣು ಗಂಡಿನಷ್ಟೇ ಸಮರ್ಥೆ ಎಂದು ವಾದಿಸುವಾಗ, ಸಮಾನ ಸಾಮರ್ಥ್ಯ ಇರುವ ಹೆಣ್ಣು ಈ ಸಮಾಜದಲ್ಲಿ ಅಸಮಾನ ಆದದ್ದಾದರೂ ಹೇಗೆ? ಈ ಭೂಮಿಯ ವಿಕಾಸಪಥದಲ್ಲಿ ಅತ್ಯಂತ ವಿರಳವಾಗಿ ಅಲ್ಲಿ ಇಲ್ಲಿ ಮನುಷ್ಯ ಹುಟ್ಟಿ ಬೆಳೆದ. ಆಗ ಯಾವುದೇ ಸ್ಪರ್ಧೆ ಇರಲಿಲ್ಲ. ಎಲ್ಲರಿಗೂ ಸಮಾನ ಅವಕಾಶ ಇತ್ತು. ಇಂಥ ಸಮಾನ ಅವಕಾಶವಿದ್ದ ದಿನಗಳು ಒಂದೊಂದಾಗಿ ಕಳೆದು ಇಂದಿನ ದಿನಕ್ಕೆ ಮನುಕುಲ ಬಂದಿದೆ. ಸಮಾನತೆಯ ಅವಕಾಶವನ್ನು ಹೆಣ್ಣು ಕಳಕೊಂಡು ಇಂದು, ಅಸಮಾನೆ, ಶೋಷಿತೆ ಆಗಲು ಕಾರಣವಾದರೂ ಏನು? ಇದು ಗಂಡಿನ ತಪ್ಪೇ ಅಥವಾ ಹೆಣ್ಣಿನದೇ?

ಸಮಾನ ಅವಕಾಶ ಕೊಡಬೇಕು (ಶೋಷಿಸಬಾರದು) ಎಂದು ಹೇಳುವಾಗ— ಯೋಚನೆ ಮಾಡಿ—ಕೊಡುವ ಕೈ ಸದಾ ಮೇಲೆ. ತೆಗೆದುಕೊಳ್ಳುವ ಕೈ ಕೆಳಗೆ. ಹೆಣ್ಣು ತನ್ನ ಸಾಮರ್ಥ್ಯದಿಂದ ಪಡೆಯಲಾಗದ್ದನ್ನು ಗಂಡು ಉದಾರತೆಯಿಂದ ಕೊಡಬೇಕ

ಎಂದು ಹೇಳಿದಂತಾಗುವುದಿಲ್ಲವೇ ? ಅಂತ-ರಂಗಿಕವಾಗಿ ಅಸಾಮರ್ಥ್ಯವನ್ನು ಒಪ್ಪಿದಂತಾಗುವುದಿಲ್ಲವೇ ?

ರೂಪ, ಗುಣ, ಹಣ, ಬುದ್ಧಿ ಶಕ್ತಿಗಳಿಂದ ಹೆಣ್ಣು ಗಂಡಿಗೆ ಸಮಾನಳೇ ಇರಬಹುದು. ಆದರೆ ದೇಹಶಕ್ತಿಯಲ್ಲಿ ಎಂದೂ ಸಮಾನಳಾಗಲು ಸಾಧ್ಯವಿಲ್ಲ. ಯಾರ ತಪ್ಪೂ ಇಲ್ಲದ ಈ ಪ್ರಕೃತಿ ನಿಯಮದ ಮುನ್ನೆಲೆಯಲ್ಲಿ ಉಳಿದ ಎಲ್ಲದರಲ್ಲೂ ಸಮಾನಳಾದ ಹೆಣ್ಣಿಗಿಂತ ಗಂಡಿಗೆ ಸದಾ ಒಂದು ಹೆಜ್ಜೆ ಬಡ್ತಿ ಇದ್ದೇ ಇದೆಯಲ್ಲಾ. ಈ ನೈಸರ್ಗಿಕ ಅಸಮಾನತೆಯನ್ನು ತೊಡೆದು ಹಾಕುವ ಇಂದಿನ ಕೂಗು ಎಂದಾದರೂ ರಾಗವಾಗುವ ಸಾಧ್ಯತೆ ಇದೆಯೇ ? ಇದೆ ಎಂದಾದರೆ ನಮ್ಮ ಪಂದ್ಯಾಟಗಳಲ್ಲೆಲ್ಲಾ ಗಂಡು ಹೆಣ್ಣೆಂಬ ವಿಭಾಗ ಇರಬಾರದಲ್ಲಾ. ಬಸ್ಸು, ಸಾರ್ವ-ಜನಿಕ ಸ್ಥಳಗಳಲ್ಲಿ ಮಹಿಳೆಯರಿಗಾಗಿ ವಿಶೇಷ ವ್ಯವಸ್ಥೆ ಕೊಡಬಾರದಲ್ಲಾ. ಈ ವ್ಯತ್ಯಾಸದ ವ್ಯವಸ್ಥೆಯನ್ನು ಒಪ್ಪಿಕೊಳ್ಳುವುದರಿಂದ, ಅಸಮಾನತೆಯನ್ನು ಒಪ್ಪಿಕೊಂಡಂತಾಗುವುದಿಲ್ಲವೇ ?

ಇಂದಿನ ಸಮಾನತೆಯ ಕೂಗು ಕೈಯ ಎಲ್ಲಾ ಬೆರಳುಗಳನ್ನು ಒಂದೇ ಮಾಡುವ ಪ್ರಯತ್ನವಾಗಿದೆ. ಸಾಮರಸ್ಯವಿಲ್ಲದ ಸಮಾನತೆ ಶ್ರುತಿ ಸೇರದ ವಾದ್ಯಮೇಳ. ನಮ್ಮಲ್ಲಿ ಕೆಲವೊಂದು ಗಂಡಸರು ಆಹಾರ, ವಿಹಾರ, ನಿದ್ರಾ, ಮೈಥುನಗಳಲ್ಲಿ ಸ್ವಚ್ಛಂದತೆಯನ್ನು ಪ್ರಕಟಿಸುತ್ತಿದ್ದಾರೆ. ಇದರಿಂದಾಗಿ ಆ ಸಂಸಾರದ ಸಾರ ಹೋಗುತ್ತದೆ. ಇಲ್ಲೆಲ್ಲ ಗಂಡು ಸುಧಾರಿಸಬೇಕಾದದ್ದು, ಶಿಕ್ಷಿತನಾಗಬೇಕಾದದ್ದು ಅಪೇಕ್ಷಣೀಯ. ಬದಲಾಗಿ ಸಮಾನರಾಗುವ ಸಿಟ್ಟಿನಿಂದ, ಆಹಾರವಿಹಾರಾದಿಗಳಲ್ಲಿ ಹೆಣ್ಣು ಸ್ವಚ್ಛಂದತೆಯನ್ನು ಮೆರೆಯುವ ಸ್ಥಿತಿ ಉಪೇಕ್ಷಣೀಯ. ಗಂಡು ಪ್ಯಾಂಟು ಹಾಕುವುದರಿಂದ ಹೆಣ್ಣು ಪ್ಯಾಂಟು ಹಾಕಬೇಕು. ಗಂಡು ಸಿಗರೇಟು ಹೊತ್ತಿಸುವುದರಿಂದ ಹೆಣ್ಣು ತಾನೂ ಹಾಗಾಗಬೇಕು. ಗಂಡು ಕ್ಲಬ್‌ಗೆ ಹೋಗುತ್ತಾ ಮನೆಗೆ ತಡವಾಗಿ ಬರುವುದರಿಂದ ಹೆಣ್ಣು ಅದೇ ರೀತಿ ಬದಲಾಗಬೇಕು. ಹೀಗೆ ಸಮಾನತೆಯ ಗುಂಗಿನಲ್ಲಿ ಹೆಣ್ಣು ಗಂಡನ್ನು ಅನುಕರಿಸುವ ಪ್ರವೃತ್ತಿ ನಾಗರಿಕ ಸಮಾಜದಲ್ಲಿ ಇಂದು ಹೆಚ್ಚು ಹೆಚ್ಚಾಗಿ ಕಾಣಹೊರಟಿದೆ. ಈ ರೀತಿಯ ಅನುಕರಣೆ ಮತ್ತೆ ಗಂಡನ್ನು ಶ್ರೇಷ್ಠವೆಂದು ಒಪ್ಪಿದಂತಾಗುವುದಿಲ್ಲವೇ ? ಹೆಣ್ಣು ವಂಚಿತವಾಗಿದ್ದರೆ, ನಮ್ಮಲ್ಲಿ ಏನಾದರೂ ಸುಧಾರಣೆ ಆಗಬೇಕಿದ್ದರೆ, ಮೇಲೆ ಹೇಳಿದ ಗಂಡಸರ ವಿಕಾರಗಳನ್ನು ಅನುಕರಿಸುವುದರಿಂದ ಅಲ್ಲ. ಅನುಸರಿಸಬೇಕಾದ ಆದರ್ಶವನ್ನು ಹೊತ್ತ ಮಾನವತಾವಾದಿ ಗಂಡಸರು ನಮ್ಮಲ್ಲಿ ಬೇಕಾದಷ್ಟು ಇದ್ದಾರೆ. ಅಂಥ ಸಂಸಾರಗಳಲ್ಲಿ ಎಂದೂ ಹೆಣ್ಣು ಕೀಳಾಗಿ ಕಾಣಲ್ಪಡುವುದಿಲ್ಲ. ನಮ್ಮ ದೇವರುಗಳು, ಪುರಾಣ, ಚರಿತ್ರೆ, ಸಂಸ್ಕೃತಿ ಹಾಗೂ ಇಂದಿನ ವಾಸ್ತವಗಳಲ್ಲಿ ಹೆಣ್ಣನ್ನು ಎರಡನೇ ದರ್ಜೆಯಾಗಿ ಎಂದೂ ನಡೆಸಿಕೊಂಡದ್ದಿಲ್ಲ. ಅಪವಾದಗಳಿರಬಹುದು, ಹಾಗೆಯೇ ಗಂಡನ್ನು ಮೀರಿ ಹೆಣ್ಣು ವಿಕ್ರಮ ಸಾಧಿಸಿದ ಎಷ್ಟೋ ಉದಾಹರಣೆಗಳಿವೆಯಲ್ಲ. ಹೆಣ್ಣಿನ ಚಂಡಿತ್ವದಿಂದ ಸಂಸಾರ ಹಾಳಾದ ಅಪವಾದಗಳೂ ಇಲ್ಲವೇ? ಹೆಣ್ಣಿಗೆ ಗಂಡಿನ ಜೋಡಿ ಸಮಾನತೆ ಇಲ್ಲ ಎಂಬ ಇಂದಿನ ಚಿಂತನ, ಆಂದೋಲನ

ಗಂಡನ್ನೂ, ಹೆಣ್ಣನ್ನೂ ಪ್ರತ್ಯೇಕ ವರ್ಗವಾಗಿ ವಿಂಗಡಿಸುವಂತೆ ಕಾಣುತ್ತದೆ. ಈ ರೀತಿ ವಿಭಾಗೀಕರಿಸುವುದು ದುರಂತಕ್ಕೆ ಪಂಥಾಹ್ವಾನ. ಗಂಡು ಹೆಣ್ಣು ಹತ್ತಿರವಾಗುವುದರಿಂದ ಮಾತ್ರ ನಮ್ಮ ಸಂತಾನ, ಸಮಾಜ ವಿಕಾಸ ಹೊಂದಲು ಸಾಧ್ಯ. ಈ ಜಾಗೃತಿ ಗಲಾಟೆಯಿಂದ ಸಾಧ್ಯವಿಲ್ಲ. ಶಿಕ್ಷಣದಿಂದ ಶೀಲ, ಶೀಲದಿಂದ ಪ್ರೀತಿ, ಪ್ರೀತಿಯಿಂದ ಪರಿವರ್ತನೆ ಸಾಧ್ಯ. ಪ್ರೀತಿಯಿಂದ ಸಾಧಿಸಲಾಗದ್ದನ್ನು ಎಂದೂ ದ್ವೇಷದಿಂದ ಸಾಧಿಸಲು ಸಾಧ್ಯವಿಲ್ಲ. ಗಂಡ ಮಾರುತಿಯಲ್ಲಿ ತಿರುಗಾಡುತ್ತಾನೆ. ಹೆಂಡತಿಯೂ ಸ್ವತಂತ್ರವಾಗಿ ತಿರುಗಾಡಬೇಕು ಎಂಬ ಸಮಾನತೆಯಲ್ಲಿ ಇಂದು ಕೂಸು (ಸಮಾಜ) ಬಡವಾಗುತ್ತಿದೆ.

ಈ ದಿನಗಳಲ್ಲಿ ಹೆಣ್ಣು ಕಛೇರಿಗೆ ಕೆಲಸಕ್ಕೆ ಹೋಗುತ್ತಾಳೆ. ಇಲ್ಲಿ ಎರಡು ಉದ್ದೇಶಗಳಿವೆ. ಕಛೇರಿಯ ಎಲ್ಲಾ ಕೆಲಸಗಳನ್ನೂ (ಲಂಚ, ಮೋಸ, ಸೋಮಾರಿತನದಿಂದ ಹಿಡಿದು) ಗಂಡಿನಷ್ಟೇ ಸಮಾನವಾಗಿ, ಯಶಸ್ವಿಯಾಗಿ ಹೆಣ್ಣು ಮಾಡಬಲ್ಲಳು ಎಂಬುದು ಒಂದು. ಹೆಣ್ಣು ದುಡಿಯುವುದರಿಂದ ಸಂಸಾರದ ಸಿರಿ ಏರುವುದು ಎಂಬುದು ಇನ್ನೊಂದು. ಹೆಣ್ಣು ಮನೆಯಲ್ಲಿ ದುಡಿಯುವುದು ಶೋಷಣೆ ಎಂದೂ ಕಛೇರಿಯಲ್ಲಿ ದುಡಿಯುವುದು ಸಾಧನೆ ಎಂದೂ ನಾವು ತೀರ್ಮಾನಿಸುತ್ತೇವೆ. ಆದರೆ ಹೆಣ್ಣು ಹೀಗೆ ದುಡಿಯುವುದರಿಂದ ಕುಟುಂಬ, ಸಮಾಜ, ಒಟ್ಟಾಗಿ ಸಾಮರಸ್ಯ ಸರಿದುಹೋಗುವುದು. ಮನೆಯಲ್ಲಿ ಹಾಗೊಂದು ವೇಳೆ ಶೋಷಣೆ ಇದ್ದರೆ ಒಂದು ಗಂಡಿನಿಂದ. ಆದರೆ ಕಛೇರಿಯಲ್ಲಿ ಹತ್ತಾರು, ನೂರಾರು ಗಂಡುಗಳಿಂದ
(ಹಾಗೂ ಹೆಣ್ಣುಗಳಿಂದ) ಶೋಷಿಸಲ್ಪ
ವುದು ಆಧುನಿಕ ಹೆಣ್ಣಿಗೆ ಶೋಕಿ ಆಗಿ
ವುದು ದುರಂತ. ಮನೆಯಲ್ಲಿ ಒಂದು ಗಂ
ಪ್ರೀತಿ ತೋರಿದರಾಯ್ತು. ಕಛೇರಿಯ
ನೂರಾರು ಗಂಡುಗಳಿಗೆ ಪ್ರೀತಿ ತೋರ
ದಯನೀಯ ಸ್ಥಿತಿಯನ್ನು ವರ್ಣನೆ ಎನ
ವುದು ಬೀಭತ್ಸ. ಬಲಗೈ ನಮಗೆಲ
ಪ್ರಾಮುಖ್ಯ. ಊಟಕ್ಕೆ ಬಲಗೈ. ಶೌಚ
ಎಡಗೈ. ಹಾಗಾಗಿ ಎಡಗೈಗೆ ಅವಮಾ
ವಾಯಿತು ಎಂಬಂತಿದೆ ನಮ್ಮ ಚಿಂತ
ಹೆಣ್ಣು ಮನೆಯಲ್ಲಿ ದುಡಿದು ಮನೆ
ಕೊಳಕುಗಳನ್ನು ಸ್ವಚ್ಛ ಮಾಡುವ ಎಡ
ಪಾತ್ರ ವಹಿಸುವುದು ಶೋಷಣೆ ಎಂ
ದಾದರೆ, ಆ ಕೆಲಸ ಮಾಡುವವರು ಯಾರ
ಬಲಗೈ ಉಣ್ಣಬೇಕಾದರೆ, ನಿರ್ಮಲ ವಾ
ವರಣ ಇರಬೇಡವೇ? ಮನೆಕೆಲಸ ಗಂ
ಮಾಡಲಿ, ಹೆಣ್ಣು ಕಛೇರಿಗೆ ಹೋಗಿ ಸಂಪಾ
ಸಲಿ ಎಂದು ವಾದಿಸುವವರಿದ್ದಾರೆ.
ಹಾಗೇ ಆಗಲಿ, ಸುಸಂಬದ್ಧವಾಗಿದ್ದ ಒಂ
ವ್ಯವಸ್ಥೆಯನ್ನು ಬದಲಾಯಿಸಿದ್ದರಿಂ
ಏನು ಮಾಡಿದ ಹಾಗಾಯಿತು? ದೇಹಬ
ದಿಂದ ಸದಾ ಹೆಚ್ಚುಗಾರಿಕೆಯಲ್ಲಿರು
ಗಂಡಿನ ವಿರುದ್ಧ ಹಾಗೊಂದು ವೇಳೆ
ಬದಲಾವಣೆ ಸಾಧ್ಯವಾಯಿತೆಂದಾದ
ಮತ್ತೆ ಗಂಡಿನ ಶೋಷಣೆ ಆದಂತಾಗು
ದಿಲ್ಲವೇ?—ಅಂತೂ ಈ ಅಂತರ ಇದ್ದ
ಇರುತ್ತದಲ್ಲಾ.

ವಾಸ್ತವವಾಗಿ ಹೆಣ್ಣು ಹೊರಗೆ ದು
ಯಲು ಹೋಗುವುದರಿಂದ ಮತ್ತೆ ಗಂಡಿ
ಹೆಚ್ಚಿನ ಅವಕಾಶ ಕೊಟ್ಟಂತಾಗುತ್ತಿ
ಮನೆಯ ಸಂಪಾದನೆ ಹೆಚ್ಚಿದಂತೆ ಕಂಡರ
ನಿಜವಾಗಿ ಹೆಚ್ಚುವುದಿಲ್ಲ. ಮನೆಯ ಹ

...ರೊಂದು ಕೆಲಸಗಳಿಗಾಗಿ ಹಲವು ನಮೂ
...ೀಯ ಕೆಲಸದವರನ್ನು ನಂಬಬೇಕಾಗುತ್ತದೆ.
...ಈ ಕೆಲಸಗಳಿಗೆಲ್ಲಾ ದುಬಾರಿ ಕೂಲಿ ಕೊಡ
...ಬೇಕಾಗುತ್ತದೆ. ಪಾತ್ರೆ ತೊಳೆಯಲು ಆಳು,
...ಮಗುವಿನ ಕುಂಡೆ ತೊಳೆಯಲು ಆಳು,
...ಸಾ ಕಛೇರಿಗೆ ಹೋಗುವುದರಿಂದ ಹೆಚ್ಚು
...ವರಿಯಾಗಿ ಬಟ್ಟೆ, ಪ್ರಸಾದನಗಳಿಗಾಗಿ
...ಹೆಚ್ಚುವರಿ ಖರ್ಚು, ಕಾರ್ಖಾನೆ ಕಾರ್ಮಿಕರು,
...ಹೋಗುವ ಕೈನೆಟಿಕ್ ಹೋಂಡಾ ರಿಪೇರಿ
...ಗಾಗಿ ಮೆಕ್ಯಾನಿಕ್, ರುಚಿಕಟ್ಟಾದ ಅಡುಗೆ
...ಮಾಡಲು ಅವಕಾಶವಿಲ್ಲದ್ದರಿಂದ ರೆಡಿ
...ಮೇಡ್ ತಯಾರಕರು. ಹೆಣ್ಣು ಕೆಲಸಕ್ಕೆ
...ಹೋಗುವುದೂ ಒಂದು ಕಾರಣವಾಗಿ ನಮ್ಮ
...ಹಣವನ್ನೂ, ಆರೋಗ್ಯವನ್ನೂ ಹರಣ
...ಮಾಡುವ ಹೋಟೆಲುಗಳು ಬೀದಿ ಬೀದಿ
...ಗಳಲ್ಲಿ ತಲೆ ಎತ್ತುತ್ತಿವೆ. ಹೆಣ್ಣಿನ ಕಲಾ
...ನೈಪುಣ್ಯದ ಏಕಸ್ವಾಮ್ಯ ಕ್ಷೇತ್ರವಾದ
...ಅಡುಗೆಯನ್ನೂ ಹೀಗೆ ಹೋಟೆಲಿನ ಗಂಡು
...ಗಳಿಗೆ ಬಿಟ್ಟುಕೊಡುವ ಮೂಲಕ ನಮ್ಮ
...ಸಮಾಜ ಬಿಕ್ಕಟ್ಟಿನೆಡೆಗೆ ನುಗ್ಗುತ್ತಿದೆ.

ಉದ್ಯೋಗಿ ಮಹಿಳೆಯರು, ಅನಿವಾರ್ಯ
...ವಾಗಿ ತಮ್ಮ ಮಕ್ಕಳನ್ನು ದಾದಿಯರಿಗೆ
...ಕೊಡಬೇಕಾಗಿದೆ. ಕ್ರಶ್ ಸಂಸ್ಕೃತಿ ವಿಜೃಂಭಿ
...ಸುತ್ತಿದೆ. ಮನೆಯೆ ಮೊದಲ ಪಾಠಶಾಲೆ
...ಜನನಿತಾನೆ ಮೊದಲ ಗುರುವು ಎಂಬ ಆದರ್ಶ
...ಮಸುಕಾಗುತ್ತಿದೆ. ಯಾವ ಮಗುವಿಗೂ ಇದು
...ನನ್ನ ತಾಯಿ ಅಥವಾ ತಂದೆ ಎಂದು ಪ್ರತ್ಯಕ್ಷ
...ಅನುಭವದಿಂದ ಗೊತ್ತಾಗುವುದಿಲ್ಲ. ಇದು
...ತಾಯಿ ಎಂಬ ಬದಲಿಸಲಾಗದ ಭಾವನೆ
...ಬರುವುದು ತಾಯಿಯದಾದ ಅಮೃತಮಯ
...ಪ್ರೀತಿಯಿಂದ ಮಾತ್ರ. ಅಂಥ ತಾಯ್ತನದ
...ಪ್ರೀತಿಗೆ ತಿಲಾಂಜಲಿ ಇತ್ತು ಹಣದ ಕಡೆಗೆ
ಹೊರಟಾಗ ಬೆಳೆಯುವ ಮಗುವಿಗೆ
ದಾದಿಯೂ ಒಂದೇ ತಾಯಿಯೂ ಒಂದೆ.
ಹೆತ್ತವರು ಬ್ಯಾಂಕರ್‌ಗಳಾಗುತ್ತಾರೆ.
ಮಕ್ಕಳಲ್ಲಿ ಸರ್ವಕಾಲಿಕ ಮೌಲ್ಯಗಳು
ಸೊರಗಿ ಅಮದು ಸಂಸ್ಕೃತಿ, ಅಮಲು
ಸಂಸ್ಕೃತಿ ಪ್ರಾರಂಭವಾಗಲು ಸ್ತ್ರೀ
ಸಮಾನತೆಯ ಗೀಳು ಬಹು ಮುಖ್ಯ ಕಾರಣ
ಗಳಲ್ಲಿ ಒಂದಾಗಿದೆ. "ಜನನಿ ತಾನೆ ಮೊದಲ
ಗುರು." ಹೌದಲ್ಲಾ ಎಲ್ಲಾ ಗಂಡು ಹೆಣ್ಣು
ಗಳೂ ಹುಟ್ಟಿ ಬೆಳೆಯುವುದು ಹೆಣ್ಣಾದ
ತಾಯಿಯ ಮಡಿಲಲ್ಲೇ. ಒಂದೇ ತಾಯಿಯ
(ಗುರು!) ಮಡಿಲಲ್ಲಿ ಬೆಳೆದ ಗಂಡು
ವಿಜೃಂಭಿಸುವುದು, ಹೆಣ್ಣು ಮಸುಕಾವು
ದಾದರೂ ಯಾಕೆ? ಹಾಗಾದರೆ ತಪ್ಪು
ಎಲ್ಲಿದೆ? ಹೆಣ್ಣು ಪ್ರೀತಿಯ ತಾಯಿಯಾಗದೆ,
ಆದರ್ಶದ ಗುರುವಾಗದೆ ಎಲ್ಲೋ ಗುಮಾಸ್ತೆ
ಯಾಗುವ, ಗುಲಾಮಳಾಗುವ ರೀತಿಯಿಂದ
ನಮ್ಮ ಸಮಾಜದ, ನಮ್ಮ ಹೆಣ್ಣುಗಳ ಸ್ಥಿತಿ
ಇನ್ನಷ್ಟು ಬಿಗಡಾಯಿಸುವುದು. ಸುಧಾರಿಸ
ಲಾರದು.

ತಾಯಿಗೆ ಮನೆ ಕೆಲಸ. ತಂದೆಗೆ ಹೊರಗಿನ
ಕೆಲಸ. ತಂದೆ ಮನೆಯ ಯಜಮಾನ. ಈ
ಯಾಜಮಾನ್ಯದಿಂದಾಗಿ ತಾಯಿಯ ಧ್ವನಿಗೆ
ಮೌಲ್ಯ ಇಲ್ಲದ ಸ್ಥಿತಿ. ಹಾಗಾಗಿ ಶೋಷಣೆ
ತಲೆಮಾರುಗಳಿಂದ ನಡೆದಿದೆ. ಈ ಸ್ಥಿತಿ ಬದ
ಲಾಗಬೇಕು ಎಂದು ಕೂಗುವಾಗ—"ತಲೆ
ಮಾರುಗಳಿಂದ ಈ ಸ್ಥಿತಿ ಇದೆ" ಎಂಬ ಅಂಶ
ವನ್ನು ಇನ್ನೊಂದು ದೃಷ್ಟಿಕೋನದಿಂದ
ನಾವು ವಿಚಾರ ಮಾಡಬೇಕು. ಯಾವುದು
ಸತ್ಯವೋ, ಯಾವುದು ಸಹ್ಯವೋ ಅದು
ಮಾತ್ರ ಬಹುಕಾಲ ನಿಲ್ಲಬಲ್ಲುದು.
ಗಾಂಧಿಯ ಹೆಸರು ಬಹುಕಾಲ ನಿಲ್ಲುತ್ತದೆ

ಗಾಂಧಿ ಅನುಯಾಯಿಗಳ ಹೆಸರಲ್ಲ ಯಾಕೆ? ಅಂಥಾ ಸಾರ್ವಕಾಲಿಕ ಸಾಧನೆ ಗಾಂಧಿಯದು. ಹಾಗೆಯೇ ತಂದೆ-ತಾಯಿ-ಮಕ್ಕಳ ಕುಟುಂಬ ವ್ಯವಸ್ಥೆ ಬೇರೆ ವ್ಯವಸ್ಥೆಗಳಿಗಿಂತ ಹೆಚ್ಚು ಸತ್ವಯುತವಾದುದರಿಂದಲೇ ಅದು ನಡೆಕೊಂಡು ಬಂದಿದೆ. ಇದರಲ್ಲಿ ದೋಷ ಇರಬಹುದು. ಆದರೆ ಇನ್ನೊಂದು ವ್ಯವಸ್ಥೆಯಲ್ಲಿ ಇದಕ್ಕಿಂತ ಹೆಚ್ಚು ಕುಂದು ಇದೆಯಾದ್ದರಿಂದ ಈ ವ್ಯವಸ್ಥೆ ನಡೆದಿದೆ ಎಂದು ನಾವು ತರ್ಕಿಸಬೇಕಾಗಿರುವುದು. ಎಲ್ಲರೂ ಪ್ರಧಾನರಾಗುವ ಇಂದಿನ ಸ್ಥಿತಿ, ಇಂದಿನ ಕ್ಷೋಭೆ ನನ್ನ ತರ್ಕಕ್ಕೆ ಪೂರಕವಾಗಿರುವುದು (ಬಿಗಡಾಯಿಸಿರುವ ಮೌಲ್ಯಗಳು, ಪರಿಸರ ಇತ್ಯಾದಿ) ಬಹುನಾಯಕತ್ವ ಎಂದಿಗೂ ಎಲ್ಲೂ ಸಾಧ್ಯವಿಲ್ಲ. ಮನೆಯಲ್ಲಿ ಗಂಡನಿಂದ ಹೆಂಡತಿ ಶೋಷಿಸಲ್ಪಡುತ್ತಾಳೆ ಎಂದು ಹೇಳುವುದಾದರೆ, ಕಛೇರಿಯಲ್ಲಿ ಮೇಲಧಿಕಾರಿಯ ಮಾತಿನಂತೆ ನಡೆಯುವುದೂ ಶೋಷಣೆಯಲ್ಲವೇ? ಅಧಿಕಾರಿ, ಕಾರಕೂನ, ಪೇದೆ ಮೊದಲಾಗಿ ಕೆಲಸಗಳ ವರ್ಗಾವಣೆಯೂ ಶೋಷಣೆಯೇ ಅಲ್ಲವೇ? ಯಾರು ಯಾರ ಮಾತನ್ನೂ ಕೇಳಬೇಕಿಲ್ಲ ಎಂಬ ಸಮಾನತೆಯ ಪರಿಣಾಮವಾಗಿ, ಪ್ರತಿಭೆಗೆ ಪುರಸ್ಕಾರ, ಗೌರವ ಕೊಡದ ಏಕತೆಯ ಪರಿಣಾಮವಾಗಿ ಇಂದು ನಮ್ಮ ವಸ್ತುಗಳನ್ನೇ (ಸಾರ್ವಜನಿಕ ಸೊತ್ತು) ನಾವು ಸುಡುವ ಬಂಡಾಯ ನಡೆಯುತ್ತಿರುವುದು.

ಹುಲಿ ಆಡನ್ನು ತಿನ್ನುವುದು, ಆಡು ಹುಲ್ಲನ್ನು ತಿನ್ನುವುದು. ಹೀಗೆ ಒಂದು ಹಂತದ ಶೋಷಣೆಯೂ ನಿಸರ್ಗನಿಯಮವೇ ಆಗಿದೆ. ಗಂಡು ಹೆಣ್ಣುಗಳ ನಡುವೆ ಅಥವಾ ಜಾತಿ ಜಾತಿಗಳ ನಡುವೆ ನಿಜವಾಗಿ ಇರುವುದು ಇಂಥಾ ನೈಸರ್ಗಿಕ ಅಸಮಾನತೆಗಳೇ ಹೊರತು ರಾಕ್ಷಸೀಯ ದೌರ್ಜನ್ಯ ಅಲ್ಲ. ಇದು ಅಪಕ್ವ ಮನಸ್ಸುಗಳಿಂದ ಈ ನಿರ್ಮಾಣವಾದದ್ದು. ಅಸ್ಪೃಶ್ಯತೆಯ ವಿರುದ್ಧ ಹೋರಾಡಿದ ಗಾಂಧೀಜಿಯವರು ಕೂಡ ವರ್ಣಾಶ್ರಮ ಧರ್ಮ ಪ್ರಪಂಚ ಅತಿ ಸುಂದರ ಸಾಮಾಜಿಕ ವ್ಯವಸ್ಥೆ ಎಂದು ಕೊಂಡಾಡಿದರು. ಎರಡು ಗೆರೆಗಳು. ಒಂದು ಸಣ್ಣದು, ಇನ್ನೊಂದು ದೊಡ್ಡದು. ಸಣ್ಣ ಗೆರೆಯನ್ನು ದೊಡ್ಡದು ಮಾಡುವ ಸಮಾನತೆ ಅಪೇಕ್ಷಣೀಯ. ದೊಡ್ಡ ಗೆರೆಯನ್ನು ಸಣ್ಣ ಮಾಡುವ ಸಮಾನತೆ ಆಕ್ಷೇಪಣೀಯ.

ನಿರುದ್ಯೋಗ ನಮ್ಮಲ್ಲಿನ ದೊಡ್ಡ ಸಮಸ್ಯೆ ಎಂದು ಹೇಳಲಾಗುತ್ತಿದೆ. ಒಂದು ಕುಟುಂಬದಲ್ಲಿ ಗಂಡ, ಹೆಂಡತಿ ಇಬ್ಬರೂ ಕೆಲಸ ಮಾಡಿ ಸಂಪಾದನೆ ಮಾಡುವ ದೆಸೆಯಿಂದ ಇನ್ನೊಂದು ಕುಟುಂಬ ಉದ್ಯೋಗ ವಂಚಿತವಾಗುವುದು. ಭಿಕ್ಷೆ ಎತ್ತುವ ಸ್ಥಿತಿ ಬರುವುದು. ಒಂದು ಕುಟುಂಬ ಆರ್ಥಿಕವಾಗಿ ಅತಿ ಬಲ. ಇನ್ನೊಂದು ಅತಿ ದುರ್ಬಲವಾಗಿರುವುದು- ಒಂದು ಕುಟುಂಬದಲ್ಲಿ ಹೆಚ್ಚು ಹಣ ಸೇರಿದ ತಕ್ಷಣ ಅಲ್ಲಿ ಅನುಭೋಗಾತಿರೇಕತ್ವವೂ, ಪರಿಸರ ನಾಶವೂ ಘಟಿಸುವುದು. ಗಂಡು ಹೆಣ್ಣಿನ ಸಮಾನತೆ, ಜಾತಿಯ ಸಮಾನತೆಗಳ ಹೋರಾಟದಲ್ಲಿ ಆರ್ಥಿಕ ಅಸಮಾನತೆ ತಲೆದೋರುವುದು. ಇಂದು ಉಳ್ಳವರು, ಇಲ್ಲದವರು; ದೊಡ್ಡ ಮನೆಯವರು, ಗುಡಿಸಲಿನವರು; ಪೇಟೆಯವರು, ಹಳ್ಳಿಯವರು; ಹೀಗೆ ಹೊಸ ಹೊಸ ಅಸಮಾನತೆಗಳು ಬೃಹದಾಕಾರ ತಾಳು

ತ್ತಿವೆ. ಹಾಗಾದರೆ ಹೋರಾಟದಿಂದ ನಾವು ಕ್ಷೋಭೆ ನಿರ್ಮಿಸಿದ್ದರ ಹೊರತಾಗಿ ಏನು ಸಾಧಿಸಿದಂತಾಯಿತು?

ನಮ್ಮಲ್ಲಿ ಹೆಣ್ಣು ಎಂದೂ ಶೋಷಿತಳಲ್ಲ. ರಕ್ಷಿತಳು, ಗೌರವಾನ್ವಿತಳು ಎಂಬುದಕ್ಕೆ ವೇದ, ಪುರಾಣ, ಶಾಸ್ತ್ರಗಳ ಉದಾಹರಣೆಗಳನ್ನು ವಿದ್ವಾಂಸರು ಬೇಕಾದಷ್ಟು ಮಂಡಿಸುತ್ತಾರೆ. ಅವುಗಳ ಹೊರತಾಗಿ ಸದ್ಯದ ವಾಸ್ತವದ ಉದಾಹರಣೆ ನೋಡೋಣ. ಮೈಸೂರಿನ ತರಕಾರಿ ಮಾರುಕಟ್ಟೆ ನಂಜುಮಳಿಗೆಗೆ ಬನ್ನಿ (ಹೆಚ್ಚಿನ ಮಾರುಕಟ್ಟೆಯೂ ಹಾಗೆಯೆ.) ಇಲ್ಲಿ ಎಲ್ಲ ವ್ಯಾಪಾರ ಹೆಂಗಸರ ಕೈಯಲ್ಲಿ. ಗಿರಾಕಿಗಳಿಗೆಲ್ಲಾ ಗೊತ್ತಿರುವುದು ಈ ಹೆಂಗಸರನ್ನೇ. ಅವರ ಗಂಡಂದಿರು ಅನಾಮಕರು. ತರಕಾರಿ ಖರೀದಿಸಿ ತಂದು ಕೊಡುವುದು, ಹೆಚ್ಚಿನದನ್ನು ಸಾಗಿಸುವುದು ಇತ್ಯಾದಿ ವ್ಯವಹಾರ ಅವರು ಮಾಡುತ್ತಿರುತ್ತಾರೆ. ಹಾಗೂ ಅವರ ಕುಟುಂಬಗಳು ಮೇಲು ಕೀಳರಿಮೆ ಇಲ್ಲದೆ ನೆಮ್ಮದಿಯಾಗಿವೆ. ಗಂಡನನ್ನು ನೀನು ಎಂದು ಕರೆಯುವ ಸಮಾನತೆ ಅವರಿಗೆ ಸ್ವಾಭಾವಿಕ—ಶೋಕಿ ಅಲ್ಲ. ಹೀಗೆ ತಲೆಮಾರುಗಳಿಂದ ನಡೆದುಬಂದಿದೆ. ಇಲ್ಲಿ ಗಂಡಸರು ತಿರುಗಾಡುತ್ತಾರೆ, ಹೆಂಗಸರು ಕೆಲಸ ಮಾಡುತ್ತಾರೆ ಎಂಬ ವಿಷಬೀಜ ಬಿತ್ತಿ ಬದಲಾವಣೆಗೆ ಪ್ರಯತ್ನಿಸಿದರೆ ಏನು ಮಾಡಿದ ಹಾಗಾಯಿತು? ಇಪ್ಪತ್ತು ಸಾವಿರ ಜನಸಂಖ್ಯೆವುಳ್ಳ ಮೈಸೂರು ಸಮೀಪದ ಉದ್ಬೂರಿಗೆ ಬನ್ನಿ. ಅಲ್ಲಿ ಯಾವುದೇ ಗಂಡಸರ ಜೊತೆ ನೀವು ಜಗಳಾಡಬಹುದು. ಹೆಂಗಸರ ಜೊತೆ ಸಾಧ್ಯವಿಲ್ಲ. ಅವರ ಸ್ವರ ಅಷ್ಟು ಗಟ್ಟಿ ಇದೆ. ಹೆಂಗಸರಿಗೆ ಪ್ರಾಧಾನ್ಯ, ಸ್ಥಾನಮಾನ ಇಲ್ಲದಿರುತ್ತಿದ್ದರೆ ಆ ಸ್ವರ ಅವರಿಗೆ ಎಂದಾದರೂ ಬರಲು ಸಾಧ್ಯವಿತ್ತೇ? ಹಾಗಿದ್ದರೂ ಆ ಹಳ್ಳಿಯಲ್ಲಿ ಉಳುಮೆ ಮಾಡುವುದು ಗಂಡಸರು, ಬೀಜ ಬಿತ್ತುವುದು ಹೆಂಗಸರು. ಬೆಳಿಗ್ಗೆ ಹೊಲಕ್ಕೆ ಮೊದಲು ಹೋಗುವುದು ಗಂಡಸರು. ಪ್ರೀತಿಯಿಂದ ಊಟ ಕೊಂಡೊಯ್ಯುವುದು ಹೆಂಗಸರು. ಇಂಥಾ ಸನಾತನ ಪದ್ಧತಿ ಸರಿ ಇಲ್ಲವೆಂದು, ಸರಿಯಾಗಿರುವ ಕುಟುಂಬಗಳಲ್ಲಿ ಭೇದವನ್ನು ತರುವುದು ಸಭ್ಯತೆ ಆದೀತೇ?

ಮೇಲಿನ ಎಲ್ಲ ವಾದಗಳೂ ಜಾತಿಗೂ ಸಂಬಂಧಿಸಿದಂತೆ ಹೆಚ್ಚು ಕಮ್ಮಿ ಹೊಂದುವುವು. ಅಸ್ಪೃಶ್ಯತೆ ಮೊದಲಾದ ಅಸಂಗತಗಳು ಅನಿಷ್ಟಗಳೆಂಬುದನ್ನು ನಾನು ಅಲ್ಲಗಳೆಯುವುದಿಲ್ಲ. ಆದರೆ ಅವನ್ನು ನಿವಾರಿಸುವ ಆತುರದಲ್ಲಿ ಇಂದು ಹೊಸ ಅನಿಷ್ಟಗಳು ಹೆಚ್ಚು ಭೀಕರವಾಗಿ ಉದ್ಭವಿಸಿವೆಯಲ್ಲಾ. ಜಾತಿಯ ಹೆಸರಿನಲ್ಲಿ, ಮತದ ಹೆಸರಿನಲ್ಲಿ ನಡೆಯುವ ಗಲಭೆಗಳು ಜಾತೀಯತೆಯನ್ನು ಮತ್ತೂ ಮತ್ತೂ ಹೆಚ್ಚು ಮಾಡಿವೆಯೇ ಹೊರತು ಕಡಿಮೆಗೊಳಿಸಲಿಲ್ಲ. ಮೊದಲು ಜಾತಿಭೇದವಿದ್ದಿರಬಹುದು. ಜಾತಿದ್ವೇಷವಿರಲಿಲ್ಲ. ಮೊದಲು ಜಾತಿಜಾತಿಗಳೊಳಗೆ ಭೇದವಿದ್ದರೂ ಪ್ರೇಮವಿತ್ತು. ಸಾಮಾಜಿಕ ಕೆಲಸಗಳು ಎಲ್ಲರೂ ಸೇರಿ ಸಾಮರಸ್ಯದಿಂದ ನಡೆಯುತ್ತಿತ್ತು. ಇಂದು ಜಾತಿಯನ್ನು ಹೋಗಲಾಡಿಸುವ ಸೋಗಿನ ಪ್ರಯತ್ನಗಳು ಜಾತಿಯನ್ನು ಮತ್ತಷ್ಟು ಗಟ್ಟಿಗೊಳಿಸುತ್ತಿವೆ.

ಮೊದಲ ಜಾತಿಗಳ ಜೊತೆಗೆ ಈಗ ಹೊಸ ಜಾತಿಗಳು ಹುಟ್ಟಿರುವ ಬಗ್ಗೆ ಈಗಾಗಲೇ

ಪ್ರಸ್ತಾಪ ಮಾಡಿದ್ದೇನೆ. (ಉಳ್ಳವರು ಇಲ್ಲದವರು ಇತ್ಯಾದಿ) ಜಾತಿಜಾತಿಗಳ ಸಂಘಗಳು, ವೃತ್ತಿವೃತ್ತಿಗಳ ಸಂಘಗಳು, ಕಾರ್ಮಿಕ ಸಂಘಗಳು, ಭಾಷೆಯ ಸಂಘಗಳು ಇವೆಲ್ಲ ಇಂದು ಹೊಸ ಹೊಸ ಜಾತಿಗಳೆ. ಇವುಗಳೆಲ್ಲಾ ಕಟ್ಟುವ ಉದ್ದೇಶಕ್ಕಿಂತ ಹೆಚ್ಚಾಗಿ ವಿರೋಧಕ್ಕಾಗಿಯೆ ಸೃಷ್ಟಿಗೊಂಡಿವೆ. ನಮ್ಮ ಸಂಘಟನೆಗಳು ತಮ್ಮ ಹಕ್ಕಿಗಾಗಿ ಮಾಡುವ ಹೋರಾಟಗಳಲ್ಲೆಲ್ಲಾ ಸಾರ್ವಜನಿಕ ಆಸ್ತಿಗಳನ್ನು ಲೂಟಿ ಮಾಡುವ ಮನೋಧರ್ಮ ನಮ್ಮಲ್ಲಿ ಮನೆಮಾಡಿರುವ ಅತಂತ್ರತೆಯನ್ನು ಸೂಚಿಸುತ್ತದೆ. ಹಾಗಾಗಿ ಕಾಲಾಂತರದಲ್ಲಿ ನಿರ್ಣಯವಾದ ಲಿಂಗ ವ್ಯವಸ್ಥೆ, ಜಾತಿ ವ್ಯವಸ್ಥೆಗಳಲ್ಲಿ ಇರುವ ದೋಷಗಳು, ನಿಸರ್ಗದಲ್ಲಿ ಬೆಟ್ಟಗಳು, ಹಳ್ಳಗಳು; ಮುಳ್ಳುಗಳು, ಹೂಗಳು; ಇರುವಷ್ಟೇ ಸ್ವಾಭಾವಿಕವೂ ಅನಿವಾರ್ಯವೂ ಆಗಿದೆ ಎಂದು ಒಪ್ಪಿಕೊಳ್ಳುತ್ತಾ ಮುಳ್ಳಿನ ಗಿಡದಲ್ಲಿ ಬಿಡುವ ಗುಲಾಬಿ ಹೂವಿನಿಂದ ಮುದಗೊಳ್ಳಲು ಪ್ರಯತ್ನಿಸಬೇಕು.

ಎಲ್ಲ ಕುಟುಂಬಗಳಲ್ಲೂ ಹೆಣ್ಣಿನ ಮದುವೆಗೆ ಬಹಳ ಪ್ರಾಮುಖ್ಯ ಕೊಡುತ್ತಾರೆ. ಮದುವೆಯೇ ಜೀವನದ ಗುರಿ ಎಂದು ಕೊಂಡಿದ್ದಾರೆ. ಹೆಣ್ಣನ್ನು ಕೇವಲ ಕಾಮದ ವಸ್ತುವಾಗಿ, ಮಕ್ಕಳನ್ನು ಹೆರುವ ಯಂತ್ರವಾಗಿ ಕಂಡಿದ್ದಾರೆ. ಇದು ಶೋಷಣೆಯ ಪರಮಾವಧಿ ಎಂಬುದು ಸ್ತ್ರೀ ವಿಮುಕ್ತಿವಾದದ ಅತ್ಯಂತ ದೊಡ್ಡ ಅಸ್ತ್ರವಾಗಿರುವುದು. ಆದರೆ ಇದು ಅತ್ಯಂತ ಅವೈಜ್ಞಾನಿಕ ಚಿಂತನೆಯಾಗಿದೆ. ಗಂಡಿನ ಕಾಮದಿಂದ ಹಲವೊಂದು ಅನ್ಯಾಯಗಳಾಗಿರಬಹುದು. ಇದನ್ನು ಖಂಡಿಸಬೇಕಾದ್ದು ಸರಿಯೆ. ಆದರೆ ಕಾಮ ಇಲ್ಲದೇ ಇರುತ್ತಿದ್ದರೆ, ಹೆಣ್ಣಿಗೆ ಈಗ ಇರುವ ಸ್ಥಾನಮಾನವೂ ಇರುತ್ತಿರಲಿಲ್ಲ. ಎಲ್ಲ ಸಂಸಾರಗಳನ್ನೂ ಹಿಡಿದಿಟ್ಟಿರುವ ಶಕ್ತಿ ಕಾಮ. ಕಾಮವು ಪ್ರೇಮವಾಗಿ ಉನ್ನತಿ ಪಡೆಯಬೇಕೆಂಬುದು ಆದರ್ಶ ನಿಜ. ಈ ಆದರ್ಶದ ಒಸರು ಕಾಮದಲ್ಲಿದೆ. ಇಂದಿನ ಸಮಾನತೆ ಮುಕ್ತ ಕಾಮದ ಕಡೆಗೆ ಹರಿಯುತ್ತಿದೆ. ನಮ್ಮಲ್ಲಿ ಇಂದು ಏಕಪತ್ನಿತ್ವ (ಪತಿತ್ವ) ಹೇಗೆ ಕೌಟುಂಬಿಕವಾಗಿ, ಸಾಮಾಜಿಕವಾಗಿ ಏನೆಲ್ಲ ಮೌಲ್ಯಗಳಿವೆಯೋ ನಲ್ವತ್ತು ವರ್ಷಗಳ ಹಿಂದೆ ಇಂಗ್ಲೆಂಡ್ ಅಮೇರಿಕಾಗಳಲ್ಲೂ ಹೀಗೇ ಇದ್ದುವಂತೆ. ಆದರೆ ಇಂದು ಅಲ್ಲಿ ಏಕಸದಸ್ಯ ಕುಟುಂಬ ನಿರ್ಮಾಣವಾಗಿದೆ. ಮೂರು ಮಕ್ಕಳಲ್ಲಿ ಒಂದು ಅವಿವಾಹಿತ ತಾಯಂದಿರಿಗೆ ಜನಿಸಿದ್ದಾಗಿದೆ. ಇದೇ ಸ್ಥಿತಿ ನಮ್ಮಲ್ಲಿ ಇನ್ನು ನಲ್ವತ್ತು ವರ್ಷಗಳಲ್ಲಿ ಬರುತ್ತದೆಂದು ಚಿಂತಕರು ಭೀತಿ ತಾಳಿದ್ದಾರೆ.

ಕುಟುಂಬ ವ್ಯವಸ್ಥೆಯನ್ನು ಒಡೆಯುವುದರಿಂದ ಏನೂ ಮಾಡಿದಂತಾಗುವುದಿಲ್ಲ. ಆ ಸ್ಥಾನವನ್ನು ಶಿಶುವಿಹಾರಗಳು, ಆಯಗಳು; ಆಸ್ಪತ್ರೆಗಳು, ದಾದಿಯರು; ವೃದ್ಧಾಶ್ರಮಗಳು, ಸ್ವಯಂಸೇವಕರು ಹೀಗೆ ತುಂಬಬೇಕಾಗುತ್ತದೆ. ಗಂಡ ಮತ್ತು ಹೆಂಡತಿ ಕಾಮ ಮತ್ತು ಪ್ರೇಮ ಚಿಕಿತ್ಸೆಯಿಂದ ಸರಳ, ಸುಂದರ ಜೀವನ ನಡೆಸುವ ಬದಲು ಎಲ್ಲರೂ ಮನೋರೋಗಿಗಳಾಗುತ್ತಾ ರೋಗಿ ಮತ್ತು ವೈದ್ಯರು ಕೃತಕ ಹಾಗೂ ದುಬಾರಿ ಜೀವನ ನಡೆಸುವ ಸ್ಥಿತಿ ಬರುತ್ತದೆ.

ಕಾಮವು ಪ್ರೇಮವಾಗಿ ಬದಲಾಗಬೇಕು. ಆಗ ದೌರ್ಜನ್ಯಗಳು ನಡೆಯಲಾರವು ಎಂದೆ. ಪಾಶ್ಚಾತ್ಯ ಪ್ರೇರಣೆಯುಳ್ಳ

ಮುಕ್ತ ಕುಟುಂಬದೊಳಗೆ ಹೀಗೆ ಎಂದೂ ಆಗಲಾರದು. ಗಂಡ ಯಜಮಾನನಾದ ಕುಟುಂಬ ವ್ಯವಸ್ಥೆಯೊಳಗೆ ಮಾತ್ರ ಇದು ಸಾಧ್ಯ. ಹಲವು ದಿಕ್ಕುಗಳಿಂದ ಯೋಚಿಸುತ್ತಾ ಹೋದಾಗ ಹಿರಿ ಯಜಮಾನನಿರುವ ಅವಿಭಕ್ತ ಕುಟುಂಬವೂ ನಮ್ಮ ಸಾಮಾಜಿಕ, ಆರ್ಥಿಕ ಹೀಗೆ ಹಲವು ಸಮಸ್ಯೆಗಳಿಗೆ ಉತ್ತರವಾದೀತು ಎಂದೆನಿಸುತ್ತದೆ. ಹೆಂಡತಿ ಯಜಮಾನಳಾದರೇನು? ಎಂಬ ಪ್ರಶ್ನೆ ಕೂಡಲೇ ಬರುತ್ತದೆ. ಹೆಬ್ಬುಲಿಯನ್ನು ಎದುರಿಸುವ ಸಾಮರ್ಥ್ಯ ಎಂದೂ ಹೆಣ್ಣಿಗಿಲ್ಲ. ನಿಸರ್ಗನಿಯಮದಂತೆ ಹೆರಲೇಬೇಕಾದ ಹೆಣ್ಣಿನ ದೇಹಕ್ಕೆ ಇದು ಅಳವಲ್ಲ. ಒಬ್ಬ ಕಿತ್ತೂರು ಚೆನ್ನಮ್ಮನನ್ನ, ಒಬ್ಬ ಕಿರಣ್ ಬೇಡಿಯನ್ನು ಹಿಡಿದು ಮೌಲ್ಯಮಾಪನ ಮಾಡಲು ಸಾಧ್ಯವಿಲ್ಲ. ನಮ್ಮಲ್ಲಿ ಇಲಿಗೆ ಹೆದರುವ, ಹಲ್ಲಿಗೆ ಹಾರುವ ಜಿರಳೆಗೆ ಜಾಗ ಖಾಲಿ ಮಾಡುವ, ಕತ್ತಲೆಗೆ ಕಂಪಿಸುವ ಹೆಂಗಳೆಯರೇ ನೂರಕ್ಕೆ ತೊಂಭತ್ತು. ಹೀಗಿರುತ್ತಾ ಯಾಜಮಾನ್ಯ ಹೆಂಡತಿಗೆ ಬರುವುದು ಅಷ್ಟೊಂದು ಸುಲಭವಿಲ್ಲ. ಒಂದು ವೇಳೆ ಹೆಂಡತಿ ಗಂಡನಿಗಿಂತ ಸಮರ್ಥೆಯಾದ ಎಲ್ಲ ಸಂದರ್ಭಗಳಲ್ಲೂ ಯಜಮಾನಿಯಾಗಿ ಸಂಸಾರವನ್ನು ಸುಂದರವಾಗಿ ಸಾಗಿಸಿದ ಬೇಕಾದಷ್ಟು ಉದಾಹರಣೆಗಳಿವೆ. ಎಂದರೆ ಕುಟುಂಬಕ್ಕೆ ಒಬ್ಬ(ಳು) ಯಜಮಾನನಿರಬೇಕಾಗುವುದು. ಕುಟುಂಬಕ್ಕೆ ಒಬ್ಬ ಯಜಮಾನನಿರುವ ಅಸಮಾನತೆಯನ್ನು ಒಪ್ಪಿದರೆ ಮಾತ್ರ ಪ್ರೇಮಪೂರ್ಣ ವ್ಯವಸ್ಥೆ ಬರಲು ಸಾಧ್ಯ. ಹಾಗಲ್ಲದ ಒಡಕು ಮಡಕೆಯಲ್ಲಿ ಸಂಗೀತ ಹೊಮ್ಮಲು ಸಾಧ್ಯವಿಲ್ಲ.

ಈಗ ನಮ್ಮಲ್ಲಿ ಭೂಮಿ, ಗಾಳಿ, ನೀರು ಎಲ್ಲವೂ ಕಲುಷಿತಗೊಂಡಿವೆ. ಕಾಡು ನಾಶವಾಗಿ ನಮ್ಮ ಪರಿಸರ ಹರಕು ಬಟ್ಟೆಯಾಗಿದೆ. ಹುಲಿ, ಸಿಂಹ, ಕಪ್ಪೆ, ಕಾಗೆ, ಜೇಡ, ಏಡಿ ಹೀಗೆ ಹಲವೊಂದು ಜೀವಿಗಳು ವಿನಾಶ ಹೊಂದುತ್ತಿವೆ. ಪರಿಸರ ತಜ್ಞರು ಎಚ್ಚರಿಕೆಯ ಗಂಟೆ ಬಾರಿಸಿದ್ದಾರೆ. ಯಾಕೆ ಹೀಗಾಗಿದೆ? ನಮಗೆ ಇವುಗಳ ಬಗ್ಗೆ ಪ್ರೇಮವೂ ಇಲ್ಲ. ಕಾಮವೂ ಇಲ್ಲ. ನಮ್ಮ ಕಾಮ ಹಣದ ಕಡೆಗೆ. ಕಾಮವು ಪ್ರಕೃತಿ ಜನ್ಯ. ಪ್ರೇಮವು ವಿವೇಕಜನ್ಯ. ಪ್ರಕೃತಿಯ ಕುರಿತಾಗಿ ನಮಗೆ ಪ್ರೇಮವೇ ಬೇಕು. ಕೊನೇಪಕ್ಷ ಕಾಮವಾದರೂ ಇದ್ದಿದ್ದರೆ ಇಷ್ಟು ವಿಪರೀತ ಸ್ಥಿತಿ ಬರುತ್ತಿರಲಿಲ್ಲ. ಹೆಣ್ಣಿನ ಕುರಿತಾಗಿ ಗಂಡಿಗೆ ಪ್ರೇಮ ಬೇಕು (ಆದರ್ಶ) ಒಪ್ಪೋಣ. ಕೊನೇಪಕ್ಷ ಕಾಮವಾದರೂ ಇಲ್ಲದಿರುತ್ತಿದ್ದರೆ ಇಂದು ಹೇಗೆ ಪರಿಸರ ನಾಶವಾಗಿದೆಯೋ ಹಾಗೆ ನಮ್ಮಲ್ಲಿ ಹೆಣ್ಣು ಸಂತಾನವೇ ನಾಶವಾಗಿ ಮನುಕುಲವೇ ಸರ್ವನಾಶವಾಗುತ್ತಿತ್ತು. ಸಮಾನತೆಯ ಕೂಗು ಮಾಡಲು ಹೆಣ್ಣಿಗೆ ಅವಕಾಶವಾದರೂ ದೊರೆತಿರುವುದು ಪ್ರಕೃತಿ ಗಂಡಿನಲ್ಲಿ ವಿಶೇಷವಾಗಿ ಕಾಮವನ್ನು ತುಂಬಿದ್ದರಿಂದಲೇ. ಇಂಥಾ ಕಾಮವನ್ನು ಪ್ರೇಮವಾಗಿ, ಗೌರವವಾಗಿ ಬದಲಾಯಿಸುವ ಜವಾಬ್ದಾರಿ ಗಂಡಿಗಿಂತ ಹೆಚ್ಚಾಗಿ ಹೆಣ್ಣಿಗೇ ಇರುವುದು. ಎಲ್ಲಾ ಮಹಾಪುರುಷರ ಹಿಂದೆ ಮಹಾಸತಿ ಇದ್ದಾಳೆ ಎಂಬುದನ್ನು ಎಲ್ಲರೂ ಒಪ್ಪಿದ್ದಾರೆ. ಗೌರವವನ್ನೂ ಪಡೆದಿದ್ದಾಳೆ. ಸತಿಪತಿಯರಲ್ಲಿ ನಮ್ಮ ಸಮಾಜ ಎಂದೂ ಭೇದವೆಣಿಸಲಿಲ್ಲ. ಹೆಂಡತಿಯ ಹೊರತಾಗಿ ಎಲ್ಲ ಸ್ತ್ರೀಯರಲ್ಲೂ ತಾಯಿಯನ್ನು ಕಾಣುವ ವಿಶಾಲ ಸಂಸ್ಕೃತಿ ನಮ್ಮದು. ತಾಯಿಗಿಂತ ದೇವರಿಲ್ಲ, ಬಂಧುವಿಲ್ಲ ಎಂದು ಹೇಳಿ, ನಡೆ

ಯಾವ ವಿಶೇಷತೆ ನಮ್ಮದು. ಇಂಥಾ ಕೂಡು ನಡೆಯನ್ನು ಬಿಡುತ್ತಾ ಹೆರುವುದರಿಂದ, ಕೂಸಿಗೆ ಹಾಲೂಡುವುದರಿಂದ ದೇಹ ಕೆಡುತ್ತದೆಂದು ಚಿಂತಿಸುವ ಸಮಾನತೆ ಪರಿಸರ ವಿರೋಧಿಯಾಗಿದೆ. ತಲೆಮಾರುಗಳ ಅನುಭವದಿಂದ, ಕಾಮವನ್ನು ಪ್ರೇಮವಾಗಿಸುವ ಆದರ್ಶದಿಂದ ವಿಧಿವತ್ತಾದ ಮದುವೆಯನ್ನು ನಮ್ಮ ದಾರ್ಶನಿಕರು ಸಜ್ಜುಗೊಳಿಸಿದರು. ಎಲ್ಲ ಗಂಡು ಹೆಣ್ಣುಗಳ ಸಾರ್ಥಕತೆ ಇರುವುದೇ ಸುಂದರವಾದ ಮದುವೆಯಲ್ಲಿ, ಮಕ್ಕಳನ್ನು ಪಡೆಯುವುದರಲ್ಲಿ. ಇಂಥಾ ಮದುವೆಗೆ ಹೆಣ್ಣನ್ನೂ, ಗಂಡನ್ನೂ ಸಜ್ಜುಗೊಳಿಸುವ ಬದಲು ಯುದ್ಧಕ್ಕೆ ಸಜ್ಜುಗೊಳಿಸುವ ಆಧುನಿಕ ಪರಿ ಗಾಬರಿಗೊಳಿಸುವಂಥದ್ದು.

ಸರಿಯೋ ತಪ್ಪೋ ನಾನೊಂದು ಹೆಣ್ಣು ಗಿಳಿಯನ್ನು ಪಂಜರದೊಳಗೆ ಸಾಕಲು ತೊಡಗಿದೆ. ಏನಾಶ್ಚರ್ಯ! ಮೂರನೇ ದಿನದಿಂದ ಆ ಗೂಡಿನ ಸುತ್ತ ನಾಲ್ಕಾರು ಗಂಡು ಗಿಳಿಗಳ ನರ್ತನ, ಸಂಗೀತ. ಅವುಗಳ ನೋವು ಅರಿತರೂ ಅಗಲಲಾರದೆ ನಾವು—ಗಂಡ, ಹೆಂಡತಿ, ಮಕ್ಕಳು—ಸಮಾನತೆಯ ವಾದವಿಲ್ಲದೆ ಆ ಸೌಂದರ್ಯವನ್ನು ಆನಂದಿಸಿದೆವು. ಆಗ ನನ್ನ ಈ ಲೇಖನ ವಿಷಯಕ್ಕೊಂದು ಪ್ರಕೃತಿಯ ಪ್ರಮಾಣ ದೊರೆಯಿತು. ಆ ಹೆಣ್ಣು ಗಿಳಿಯನ್ನು ರಕ್ಷಿಸಲು ಗಂಡುಗಳು ಬಂದಿದ್ದವು. ಸೌಹಾರ್ದತೆಯ ಸೇತುವೆಯಾಗಿರುವ ಕಾಮಕ್ಕೆ ಆ ಮಟ್ಟಿಗೆ ಎಲ್ಲ ಹೆಣ್ಣುಗಳೂ ನಮೋ ಎನ್ನಬೇಕಾಗಿರುವುದು. ಯಾವ ಹಮ್ಮುಬಿಮ್ಮುಗಳಿಲ್ಲದ ಪ್ರಕೃತಿಯ ನಿಷ್ಕಳಂಕ ಜೀವಿಗಳು ನಮಗೆ ಪಾಠವಾಗಬೇಕು. ಈ ಪಾಠ ಓದಿ ಗಿಳಿ

ಯನ್ನು ಪಂಜರದೊಳಿಟ್ಟು ಪಾಪವನ
ನಾನು ಸ್ವಲ್ಪವಾದರೂ ಕಳೆದಿದ್ದೇನೆಂ
ಸಮಾಧಾನ. ಈ ಪ್ರಕರಣ ಇಲ್ಲಿಗೇ ನಿಲ್ಲು
ದಿಲ್ಲ. ನಮ್ಮ ಪಕ್ಕದ ಮನೆಯ ಪಂಜ
ದೊಳಗೆ ಗಂಡು ಗಿಳಿ ಖೈದಿ. ಇಲ್ಲಿಗೂ ಬಂದ
ಕೀರಿಡುವುದು ಗಂಡು ಗಿಳಿಗಳೆ. ಮುನ
ಗ್ಗುವ ಸಾಮರ್ಥ್ಯ ಯಾರಿಗಿದೆಯೋ ಅವ
ಮುಂದಾಳಾಗುವುದು ಸ್ವಾಭಾವಿಕವಾಗಿ
ಇಂಥಾ ಸ್ವಾಭಾವಿಕ ಸಾಮರ್ಥ್ಯ ಹೆಣ್ಣ
ಜಾಸ್ತಿ ಇರುವುದರಿಂದ ಜೇನುಕುಟುಂಬದ
ಹೆಣ್ಣಿಗೇ ಸ್ಥಾನ. ಮನೆವಾರ್ತೆಯ
ಮಕ್ಕಳ ಪಾಲನೆಯಲ್ಲಿ ಹೆಣ್ಣಿಗಿರು
ಸಾಮರ್ಥ್ಯ ಹಿರಿದು ಎಂಬ ಕಾರಣದಿಂದ
ಆ ರೀತಿ ನಮ್ಮಲ್ಲಿ ಕುಟುಂಬ ರೂ
ವಾಯಿತು. ಮಹಾಸತಿಯಾಗುವು
ಅವಮಾನವೆಂದು ಬಗೆಯುತ್ತಾ ಸ್ವಂ
ಯನ್ನು ಮೆರೆಯಲೋಸುಗ ಚಂಡಿಯಾ
ವುದರಲ್ಲಿ ಯಾವ ಅರ್ಥವೂ ಇಲ್ಲ.

ಒಟ್ಟಾರೆ ನಮ್ಮ ಸಮಾಜದಲ್ಲಿ, ಶಾ
ದಲ್ಲಿ ಹೆಣ್ಣಿಗೆ ಎಂದೂ ಅಗೌರವ ಇ
ಆದರೂ ಗಂಡು ಶಿಕ್ಷಿತನಾಗಬೇಕಾದ, ವಿವೇ
ಯಾಗಬೇಕಾದ ಒಡಹುಟ್ಟಿದ, ಒಡಗೂಡಿ
ಹೆಣ್ಣುಗಳಿಗೆ ಗೌರವವನ್ನೂ, ಸನ್ಮಾ
ನನ್ನೂ ಮಾಡಬೇಕಾದ ಹಲವು ಮನೆಗಳ
ನಮ್ಮಲ್ಲಿವೆ ಎಂಬುದನ್ನೂ ನಾನು ಒಪ್ಪು
ತ್ತೇನೆ. ಹಾಗೆಂದು ಶಿಕ್ಷಣದಿಂದ ಆಗಬೇಕಾ
ಈ ಕೆಲಸ ಸಂಘರ್ಷದಿಂದ ಆಗಲು ಸಾಧ
ವಿಲ್ಲ.

ನಮ್ಮ ಸನಾತನ ಆಚಾರ, ವಿಚಾರಗಳ
ಸ್ತ್ರೀ ಶೋಷಣೆಗಾಗಿ ಬೆಳೆದು ಬಂದವುಗಳಲ್ಲ
ಸ್ತ್ರೀ ರಕ್ಷಣೆಗಾಗಿ ಒಲಿದು ಬಂದ
ನಮ್ಮದು ಸ್ತ್ರೀರಕ್ಷಿತ ಸಮಾಜ. ಚಿ

ಅಮೂಲ್ಯವಾದದ್ದು. ಅದು ಆಭರಣಕ್ಕೆ ಇರುವುದೇ ಹೊರತು ಆಯುಧಕ್ಕಲ್ಲ. ನಮ್ಮ ಸಮಾಜದಲ್ಲಿ ಹೆಣ್ಣು ಆಭರಣ. ಗಂಡು ಆಯುಧ. ಇದನ್ನು ಅದಲು ಬದಲು ಮಾಡಲು ಸಾಧ್ಯವೂ ಇಲ್ಲ. ಅಗತ್ಯವೂ ಇಲ್ಲ. ಕಾಮದ ಒಳ್ಳೆಯ ಅಂಶವನ್ನು ಹೇಳಿದ್ದೆ. ಅದೇ ಕಾಮದ ಕೆಟ್ಟ ಮುಖದಿಂದ ರಕ್ಷಿಸುವ ಸುಸಂಗತ ಉದ್ದೇಶಗಳಿಂದಲೇ ಸಮಾಜದಲ್ಲಿ ಹೆಣ್ಣಿಗೆ ಕೆಲವು ಕಟ್ಟುಪಾಡುಗಳನ್ನು ಕೊಟ್ಟಿರುವುದು. ಹಾಗಾಗಿ ಈ ಸಂದರ್ಭ "ಪೆಣ್ಣಿನಿಸಿ ಪುಟ್ಟಿದುದೆನ್ನಯ ದೋಷಂ–ಕರುಣಾಳು ರಾಘವನಲಿ ತಪ್ಪಿಲ್ಲ" ಎಂದ ಸೀತೆಯ ಆದರ್ಶವನ್ನು ಹಿಡಿದು ಪ್ರಕೃತಿಗೆ ಮಣಿಯುವುದೇ ಸ್ತ್ರೀಯರಿಗೆ ಸಂಗತವೆನಿಸುವುದು. ಬಹಳ ದೊಡ್ಡ ಮನುಷ್ಯ! ನಮ್ಮ ದೇಶದ ಪ್ರಧಾನ ಮಂತ್ರಿಗೆ ಸಾಮಾನ್ಯ ಪ್ರಜೆಯಷ್ಟು ಸ್ವಾತಂತ್ರ್ಯ ಇಲ್ಲ. ಎಲ್ಲೆಂದರಲ್ಲಿ, ಹೇಗೆಂದರೆ ಹಾಗೆ ತಿರುಗಲು, ಮಾತನಾಡಲು ಅವಕಾಶವಿಲ್ಲ. ಹಾಗಾಗಿ ಪ್ರಧಾನಿ ಸಾಮಾನ್ಯನಿಗಿಂತಲೂ ಕೀಳೆಂದು ತರ್ಕಿಸಲಾದೀತೇ? ಹೆಣ್ಣಿಗೆ ನಮ್ಮ ಸಮಾಜ ಕೊಟ್ಟಿರುವುದು ಇಂಥಾ ಗೌರವಾನ್ವಿತ ರಕ್ಷಣೆಯನ್ನು. ಇದನ್ನು ಹಂಗಿನರಮನೆ ಎಂದು ವಾದಿಸುವುದು ನಮ್ಮೆಲ್ಲರ ದುರದೃಷ್ಟವೇ ಸರಿ.

ಕಟ್ಟುಪಾಡುಗಳನ್ನು ಹೆಣ್ಣಿನ ಮೇಲೆ ಹೇರಿದ್ದು ಗಂಡು ಎಂಬುದರಲ್ಲೂ ಸತ್ಯವಿಲ್ಲ. ಇದು ಹೆಣ್ಣೇ ಬಯಸಿ ಬಂದದ್ದು. ಹದ್ದು ಮೀರಿದ ಹೆಣ್ಣನ್ನು ಗಂಡಸರಿಗಿಂತ ಮೊದಲು ಗುರುತಿಸುವುದು ಹೆಂಗಸರೆ. ನಮ್ಮ ಸಂಸ್ಕೃತಿಯ ಮಹಾಕೋಟೆಯಲ್ಲಿ ಕೆಲವೊಂದು ಡೊಗರುಗಳಿರಬಹುದು. ಹಾಗೆಂದು ಕೋಟೆಯನ್ನು ಕೆಡವಿ ಹೊಸ ನಿರ್ಮಾಣ ಮಾಡುವುದು ಎಂದೂ ಸಾಧ್ಯವಿಲ್ಲ. ದೂಳೆಬ್ಬಿಸದೆ ಪೊಟರೆಗಳನ್ನು ಮುಚ್ಚುವುದೇ ಬುದ್ಧಿವಂತಿಕೆ, ಹೊಸ ನಿರ್ಮಾಣ ಬಿಡಿ. ಈಗಾಗಲೇ ಸೃಷ್ಟಿ ಮಾಡಿದ ಭಗ್ನಾವಶೇಷಗಳ ವಿಲೇವಾರಿಯೂ ನಮ್ಮಿಂದ ಸಾಧ್ಯವಾಗುತ್ತಿಲ್ಲ.

ಉಪಸಂಹಾರವಾಗಿ ಡಾರ್ವಿನ್ನನ ವಿಕಾಸವಾದದಂತೆ "ಸತ್ವವುಳ್ಳದ್ದು ಮಾತ್ರ ಉಳಿಯುವುದು." ಹಾಗೂ ಉಳಿಯುವಂಥಾ ಆ ಸತ್ವ ಸಂಘರ್ಷದಿಂದ ಬರಲಾರದು. ಸರಸದಿಂದ ಮಾತ್ರ ಬಂದೀತು.

ಸ್ನೇಹ ಮಾಡಿದರೆ ನಮಗಿಂತ ಶ್ರೇಷ್ಠರೊಡನೆ ಮಾಡಬೇಕು ಅಥವಾ ಸಮಾನರೊಡನಾದರೂ ಮಾಡಬೇಕು. ಇವೆರಡು ಸಾಧ್ಯ ಆಗದಿದ್ದಲ್ಲಿ ಒಂಟಿಯಾಗಿರುವುದೇ ಒಳ್ಳೆಯದು.

—ಭಗವಾನ್ ಬುದ್ಧ

ಸತ್ಯವನ್ನೇ ನುಡಿ

ಟಿ. ವಿ ಅನ್ನಪೂರ್ಣಮ್ಮ
ಎಂ.-೫, ಶ್ರೀಕರ, ಕುವೆಂಪುನಗರ
ಮೈಸೂರು-೫೭೦೦ ೨೩.

(ಒಪರಾ ವಿನಫ್ರೀಯಿಂದ ಒಂದು ಪಾಠ)

೧೯೮೫ನೇ ಜನವರಿಯಲ್ಲಿ ಶಿಕಾಗೋ ಟೆಲಿವಿಷನ್ ಸಂಸ್ಥೆಯು ಡಬ್ಲ್ಯೂ.ಎಲ್.ಎಸ್. ಟಿ.ವಿ.ಗೆ ತತ್ತರಿಸುತ್ತಿರುವ ಪ್ರಾತಃಕಾಲೀನ ಕಾರ್ಯಕ್ರಮವನ್ನು ಸಂಭಾಳಿಸಲು ಒಬ್ಬ ಯೋಗ್ಯ ವ್ಯಕ್ತಿಯ ಆವಶ್ಯಕತೆ ಇತ್ತು. ಪ್ರಾತಃಕಾಲದ ೯ ಗಂಟೆಯ ಕಾರ್ಯಕ್ರಮಗಳ ಸ್ಥಳೀಯ ಸ್ಪರ್ಧೆಯಲ್ಲಿ ಅವರಿಗೆ ತೃತೀಯ ಸ್ಥಾನ ಲಭಿಸಿತ್ತು. ಆದ್ದರಿಂದ ಅವರು ಬಾಲ್ಟಿಮೋರಿನ ಒಬ್ಬ ಸಾಧಾರಣ ವಾರ್ತಾವಾಚಕಿಯನ್ನು ಕರೆತಂದರು. ಈ ಮಹಿಳೆಯ ಹೆಸರು ಒಪರಾ ವಿನಫ್ರೀ ಎಂದಿತ್ತು.

ಒಪರಾಳಲ್ಲಿ ಅತಿಥಿಗಳು, ರೇಡಿಯೋ ಶ್ರೋತೃಗಳು ಮತ್ತು ಟಿ. ವಿ. ದರ್ಶಕರೊಡನೆ ತನ್ನನ್ನು ತೊಡಗಿಸಿಕೊಳ್ಳುವ ಅಪರೂಪದ ಸಹಜ ಸಾಮರ್ಥ್ಯವಿತ್ತು. ನಿರ್ಣಯಿಸಿದ ಕೆಲವೇ ತಿಂಗಳಲ್ಲಿ ಪ್ರದರ್ಶನ ಪ್ರಥಮ ಸ್ಥಾನ ಗಿಟ್ಟಿಸಿತು. ೧೯೮೫ರಲ್ಲಿ ಈ ಕಾರ್ಯಕ್ರಮಕ್ಕೆ 'ದಿ ಒಪರಾ ವಿನಫ್ರೀ ಶೋ" ಎಂದು ಹೆಸರಿಸಲಾಯಿತು. ೧೯೮೬ರಲ್ಲಿ ರಾಷ್ಟ್ರೀಯ ಮಟ್ಟದಲ್ಲಿ ಇದನ... ವ್ಯವಹಾರ ಸಂಘವಸ್ನಾಗಿ ಮಾ... ಲಾಯಿತು. ಒಪರಾಗೆ ೧೯೮೬-೮೭ರ... "ಎಮಿ" ಪುರಸ್ಕಾರ ನೀಡಲಾಯಿತು. ... ಪುರಸ್ಕಾರ "ಯು.ಎಸ್. ಅಕಾಡೆಮಿ... ಫಾರ್ ಟೆಲಿವಿಷನ್ "ಅಂಡ್ ಆರ್ಟ್ಸ್... ಪ್ರಸಾರ ಕ್ಷೇತ್ರದಲ್ಲಿ ಸಾಧಿಸಿದ ಸಾಧನೆಗಾ... ಪ್ರತಿವರ್ಷ ಕೊಡಲ್ಪಡುತ್ತದೆ. ಸುಮಾ... ಎರಡು ಕೋಟಿ ನಿಷ್ಠಾವಂತ ದರ್ಶಕ... ಆಕೆಯ ಪ್ರಾತಃಕಾಲೀನ ಪ್ರದರ್ಶನವನ್ನು ಅತ್ಯಂತ ಜನಪ್ರಿಯ ಕಾರ್ಯಕ್ರಮವನ್ನಾ... ಮಾಡಿದ್ದಾರೆ.

ಆದರೆ ಆ ಗೆಲುವು ಆಕಸ್ಮಿಕವಲ್ಲ. ಒಪ... ತನ್ನ ಕಾರ್ಯಕ್ರಮವನ್ನು 'ಒಂ... ರೀತಿಯ ಸೇವೆ' ಎನ್ನುತ್ತಾಳೆ. ಆದರೆ ಇ... ಅದಕ್ಕಿಂತ ಮಿಗಿಲಾದುದು. ಪ್ರಸಾರ... ಮುಂಚೆ ಆಕೆ ಕಾರ್ಯಕ್ರಮದಲ್ಲಿ ಭಾ... ವಹಿಸುವ ಅತಿಥಿಗಳಿಗೆ; ಆತ್ಮೀಯತೆ... ಹಾಗೂ ಪ್ರಭಾವಪೂರ್ಣ ಸಲಹೆ ಕೊ... ತ್ತಾಳೆ," "ಸತ್ಯವನ್ನೇ ನುಡಿ." ಅ... ಕಣ್ಣಲ್ಲಿ ಕಣ್ಣಿಟ್ಟು ಸಹಜ ಸ್ವರದಲ್ಲಿ ...

೧೯೯೦ನೇ ಫೆಬ್ರವರಿ ತಿಂಗಳ ಹಿಂದಿ ಮಾಸಿಕ "ಸರ್ವೋತ್ತಮ"ದಲ್ಲಿ ಪ್ರಕಟ... ಜಾನ್ ಕಲ್ಲಿನ್‌ರವರ "ಸಚ್ ಬೋಲೋ" ಎಂಬ ಲೇಖನದ ಹಿಂದಿ ಅನುವಾದ.

ಹೇಳುತ್ತಾಳೆ. "ಇದು ಸದಾಕಾಲ ನಿನ್ನನ್ನು ರಕ್ಷಿಸುವುದು."

ಒಪೆರಾ ಅನೇಕ ಕಷ್ಟಗಳನ್ನು ಎದುರಿಸಿ ಈ ಪಾಠ ಕಲಿತಿದ್ದಾಳೆ. ತನ್ನ ಸಂದರ್ಶನಗಳಲ್ಲಿ, ನಿರ್ಭೀತ ಪ್ರಾಮಾಣಿಕತೆಗೆ ಹೆಸರಾದ ೩೫ ವರ್ಷದ ಈ ಮಹಿಳೆ ಒಮ್ಮೆ ಸಂತೋಷಕ್ಕಾಗಿ ಸುಳ್ಳು ಹೇಳಿ ಅಪಯಶಸ್ಸು ಗಳಿಸಿದಾಗ ಈಕೆಗೆ ಸತ್ಯದ ಮಹತ್ವ ಗೊತ್ತಾಯಿತು.

ಒಪೆರಾ ಹೇಳುವಂತೆ ಅವಳು ಕ್ರೆಪೀಯೆಸ್ಕೋದ ೧೮ ವರ್ಷದ ಕೃಷಿಕಳ ಸಂತಾನವಾಗಿದ್ದಳು. ಪೋರ್ಟ್ ದುಕರ್‌ನ ಸೈನಿಕ ಬೆರವಾನ್ ವಿನ್‌ಫ್ರೀಗೆ ಹಲವು ದಿನಗಳವರೆಗೆ ವೆರನೀತಾ ಆತನ ಸಂತಾನಕ್ಕೆ ಜನ್ಮ ಕೊಟ್ಟಿದ್ದಾಳೆ ಎಂಬುದು ಗೊತ್ತಿರಲಿಲ್ಲ.

ಮಗುವಿಗೆ ಬೈಬಲ್‌ನ ರೂಥ್‌ಳ ಪತಿಯ ಸಹೋದರನ ಪತ್ನಿ ಒಪರಾಳ ಹೆಸರನ್ನು ಇಡಲಾಗಿತ್ತು (ನರ್ಸ್ ಜನ್ಮ ಪ್ರಮಾಣ ಪತ್ರದಲ್ಲಿ ಒರಪಾ ಎಂಬುದನ್ನು ಒಪರಾ ಎಂದು ಬರೆದುಬಿಟ್ಟಿದ್ದಳು) ಸ್ವಲ್ಪ ಸಮಯದ ನಂತರ ವೆರನೀತಾಳೇ ಮಗುವನ್ನು ತನ್ನ ಅಜ್ಜಿಯ ರಕ್ಷಣೆಯಲ್ಲಿ ಬಿಟ್ಟು ಕೆಲಸ ಹುಡುಕಿಕೊಂಡು ಮಿಲವಾಕಿಗೆ ಹೋದಳು. ಅಲ್ಲಿ ತರಬೇತಿ ಇಲ್ಲದ ಅಶ್ವೇತ ಮಹಿಳೆಯರಿಗೆ ಪರಿಚಾರಿಕೆಯ ಕೆಲಸ ಸಿಗುವ ಸಂಭವ ಇತ್ತು.

ಜಮೀನಿನಲ್ಲಿ ಬೇಲಿಯಲ್ಲಿರುತ್ತಿದ್ದ ಹಂದಿಗಳಿಗೆ ಉತ್ಸಾಹಭರಿತ ಭಾಷಣಗಳಿಂದ ತನ್ನ ಪ್ರಸಾರಣ ಜೀವನವನ್ನು ಪ್ರಾರಂಭಿಸಿದಳು. ಒಪರಾ ಮೂರರ ಹರೆಯದಲ್ಲಿ ಆಕೆ ಚರ್ಚಿನಲ್ಲಿ ಕವಿತಾವಾಚನ ಮಾಡತೊಡಗಿದಳು. ಶಾಲೆಗೆ ಸೇರುವ ಹೊತ್ತಿಗೆ ಆಕೆ ಸಾಕಷ್ಟು ಓದಿ ಬರೆಯಬಲ್ಲವಳಾಗಿದ್ದಳು. ಆಕೆ ತನ್ನ ಅಧ್ಯಾಪಕಿಗೆ ಒಂದು ಟಿಪ್ಪಣಿ ಕಳುಹಿಸಿದಳು. "ಪ್ರಿಯ ಮಿಸ್. ನ್ಯೂ, ನಾನು ಕಿಂಡರ್ ಗಾರ್ಟನ್‌ಗೆ ಸರಿಹೊಂದುವುದಿಲ್ಲವೆಂದು ನನ್ನ ಅನಿಸಿಕೆ." ಇದನ್ನು ಒಪ್ಪಿ ಮಿಸ್, ನ್ಯೂ, ಆಕೆಯನ್ನು ಪ್ರಥಮ ತರಗತಿಯಲ್ಲಿ ಕುಳ್ಳಿರಿಸಿದಳು. ಆಕೆಯ ಸಹ ಪಾಠಿಗಳು ಹೊಟ್ಟೆಕಿಚ್ಚಿನಿಂದ ಆಕೆಯನ್ನು "ದ ಪ್ರೀಚರ್" ಎಂದು ಕರೆಯಲಾರಂಭಿಸಿದರು.

"ಎಂಟು ವರ್ಷದ ವಯಸ್ಸಿನಿಂದಲೇ ನಾನು ಅತ್ಯುತ್ತಮ ಭಾಷಣಕಾರಳಾದೆ. ಪ್ರತಿಯೊಂದು ಮಹಿಳಾ ಸಮೂಹ, ಔತಣಕೂಟ, ಧಾರ್ಮಿಕ ಸಮಾರಂಭಗಳಲ್ಲಿ ಮಾತನಾಡುತ್ತಿದ್ದೆ. ಅಲ್ಲಲ್ಲಿ ಹೋಗುತ್ತಿದ್ದೆ ಎಲ್ಲಾದರೂ ಮಾತನಾಡಬೇಕಾದ ಆವಶ್ಯಕತೆ ಇದ್ದಲ್ಲಿ ಅವರು ನನ್ನನ್ನು ಆಹ್ವಾನಿಸುತ್ತಿದ್ದರು. ಬಾಲ್ಯದಿಂದಲೇ ರೂಢಿಸಿಕೊಂಡಿದ್ದ ತನ್ನ ಪ್ರಭುತ್ವಪೂರ್ಣ ಧ್ವನಿಯಲ್ಲಿ, ಒಪರಾ, ವಿಲಿಯಮ್ ಅರ್ನೆಸ್ಟ್ ಹೆನಲಿಯಿಂದ ರಚಿಸಲ್ಪಟ್ಟ ಪ್ರಸಿದ್ಧ ಕವಿತೆ "ಇನ್ವಿಕ್ಟಸ್"ನ್ನು ವಾಚಿಸಲು ಪ್ರಾರಂಭಿಸುತ್ತಿದ್ದಳು.

"ಎಂಟು ವರ್ಷದ ವಯಸ್ಸಿಗೆ ಈ ಪ್ರತಿಭೆ ಪ್ರಶಂಸನೀಯ" ಮುಗುಳ್ನಗುತ್ತ ಒಪರಾ ಇದನ್ನು ಒಪ್ಪುತ್ತಾಳೆ.

ಒಪರಾ, ೬ರಿಂದ ೯ ವರ್ಷದ ವಯಸ್ಸಿನ ಮಧ್ಯದ ಸಮಯವನ್ನು ಮಿಲವಾಕಿಯಲ್ಲಿ ತನ್ನ ತಾಯಿಯೊಡನೆ ಮತ್ತು ಕೆಲಸಮಯ ತನ್ನ ತಂದೆಯೊಡನೆ ನೆಶವಿಲೆಯಲ್ಲಿ ಕಳೆದಳು. ಅನಂತರ ಆಕೆ ತನ್ನ ತಾಯಿಯೊಡನೆ ಇರಲಾರಂಭಿಸಿದಳು. ಬಹುಶಃ ವಯಸ್ಸಿನ ಪ್ರಮಾಣಕ್ಕಿಂತ ಹೆಚ್ಚು ಪ್ರತಿಭಾವಂತ

ಳಾಗಿದ್ದರಿಂದ ಆಕೆಗೆ ತಾಯಿಯೊಡನೆ ನಿರ್ವಹಿಸುವುದು ಬಹಳ ಕಠಿಣವಾಯಿತು. ಒಪರಾ ಹೇಳುವಂತೆ "ನನ್ನ ತಾಯಿ ವಾಸ್ತವವಾಗಿ ನನ್ನ ಜವಾಬ್ದಾರಿ ತೆಗೆದು ಕೊಳ್ಳಲು ಸಿದ್ಧಳಿರಲಿಲ್ಲ."

ಒಂಭತ್ತು ವರ್ಷಕ್ಕೆ ಒಪರಾಳ ಬಾಲ್ಯದ ಭಯಂಕರ ಅಂತ್ಯವಾಯಿತು. ಆಕೆಯ ಚಿಕ್ಕಪ್ಪನ ಮಗನಾದ ಒಬ್ಬ ತರುಣ ಆಕೆಯ ಮೇಲೆ ಬಲಾತ್ಕಾರ ಮಾಡಿದ. "ಒಂಭತ್ತರಿಂದ ೧೪ ವರ್ಷದವರೆಗೆ ಮೂವರು ಈ ಕುಕೃತ್ಯದ ಪುನರಾವೃತ್ತಿ ಮಾಡಿದರು" ಎಂದು ಒಪರಾ ಹೇಳಿದಳು. ಈ ಘಟನೆಯ ವೇದನೆ, ಕೆಲವು ವರ್ಷಗಳ ನಂತರ ಅತ್ಯಂತ ಜನಪ್ರಿಯ ವಾರ್ತಾ ಪ್ರದರ್ಶನದಲ್ಲಿ ಪ್ರಕಟವಾಯಿತು. ಲಜ್ಜೆ ಮತ್ತು ಅರಕ್ಷಣೆಯ ಭಯದಿಂದ ಆಕೆ ಈ ಘಟನೆಯನ್ನು ಗುಪ್ತವಾಗಿಟ್ಟಳು.

ಹದಿಮೂರು ವರ್ಷದ ಒಪರಾ ತಾನು ಸುಂದರಳಾಗಿ ಕಾಣಲು, ಹಾಗು ಜನಾನು ರಾಗಿಯಾಗಿ ಬಾಳಲು ಬಯಸಿದಳು. ಅದ ಕ್ಕಾಗಿ ಅಷ್ಟಕೋನದ ಕನ್ನಡಕ ಧರಿಸಲು ನಿಶ್ಚಯಿಸಿದಳು. ಆದರೆ ಆಕೆಯ ತಾಯಿ ಇದಕ್ಕೆ ಒಪ್ಪಲಿಲ್ಲ. ಇಂಥಹ ವ್ಯರ್ಥ ಖರ್ಚನ್ನು ತಾನು ಸಹಿಸಲಾರೆನೆಂದು ಹೇಳಿ ದಳು. ಮಾರನೆಯ ದಿನ ತಾಯಿ ಕೆಲಸಕ್ಕೆ ಹೋದ ನಂತರ ಒಪರಾ, ತನ್ನ ಹಳೆಯ ಕನ್ನಡಕವನ್ನು ನೆಲದ ಮೇಲೆ ಎಸೆದಳು. ಕಿಟಕಿ, ಬಾಗಿಲ ಪರದೆಗಳನ್ನು ಎಳೆದು, ಮೇಜನ್ನು ಉರುಳಿಸಿ, ಕೊಠಡಿಯ ವಸ್ತು ಗಳನ್ನೆಲ್ಲಾ ಚೆಲ್ಲಾಪಿಲ್ಲಿ ಮಾಡಿದಳು. ಅನಂತರ ಪೊಲೀಸರಿಗೆ ದೂರವಾಣಿ ಮೂಲಕ ತಿಳಿಸಿದಳು.

"ಪೊಲೀಸಿನವರು ಬಂದಾಗ ನಾನು ಮೂರ್ಛೆಗೊಂಡಂತೆ ಹಾಗೂ ಜ್ಞಾಪಕಶಕ್ತಿ ಕಳೆದುಕೊಂಡಂತೆ ನಾಟಕವಾಡಿದೆ," ಆಕೆ ನುಡಿದಳು.

ಆಸ್ಪತ್ರೆಯಲ್ಲಿ ಡಾಕ್ಟರು ತಾಯಿಯನ್ನು ಆಕೆಯ ಮಂಚದ ಬಳಿ ಕರೆತಂದರು. ಆದರೆ ಒಪರಾ ಆಕೆಯನ್ನು ಗುರುತಿಸದಂತೆ ನಾಟಕ ಮಾಡಿದಳು.

ಡಾಕ್ಟರು ಹೇಳಿದರು "ಯಾರೋ ನಿಮ್ಮ ಮನೆಗೆ ನುಗ್ಗಿ ಒಪರಾ ತಲೆಯ ಮೇಲೆ ಹೊಡೆದು ಅವಳ ಕನ್ನಡಕವನ್ನು ಒಡೆದು ಹಾಕಿದರು ಎಂಬುದು ಮಾತ್ರ ಗೊತ್ತು."

"ಏನು ಅವಳ ಕನ್ನಡಕವನ್ನು ಒಡೆದು ಹಾಕಿದರೇ?" ಎಂದು ವೆರನೀತಾಲೀ ಕೇಳಿ ದಳು. "ಸ್ವಲ್ಪ ಸಮಯ ನನ್ನನ್ನು ಮಗ ಳೊಡನೆ ಒಂಟಿಯಾಗಿ ಬಿಡುವಿರಾ?.

ತಾಯಿ ಮಗಳನ್ನು ಕೋಪದಿಂದ ದುರು ಗುಟ್ಟಿ ನೋಡಿದಳು. ಮೂರರವರೆಗೆ ಎಣಿಸ ಲಾರಂಭಿಸಿದಳು. ಒಪರಾ ಹೇಳುತ್ತಾಳೆ "ಆಕೆ ಎರಡರವರೆಗೆ ಎಣಿಸಿದಳು. ನನ್ನನ್ನು ಈಗ ಆಕೆ ಕೊಂದೇ ಹಾಕುವಳೆಂದು ತಿಳಿದೆ. ಆದ್ದರಿಂದ ನಾನು ಈ ರೀತಿ ಹೇಳಿದೆ". "ಈಗ ನನಗೆ ನೆನಪಿಗೆ ಬರುತ್ತಿದೆ. ನೀನು ನನ್ನ ತಾಯಿ. "ಆಕೆ ನನ್ನನ್ನು ಮಂಚದಿಂದ ಹೊರಗೆಳೆದಳು. ನಾವಿಬ್ಬರೂ ಮನೆಗೆ ಬಂದೆವು. ನನಗೆ ಹೊಸ ಕನ್ನಡಕವಂತೂ ಖಂಡಿತ ಸಿಕ್ಕಿತು.

ಆದರೆ ಒಪರಾ ಸಂತುಷ್ಟಳಾಗಿರಲಿಲ್ಲ. ಆಕೆ ಮನೆ ಬಿಟ್ಟು ಓಡಿಹೋದಳು. ಆದರೆ ಆಕೆಯನ್ನು ಬಲವಂತವಾಗಿ ಮನೆಗೆ ಕರೆತರ ಲಾಯಿತು.

ತನ್ನ ಈ ಕಥೆಗಳನ್ನು ಆಕೆ ನಿಷ್ಕಳಂಕ ಹಾಗೂ ಹಾಸ್ಯಭರಿತ ರೀತಿಯಲ್ಲಿ ಹೇಳುತ್ತಾಳೆ. ಆಕೆ ಈ ಹಿಂದೆ ತನ್ನ ನಾಟಕೀಯ ಭಾಷಣಗಳ ಮೂಲಕ ಪ್ರಶಂಸೆಗಳಿಸಿದ್ದಳು. ಅಂತೆಯೇ, ತರುಣಿ ಒಪರಾ ಈ ನಾಟಕೀಯ ಸುಳ್ಳನ್ನು ಒಪ್ಪಿಗೆ ಹಾಗೂ ಸ್ನೇಹ ಸಂಪಾದಿಸಲು ಹೇಳುತ್ತಿದ್ದಳು ಎಂದು ಸ್ಪಷ್ಟವಾಗುತ್ತದೆ.

ವೆರನಿತಾಲೀ ಬಹಳ ಕಷ್ಟಪಟ್ಟಿದ್ದಳು. ಆದ್ದರಿಂದ "ನಾನು ತಂದೆಯ ಜೊತೆ ಇರಬೇಕಾಯಿತು.

ವೆರನಾನ್ ವಿನಫ್ರಿ ಮದುವೆ ಮಾಡಿಕೊಂಡ. ಆತ ಆ ಸಮಾಜದ ಗೌರವಯುತ ಸದಸ್ಯನಾಗಿದ್ದ. ಕ್ಷೌರ ಮಾಡುವ ಕಸುಬನ್ನು ಮಾಡುತ್ತಿದ್ದ. ಬೇಪ್ಟಿಸ್ಟ್ ಚರ್ಚಿನ ಮುಖ್ಯ ಸದಸ್ಯನೂ ಆಗಿದ್ದ. ಆತನ ಪತ್ನಿ ಈ ತರುಣಿ ಈ ರೀತಿ ಸಿಂಗರಿಸಿಕೊಳ್ಳುವ ಹಾಗೂ ಬಿಗಿಯಾದ ಗಿಡ್ಡ ಲಂಗ ತೊಟ್ಟುಕೊಳ್ಳುವುದನ್ನು ಇಷ್ಟಪಡುತ್ತಿರಲಿಲ್ಲ. ಆಕೆಯ ಬಂಡಾಯ ಸ್ವಭಾವವನ್ನು ಕಂಡು ಬಹಳ ಚಿಂತಾಕ್ರಾಂತಳಾಗಿದ್ದಳು. "ನನ್ನ ಆಜ್ಞೆಗಳನ್ನು ಪಾಲಿಸದಿದ್ದರೆ ನೀನು ಈ ಮನೆಯೊಳಗಿರಲಾರೆ" ಎಂದು ವಿನೆಫ್ರಾ ಒಪರಾಗೆ ಹೇಳಿದಳು. ಆ ಆಜ್ಞೆಗಳು, ಅದಕ್ಕಿಂತ ಮಿಗಿಲಾಗಿ ವೆರನಾನ್ ವಿನೆಫ್ರಾ ದೃಢ ನಿಶ್ಚಯ ಹಾಗೂ ನಿಶ್ಚಿಂತೆ, ಒಪರಾಳ ಜೀವನದಲ್ಲಿ ಪರಿವರ್ತನೆ ತಂದಿತು.

ಆಕೆಯ ತಂದೆ ಮೊದಲ ಆಜ್ಞೆ, ಆಕೆ ರಾತ್ರಿ ೧೧ ಗಂಟೆಗೆ ಮುಂಚೆ ಮನೆಗೆ ಬರಬೇಕೆಂಬುದಾಗಿತ್ತು. ಎರಡನೆಯದು ಒಂದು ವಾರದಲ್ಲಿ, ಒಂದು ಪುಸ್ತಕ ಓದಿ ಅದರ ಸಾರಾಂಶ ಬರೆದು ತೋರಿಸಬೇಕಾಗಿತ್ತು. ಒಪರಾಗೆ ಪರೀಕ್ಷೆಯಲ್ಲಿ 'ಸಿ' ಶ್ರೇಣಿ ಸಿಕ್ಕಿತು. ವಿನಫ್ರಿ ಆಕೆಗೆ ಹೇಳಿದಳು "ನಿನ್ನಲ್ಲಿ ಕೇವಲ 'ಸಿ' ಶ್ರೇಣಿ ತೆಗೆದುಕೊಳ್ಳುವ ಸಾಮರ್ಥ್ಯವಿದ್ದಿದ್ದರೆ ನಾನು ನಿನ್ನಿಂದ ಅಷ್ಟು ಮಾತ್ರ ಅಪೇಕ್ಷಿಸುತ್ತಿದ್ದೆ. ಆದರೆ ನೀನು ಸಮರ್ಥಳು. ಆದ್ದರಿಂದ ಈ ಮನೆಯಲ್ಲಿ 'ಸಿ' ಶ್ರೇಣಿ ಸಾಕಾಗುವುದಿಲ್ಲ."

ಒಪರಾ ಹನ್ನೊಂದು ಗಂಟೆಗೆ ಮುಂಚೆಯೇ ಮನೆಗೆ ಬರಲಾರಂಭಿಸಿದಳು. ಆಕೆ ಪ್ರಥಮ ಶ್ರೇಣಿಯ ವಿದ್ಯಾರ್ಥಿಯಾದಳು. ವಿದ್ಯಾರ್ಥಿ ಪರಿಷತ್ತಿನ ಅಧ್ಯಕ್ಷೆ ಆದಳು. ಆಕೆಯಲ್ಲುಂಟಾದ ಎಲ್ಲಕ್ಕಿಂತ ಮಹತ್ವಪೂರ್ಣ ಪರಿವರ್ತನೆಯೆಂದರೆ, ಆಕೆ ಪ್ರಾಮಾಣಿಕತೆಯ ಮಹತ್ವವನ್ನು ಅರಿತಳು.

"ನಾನು ಪುನಃ ಎಂದೂ ಸುಳ್ಳಾಡಲಿಲ್ಲ. ತನ್ನ ತಂದೆಗೆ ಹೇಳಲು ನಾನು ಕಟ್ಟುವ ಕಲ್ಪನೆಯನ್ನು ಮಾಡಲಾರದಾದೆ. ವಾಸ್ತವವಾಗಿ ಶಿಸ್ತಿನಲ್ಲಿ ನಂಬಿಕೆ ಇಡುವವರಲ್ಲಿ ಒಂದು ರೀತಿಯ ಆತ್ಮವಿಶ್ವಾಸ ಹಾಗೂ ವಾಸ್ತವಿಕತೆಯ ಪ್ರವಾಹ ಕಂಡುಬರುತ್ತದೆ.

ಐದು ಅಡಿ ಏಳು ಇಂಚು ಎತ್ತರದ ನಾಟಕೀಯ ನೇತ್ರ ಮತ್ತು ಮೋಹಕ ವ್ಯಕ್ತಿತ್ವದ ಒಪರಾ ನೆಶ್‌ವಿಲೆಯ ಸೆಕೆಂಡರಿ ಶಾಲೆಯ ಸೌಂದರ್ಯ ಸ್ಪರ್ಧೆಯಲ್ಲಿ ಭಾಗವಹಿಸಿದಳು. ಆಕೆ ಯೋಚಿಸಿದಳು "ನನ್ನನ್ನು ನೀನು ಜೀವನದಲ್ಲಿ ಮುಂದೆ ಏನಾಗಬೇಕೆಂದಿರುವೆ" ಎಂದು ಕೇಳುವರು. ಅದಕ್ಕೆ ನಾನು ಈ ರೀತಿ ಅತ್ಯುತ್ತಮ ಉತ್ತರ ಕೊಡುವೆನು "ನಾನು ಪ್ರಾಥಮಿಕ ಶಾಲೆಯ ಅಧ್ಯಾಪಕಿಯಾಗಬಯಸುತ್ತೇನೆ." ಆದರೆ ಸಂದರ್ಶನದ ದಿನ ಬೆಳಿಗೆ

ಆಕೆ "ಟುಡೆ" ಶೋ ನೋಡಿದಳು. ಅದರಲ್ಲಿ ಬಾರ್‌ಬರಾ ವಾಲ್ಟರ್ಸ್‌ನ್ನು ಪ್ರಧಾನವಾಗಿ ಪ್ರಸ್ತುತಪಡಿಸಲಾಗಿತ್ತು. ತೀರ್ಪುಗಾರರು ಆಕೆಯ ಮಹಾತ್ವಾಕಾಂಕ್ಷೆಯ ಬಗ್ಗೆ ಕೇಳಿದಾಗ ಆಕೆ ದೃಢ ನಿಶ್ಚಯದಿಂದ ಹೇಳಿದಳು. "ನಾನು ಸತ್ಯದಲ್ಲಿ ನಂಬಿಕೆ ಇಡುತ್ತೇನೆ. ಸತ್ಯವನ್ನು ಶಾಶ್ವತಗೊಳಿಸಲು ಪತ್ರಿಕೋದ್ಯೋಗಿಯಾಗ ಬಯಸುತ್ತೇನೆ."

ಆಕೆಯನ್ನು ವಿಜಯಿಯೆಂದು ಘೋಷಿಸಲಾಯಿತು. ಆಕೆಗೆ ರೇಡಿಯೋ ಅರೆಕಾಲಿಕ ವಾರ್ತಾ ವಾಚನದ ಕೆಲಸ ಒಪ್ಪಿಸಲಾಯಿತು. ಎಲೆಕ್ಸ್ ಮು ಖಾಂ ತ ರ ಪ್ರಾಯೋಜಿಸಿದ ಭಾಷಣ ಸ್ಪರ್ಧೆಯಲ್ಲಿ ಆಕೆ ನಾಲ್ಕು ವರ್ಷದ ವಿದ್ಯಾರ್ಥಿ ವೇತನವನ್ನು ಗೆದ್ದುಕೊಂಡಳು. ಇದರ ಸಹಾಯದಿಂದ ನೆಶವಿಲೆಯ ಟೆನೆಸ್ ವಿಶ್ವವಿದ್ಯಾಲಯದಲ್ಲಿ ಅಧ್ಯಯನ ಮಾಡಿದಳು. ಮಹಾವಿದ್ಯಾಲಯದಲ್ಲಿ ದಾಖಲಾದ ನಂತರ ನೆಶವಿಲೆಗೆ ಸಂಬಂಧಿಸಿದ ಸಿ.ಬಿ.ಎಸ್. (ಕೊಲೊಂಬೋ ಬ್ರಾಡ್‌ಕಾಸ್ಟಿಂಗ್ ಸಿಸ್ಟಮ್)ನ ಪ್ರಬಂಧಕರು ಆಕೆಗೆ ಟೆಲಿವಿಷನ್‌ನಲ್ಲಿ ಕೆಲಸ ಕೊಟ್ಟರು.

೧೯೭೬ ರಲ್ಲಿ ಆಕೆ ಪದವೀಧರಳಾಗುತ್ತಿದ್ದಳು. ಆದರೆ ಒಪರಾಗೆ ರಾತ್ರಿ ೧೧ ಗಂಟೆಗೆ ಮುಂಚೆ ಮನೆಗೆ ಬರಬೇಕೆಂಬ ನಿರ್ಬಂಧವಿತ್ತು. ಈ ನಿರ್ಬಂಧವನ್ನು ಆಕೆಯ ತಂದೆ ೧೧ ಗಂಟೆಯಿಂದ ಮಧ್ಯರಾತ್ರಿಗೆ ಮುಂದುವರಿಸಿದ್ದ. ಅದೇ ವರ್ಷ ಆಕೆ ಡಬ್ಲ್ಯೂ.ಜೆ.ಜೆಡ್ ಟಿ.ವಿ.ಯಲ್ಲಿ ಕೆಲಸದ ಮೇಲೆ ಬಾಲ್ಟಿಮೋರ್‌ಗೆ ಹೊರಟು ಹೋದಳು. ಆಕೆಯ ಮುಖ್ಯ ಉದ್ದೇಶ ತಂದೆಯ ನಿರ್ಬಂಧಗಳಿಂದ ತಪ್ಪಿಸಿಕೊಳ್ಳುವುದಾಗಿತ್ತು." ಶಿಕಾಗೋ ಟೆಲಿವಿಜನ್ ಟಿ.ವಿ.ಯಲ್ಲಿ ವಾರ್ತಾಪ್ರದರ್ಶನ ಸಂಚಾಲಕಿಯಾಗಿ ಆಕೆಯನ್ನು ನಿಯಮಿಸಲಾಯಿತು.

ಈ ರಾಷ್ಟ್ರೀಯ ಸಿಂಡಿಕೇಟ್ ಪ್ರದರ್ಶನದಲ್ಲಿ ತೂಕ ಕಡಿಮೆ ಮಾಡಿಕೊಳ್ಳುವುದರಿಂದ ಹಿಡಿದು (ಒಪರಾಗೆ ಸಾಕಷ್ಟು ಸಮಯದಿಂದ ಚಿಂತೆಯ ವಿಷಯವೆಂದರೆ, ಆಕೆ ಸದ್ಯದಲ್ಲಿ ೨೭ ಕೆ.ಜಿ.ಗಿಂತ ಹೆಚ್ಚು ತೂಕ ಕಡಿಮೆ ಮಾಡಿಕೊಂಡಿದ್ದಳು. ಜಾತಿವಾದದವರೆಗಿನ ವಿಷಯಗಳು ಸೇರಿದ್ದುವು. ೧೯೮೭ರ ಫೆಬ್ರವರಿ ತಿಂಗಳಲ್ಲಿ ಆಕೆ ಶ್ವೇತವರ್ಣೀಯರ ಕೌಂಟಿ ಜಾರ್ಜಿಯಾಕ್ಕೆ ತನ್ನ ಅತ್ಯಂತ ಪ್ರಸಿದ್ಧ ಪ್ರದರ್ಶನಕ್ಕಾಗಿ ಹೋದಳು. ಅಲ್ಲಿ ಆಕೆ ಶ್ವೇತವರ್ಣೀಯ ಶ್ರೋತೃಗಳೊಡನೆ ಕೆಲ ಸಾಧಾರಣ ಪ್ರಶ್ನೆಗಳನ್ನು ಕೇಳಿದಳು. "ಎಪ್ಪತ್ತೈದು ವರ್ಷಗಳಿಂದ ಅಶ್ವೇತರನ್ನು ಫೋರ್‌ಸೈಥ್ ಕೌಂಟಿಯಿಂದ ಏಕೆ ಬಹಿಷ್ಕರಿಸಲಾಯಿತು? ಅಶ್ವೇತರ ಯಾವ ವಿಚಾರಕ್ಕೆ ನೀವು ಹೆದರುತ್ತೀರಿ?" ಅಲ್ಲಿ ಕೆಲ ವಿರೋಧಿಗಳೂ ಇದ್ದರು. ಆದರೆ ಅವರಲ್ಲಿ ಅನೇಕರು ಅಶ್ವೇತರೊಡನೆ ಒಂದುಗೂಡಿ ಇರುವುದರಲ್ಲಿ ನಂಬಿಕೆ ಇಟ್ಟಿದ್ದರು ಎಂದು ಒಪರಾಗೆ ಅನಿಸಿತು. ಅಮೆರಿಕಾದಲ್ಲಿ ಈ ಪ್ರದರ್ಶನಕ್ಕೆ ಸಾಕಷ್ಟು ಪ್ರಚಾರ ಸಿಕ್ಕಿತು.

ತನ್ನ ಪ್ರದರ್ಶನದ ಯಃಶಸ್ಸಿನಿಂದ ಒಪರಾಳ ಆತ್ಮವಿಶ್ವಾಸ ಹೆಚ್ಚಾಯಿತು. ಬಾಲ್ಯದಲ್ಲಿ ತನ್ನ ಮೇಲಾದ ಅತ್ಯಾಚಾರದ ಬಗ್ಗೆ ಚರ್ಚೆ ಮಾಡಲಿ ಎಂಬುದು ಆಕೆಯ ವಕೀಲರ ಸಲಹೆಯಾಗಿತ್ತು. ಏಕೆಂದರೆ ಹೆಚ್ಚು ಜನ ಈಗಲೂ ಸಹ ಶೋಷಿತರನ್ನೇ ತಪ್ಪಿತಸ್ಥರೆಂದು ತಿಳಿಯುತ್ತಾರೆ. ತನ್ನ ಶಕ್ತಿ

ಗಾರಳಾದ ಆಕೆ ಈ ತರದ ಕಳಂಕದಿಂದ ಉಂಟಾಗುವ ವೇದನೆಯನ್ನು ಅನುಭವಿಸುವುದು ಆತನಿಗೆ ಇಷ್ಟವಿರಲಿಲ್ಲ. ಓಪ್ರಾ ಈ ಮಾತಿಗೆ ಒಪ್ಪಿಕೊಂಡಳು. ಒಂದು ಕಾರ್ಯಕ್ರಮದಲ್ಲಿ ಲೈಂಗಿಕ ಅತ್ಯಾಚಾರಕ್ಕೆ ತುತ್ತಾದ ಸ್ತ್ರೀಯರು ತಮ್ಮ ಅನುಭವಗಳನ್ನು ತೋಡಿಕೊಳ್ಳುತ್ತಿದ್ದರು. ಆಗ ಅಕಸ್ಮಾತ್ತಾಗಿ ಓಪ್ರಾ ತಾನು ಅನುಭವಿಸಿದ ವೇದನೆಯ ಬಗ್ಗೆ ತಿಳಿಸಬೇಕೆಂದು ನಿಶ್ಚಯಿಸಿದಳು. ಒಬ್ಬ ಪೋಷಿತ ಮಹಿಳೆಯನ್ನು ಆಲಂಗಿಸುತ್ತಾ ಆಕೆ ಬಿಕ್ಕಿ ಬಿಕ್ಕಿ ಅತ್ತಳು. ಅದು ನಿಜವಾಗಿಯೂ ಒಂದು ಭಾವಪೂರ್ಣ ಕ್ಷಣವಾಗಿತ್ತು.

೧೯೮೫ರಲ್ಲಿ ಓಪ್ರಾಗೆ 'ದಿ ಕಲರ್ ಪರ್ಪಲ್' ಎಂಬ ಚಿತ್ರದಲ್ಲಿ ಒಂದು ಮಹತ್ವಪೂರ್ಣ ಭೂಮಿಕೆಯ ಜವಾಬ್ದಾರಿಯನ್ನು ನೆರವೇರಿಸಬೇಕಾಗಿತ್ತು. ಬಾಲ್ಯದಲ್ಲಿ ಸುಳ್ಳು ನಾಟಕವಾಡುತ್ತಿದ್ದುದರ ಕಾರಣ ಆಕೆಗೆ ಅಭಿನಯದಲ್ಲಿ ಆಸಕ್ತಿ ಇರಲಿಲ್ಲ. ಚಿತ್ರೀಕರಣದ ಸಮಯದಲ್ಲಿ ತನ್ನ ಡೈರಿಯಲ್ಲಿ ಆಕೆ ತನ್ನನ್ನೇ ಕೇಳಿಕೊಂಡಳು. 'ಅಭಿನಯಿಸುವುದರೊಡನೆ ನಾನು ಸತ್ಯನಿಷ್ಠೆಯನ್ನು ಪಾಲಿಸಬಲ್ಲೆನೇ? ಇದು ವಿರುದ್ಧವಲ್ಲವೇ?

ಕ್ರಮೇಣ ಆಕೆ ಕಲಿತಳು "ಅಭಿನಯದಲ್ಲಿ ನನ್ನದು ಎಂಬುದೇನೂ ಇಲ್ಲ. ಆದರೆ ನೀನು ಮಾಡುತ್ತಿರುವ ಪಾತ್ರದ ಆತ್ಮಭಾವವನ್ನು ವ್ಯಕ್ತಪಡಿಸಬೇಕು. ಈ ರೀತಿ ಇದನ್ನು ನೀನು ಯಥಾರ್ಥಗೊಳಿಸುತ್ತೀಯೆ." ೧೯೮೬ರಲ್ಲಿ "ದಿ ಕಲರ್ ಪರ್ಪಲ್" ಚಿತ್ರದಲ್ಲಿನ ಉತ್ತಮ ಅಭಿನಯಕ್ಕಾಗಿ ಓಪ್ರಾ ವಿನಫ್ರಿಯನ್ನು ಆಸ್ಕರ್ ಪ್ರಶಸ್ತಿಗೆ ಆರಿಸಲಾಯಿತು. ತನ್ನ ಅಭಿನಯದಲ್ಲಿ ಆಕೆ ಸೋಫಿಯಾಳನ್ನು ಜೀವಂತಗೊಳಿಸಿದ್ದಳು.

ಆಕೆ ನೀಡಿದ ಮುಂದಿನ ಅಭಿನಯ "ನೇಟಿವ್ ಸನ್" ಎಂಬ ಚಿತ್ರದ್ದಾಗಿತ್ತು. ಅದರಲ್ಲಿ ಆಕೆ ಒಬ್ಬ ಕ್ರೂರ, ಘಾತಕ ವ್ಯಕ್ತಿಯ ತಾಯಿಯ ಪಾತ್ರ ಮಾಡಿದ್ದಳು. ತನ್ನ ಪಾತ್ರದಲ್ಲಿ ನೈಜತೆಗೆ ವಿಶೇಷ ಮಹತ್ವ ಕೊಡಲು ಆಕೆ ಬಾಲ್ಯದಲ್ಲಿ ತನ್ನ ತಾಯಿಯ ಸ್ಥಿತಿಯ ಬಗ್ಗೆ ಯೋಚಿಸಿದಳು. ಆದ್ದರಿಂದ ಆಕೆ ಈ ಸಂವಾದವನ್ನು ಹೇಳುವಾಗ ತನ್ನ ತಾಯಿಯೊಡನೆ ಸೇರಿಹೋಗಿದ್ದಾಳೆನಿಸುತ್ತಿತ್ತು. "ನನಗೆ ತಿಳಿದಿದ್ದೆಲ್ಲವನ್ನೂ ನಾನು ಮಾಡಿದೆ. ನಾನೇನಾದರೂ ಮಾಡಿಲ್ಲ ಎಂದರೆ ಅದು ನನಗೆ ತಿಳಿದಿರಲಿಲ್ಲವಾದ್ದರಿಂದ ಮತ್ತು ಆ ಬಗ್ಗೆ ನಾನು ಯೋಚಿಸಿರಲಿಲ್ಲವಾದ್ದರಿಂದ (ಇತ್ತೀಚೆಗೆ ಆಕೆ ಮಿಲವಾಕಿಯಲ್ಲಿ ತನ್ನ ತಾಯಿಗಾಗಿ ಒಂದು ಮನೆಯನ್ನು ಖರೀದಿಸಿದ್ದಾಳೆ).

ಈಗ ಒಂದು ಅಪೂರ್ಣ ಕೆಲಸ ಬಾಕಿ ಇತ್ತು. ಆಕೆ ಮನೆಗೆ ಬಂದಾಗಲೆಲ್ಲಾ ತಂದೆ ಹೇಳುತ್ತಿದ್ದರು "ಪದವಿ ಪಡೆಯದೆ ಯಶಸ್ಸು ಸಿಗಲಾರದು." ಓಪ್ರಾ ಟೆನೆಸಿ ಪ್ರಾಂತದಲ್ಲಿ ಡಿಪ್ಲೊಮ ಪದವಿ ಪಡೆಯದೆ ಅಂತಿಮ ವರ್ಷದಲ್ಲಿ ಓದನ್ನು ಬಿಟ್ಟುಬಿಟ್ಟಿದ್ದಳು. ತನ್ನ ಮಿತ್ರರ ಮೂಲಕ ಓಪ್ರಾ ವಿಚಾರಿಸಿದಳು "ವಿಶ್ವವಿದ್ಯಾಲಯದಿಂದ ಹೊರಗುಳಿದು ಅಧ್ಯಯನ ಮಾಡಿದರೆ ಟೆನೆಸಿ ವಿಶ್ವವಿದ್ಯಾಲಯ ಕೊನೆಯ ವರ್ಷದ ನಿರ್ಬಂಧದ ಅವಶ್ಯಕತೆಯ ಷರತ್ತನ್ನು ತೆಗೆದು ಹಾಕುವುದೇ?" ಟಿ.ಎಸ್.ಯು ಆಕೆಯ ಷರತ್ತನ್ನು ಒಪ್ಪಲಿಲ್ಲ.


ಒಪರಾ ಪುನಃ ಪ್ರವೇಶ ಪಡೆಯಬೇಕಾಯಿತು. ಆಕೆ ಮೀಡಿಯಾ ಕೋರ್ಸ್ ಪೂರ್ತಿಗೊಳಿಸುವ ಪ್ರಯತ್ನದಲ್ಲಿ ತೊಡಗಿದಳು. ಈ ರೀತಿ ನಿಯಮವನ್ನು ಪಾಲಿಸಿದಳು. ೧೯೮೭ರಲ್ಲಿ ಪದವಿ ಪ್ರದಾನ ಸಮಾರಂಭದಲ್ಲಿ ಆಕೆಗೆ ಡಿಪ್ಲೋಮ ಪದವಿ ಪ್ರದಾನ ಮಾಡಲಾಗುವುದೆಂದು ಸೂಚಿಸಿ, ತರಗತಿಯನ್ನು ಉದ್ದೇಶಿಸಿ ಮಾತನಾಡಲು ಟಿ.ಎಸ್.ಯು ಆಕೆಯನ್ನು ಆಹ್ವಾನಿಸಿತು.

ಟಿ. ಎಸ್. ಯು. ಪರಿಸರದಲ್ಲಿ "ಹಾರ್ವರ್ಡ್ ಸಿ ಜೈಂಟ್ರಿ ಕಾಂಪ್ಲೆಕ್ಸ್" ಶ್ರೋತೃಗಳಿಂದ ತುಂಬಿ ಹೋಗಿತ್ತು. ವೆರನಾನ್ ವಿನಫ್ರೀ ಶ್ರೋತೃಗಳ ಮಧ್ಯದಲ್ಲಿದ್ದ. "ನಾನು ಜೀವನದಲ್ಲಿ ಸ್ವಲ್ಪ ಮಾತ್ರ ಸಂಪಾದಿಸಿದ್ದೇನೆ. ನಾನು ಮನೆಗೆ ಹೋದಾಗಲೆಲ್ಲಾ ನನ್ನ ತಂದೆ ನನಗೆ ಹೇಳುತ್ತಿದ್ದರು. "ನೀನು ಪದವಿ ಪಡೆಯಬೇಕು." ಒಪರಾ ಸಮೂಹಕ್ಕೆ ತಿಳಿಸಿದಳು.

ಆದ್ದರಿಂದ ನನ್ನ ತಂದೆಗೆ ಇದು ಒಂದು ವಿಶೇಷವಾದ ದಿನ. ಹೀಗೆ ಹೇಳುತ್ತಾ ತನ್ನ ಶಾಲೆಯಲ್ಲಿ, ತನ್ನ ತಂದೆಯ ಹೆಸರಿನಲ್ಲಿ ಒಂದು ವಿದ್ಯಾರ್ಥಿ ವೇತನವ[...] ಸ್ಥಾಪಿಸುವುದಾಗಿ ಆಕೆ ಘೋಷಿಸಿದಳು.

ಆಕೆ ವಾಸ್ತವವಾಗಿಯೂ ತನ್ನ ತಂ[...] ತಕ್ಕ ಮಗಳೇ ಆಗಿದ್ದಳು. ತನ್ನ [...] ಪದವೀಧರರಿಗೆ ಆಕೆ ಸಲಹೆ ಕೊಟ್ಟ[...] "ನಿನ್ನಲ್ಲಿಲ್ಲದ ವಸ್ತುಗಳ ಬಗ್ಗೆ ಕೊರಗಬೇ[...] ನಿನ್ನಲ್ಲಿರುವ ವಸ್ತುಗಳನ್ನು ಉ[...] ಯೋಗಿಸು. ತನ್ನ ಸಾಮರ್ಥ್ಯಕ್ಕಿಂತ ಕಡಿ[...] ಕೆಲಸ ಮಾಡುವುದು ಪಾಪ. ನಮ್ಮಲ್ಲಿ ಪ್ರ[...] ಯೊಬ್ಬರಲ್ಲಿ ಅತಿ ಶ್ರೇಷ್ಠರಾಗಬಲ್ಲ ಶ[...] ಇದೆ. ಏಕೆಂದರೆ ಶ್ರೇಷ್ಠತೆ, ತನ್ನ ಮತ[...] ಇತರರ ಸೇವೆ ಮಾಡುವುದರಿಂದ ನಿರ್ಧಾ[...] ವಾಗುತ್ತದೆ."

ಆ ಹಿರಿಯ ಪದವೀಧರೆ ಒಪರಾ [...] ದ್ದಳು. ಆಕೆ ಸುಪ್ರಸಿದ್ಧ, ಶ್ರೀಮಂ[...] ಮನೋರಂಜಕ ಒಪರಾಳೂ ಆಗಿದ್ದ[...] "ದಿ ಪ್ರೀಚರ್" ಒಪರಾ ಸಹ ಆಗಿದ್ದ[...] ಆಕೆ ಒಂದು ಅತ್ಯಮೂಲ್ಯ ಪಾಠವನ್[...] ತನ್ನಿಂದ ತಾನೇ ಕಲಿತಳು. "ಸತ್ಯವನ್[...] ನುಡಿ. ಅದು ಸದಾ ಕಾಲ ನಿನ್ನನ[...] ರಕ್ಷಿಸುವುದು."



ಕೋಪದಿಂದ ಕೀರ್ತಿ ನಾಶವಾಗುವುದು, ಕೋಪ ಸಂಪತ್ತನ್ನೂ ಹಾಳುಮಾಡುತ್ತದೆ.

—ಹಿತೋಪದೇಶ

ಮಗುವಿಗೆ ಸಂಗೀತ ಕಲಿಸುವುದು ಹೇಗೆ?

ಶ್ರೀಮತಿ ನೀರದ ಎನ್. ನಾಗರಾಜರಾವ್
೨೨೪೫, ೨೪ನೇ ಕ್ರಾಸ್
ಬನಶಂಕರಿ, ೨ನೇ ಹಂತ, ಬೆಂಗಳೂರು-೭೦

ನಾಲ್ಕರಿಂದ, ಒಂಭತ್ತು ವರ್ಷಗಳೊಳರುವ ಮಕ್ಕಳಿಗೆ ತಮ್ಮದೇ ಆದ ಲಯ ಜ್ಞಾನವಿರುವುದರಿಂದ, ಸಂಗೀತದ ಮೋಷ್ಟ್ ಜನಿದಿನ್‌ಷಾಗೆ ಸಂಗೀತ ಹೇಳಿಕೊಡಲು ಯಾವ ತೊಂದರೆಯೂ ಇರುತ್ತಿರಲಿಲ್ಲ. ಮುಂಬೈನ ಭಡ್ರಾನ್ಸ್ಯೂ ಹೈಸ್ಕೂಲ್‌ನಲ್ಲಿ ಅವಳು ಸಂಗೀತ ಉಪಾಧ್ಯಾಯಿನಿ. ಒಂದು ರಾಗವನ್ನು ಬಾರಿಸತೊಡಗಿದ ಒಡನೇ, ಅವಳ ಶಿಷ್ಯರು ಅದಕ್ಕೆ ತಕ್ಕ ಹಾಗೆ ಕೈಯಿಂದ ತಾಳಹಾಕಿ, ಸರಿಯಾದ ಗತಿಯಲ್ಲಿ ಲಾಡುತ್ತಲೂ ಇದ್ದರು. ಮುಕ್ಕಾಲು ಪಾಲು ಮಕ್ಕಳು ತಪ್ಪದೆ ನರ್ತಿಸುತಿದ್ದರು. ಅನಂತರ ಅವಳು ಜಲೋಫೋನ್ ಬಾರಿಸಿದಾಗಲೂ ಸಹ ಮಕ್ಕಳು ಸಂಗೀತಕ್ಕೆ ತಕ್ಕಂತೆ ಹಾವಭಾವದಿಂದ ನರ್ತಿಸುತಿದ್ದರು.

ಸಾಮಾನ್ಯವಾಗಿ ಬಹಳ ಚಿಕ್ಕಮಕ್ಕಳಿಗೆ ಸಂಗೀತದ ಬಗ್ಗೆ ಒಲವು ಸಹಜವಾಗಿಯೇ ಇರುತ್ತದೆ. ಅವರಲ್ಲಿ ಮುಕ್ಕಾಲು ಪಾಲು ಮಕ್ಕಳು ದೊಡ್ಡವರಾದ ಮೇಲೆ, ಯಾವುದಾದರೂ ವಾದ್ಯ ಸಂಗೀತವನ್ನು ಕಲಿಯುವ ರೂಢಿ ಇಟ್ಟುಕೊಂಡೇ ಇರುವರು. ಸಂಗೀತದ ಮೇಲಿನ ಪ್ರೇಮ ಒಂದು ವರದಾನ ಇದ್ದ ಹಾಗೆ, ಚಿಕ್ಕಂದಿನಿಂದಲೂ ಇದ್ದ ಸಂಗೀತದ ಮೇಲಿನ ಒಲವು ದೊಡ್ಡವರಾದಾಗಲೂ ಜೀವನ ಪೂರ್ತಿ ಇದ್ದೇ ಇರುವುದನ್ನು ನಾವು ಗಮನಿಸಬಹುದು. ಸಣ್ಣ ವಯಸ್ಸಿನಿಂದಲೇ, ಸಂಗೀತದ ಕಡೆಗೆ ಒಲವು ತೋರಿಸುವಂತೆ ನಾವು ದಾರಿ ತೋರಿಸಿಕೊಟ್ಟರೆ, ಅದೊಂದು ವರದಾನವಾಗಿ ಪರಿವರ್ತನೆಗೊಳ್ಳಲು ಸಾಧ್ಯ ಎಂದು ಎಷ್ಟೋ ಜನ ಸಂಗೀತ ನಿರ್ದೇಶಕರು ಅಭಿಪ್ರಾಯ ಪಟ್ಟಿದ್ದಾರೆ.

೩೧ ವರ್ಷದ ಶ್ರೀಧರ ಪಾರ್ಥಸಾರಥಿ ಎನ್ನುವವರು ತಮ್ಮ ಹನ್ನೊಂದನೆಯ ವಯಸ್ಸಿನಿಂದಲೇ ಕಛೇರಿಗಳಲ್ಲಿ ಪಕ್ಕವಾದ್ಯಗಾರರಾಗಿ ಮೃದಂಗ ಬಾರಿಸುತ್ತಿದ್ದರು. ಅವರು ಯಾವಾಗಲೂ ಸಂಗೀತದ ವಾತಾವರಣದಲ್ಲಿಯೇ ಹುಟ್ಟಿ ಬೆಳೆದವರು. ಅವರ ತಾಯಿ ಶ್ರೀಮತಿ ಲಕ್ಷ್ಮಿ ಪಾರ್ಥಸಾರಥಿಯವರು, ಕರ್ನಾಟಕ ಶಾಸ್ತ್ರೀಯ ಸಂಗೀತಗಾರರಾಗಿದ್ದರು. ಆಕೆ ಬಹಳಷ್ಟು ರೇಡಿಯೋ ಕಾರ್ಯಕ್ರಮಗಳನ್ನು ಕೊಡುತ್ತಲೇ ಇದ್ದರು. ಹಾಗೇ ಸಂಗೀತ ಕಾರ್ಯಕ್ರಮಕ್ಕೆ ಹೋಗುವ ಕಡೆಗೆಲ್ಲಾ ತಮ್ಮ ೨ ವರ್ಷದ

ಮೂಲ: ೧೯೯೬ ರ ಮಾರ್ಚ್ 'ರೀಡರ್ಸ್ ಡೈಜೆಸ್ಟ್'ನಲ್ಲಿ ಪ್ರಕಟವಾದ ಶಾನೂ ಬಿಜಲಾನಿಯವರ "ಗೀವ್ ಯುವರ್ ಚೈಲ್ಡ್ ದಿ ಗಿಫ್ಟ್ ಆಫ್ ಮ್ಯೂಸಿಕ್" ಲೇಖನ.

ಮಗುವನ್ನೂ ಜೊತೆಗೆ ಕರೆದೊಯ್ಯುತ್ತಿದ್ದರು.

"ಊಟದ ಮೇಜಿನ ಮೇಲೋ, ಇಲ್ಲವೇ ನೀರಿನ ಬಕೇಟುಗಳನ್ನು ಬೋರಲು ಹಾಕಿಕೊಂಡೋ, ಅದರ ಮೇಲೆ ಸದಾ ತಬಲದಂತೆ ಬಡಿಯುತ್ತಲೇ ಇರುತಿದ್ದ" ಎಂದು ಶ್ರೀಮತಿ ಪಾರ್ಥಸಾರಥಿ ಅವರು ತಿಳಿಸಿದರು. "ಆದ್ದರಿಂದಲೇ, ನಾನು, ಅವನು ಆರು ವರ್ಷದವನಾಗಿದ್ದಾಗಿನಿಂದಲೂ ಅವನನ್ನು ತಬಲಾ ಪಾಠಕ್ಕೆ ಕಳುಹಿಸತೊಡಗಿದೆ. ನನ್ನ ಇನ್ನೊಬ್ಬ ಮಗ ನಾರಾಯಣನಿಗೆ ತಂತಿ ವಾದ್ಯಗಳ ಮೇಲೆ ಖಯಾಲಿ ಇತ್ತು. ಆದ್ದರಿಂದ ಅವನು ಏಳುವರ್ಷದವನಾದಾಗಲೇ, ಪಿಟೀಲು ಪಾಠಕ್ಕೆ ಸೇರಿಸಿಬಿಟ್ಟೆ" ಎಂದು ಹೇಳಿದರು.

ರಾಗಜ್ಞಾನ

"ಸಾಮಾನ್ಯವಾಗಿ ಏಳೆಂಟು ವರ್ಷಗಳಾಗುವವರೆಗೆ ಮಕ್ಕಳಿಗೆ ಸಂಗೀತದ ಬಗ್ಗೆ ಹೆಚ್ಚಿನ ಜ್ಞಾನ ಇದೆಯೆ? ಎಂದು ಕಂಡುಕೊಳ್ಳುವುದು ಕಷ್ಟಕರವಾದ ಕೆಲಸ" ಹೀಗೆಂದು ಸಂಗೀತದ ಮೇಷ್ಟ್ರು ಮತ್ತು ಸಂಗೀತ ರಚನಕಾರರಾದ ಪ್ರೇಂಕುಮಾರ್ ಶರ್ಮ ಅಭಿಪ್ರಾಯ ಪಟ್ಟಿದ್ದಾರೆ. "ಆದರೆ, ಬಹಳ ಸಣ್ಣ ವಯಸ್ಸಿನಿಂದಲೂ ಸಂಗೀತವನ್ನು ಕುಳಿತುಕೇಳಿ, ಆನಂದಿಸುತಿದ್ದಲ್ಲಿ ಸ್ವಲ್ಪ ದೊಡ್ಡವರಾದ ಮೇಲೆ ತಮಗೆ ತಾವೇ ಸಂಗೀತ ಕಲಿಯಲು ಇಚ್ಛಿಸಿದಲ್ಲಿ, ಮನಸ್ಸು ಬಹಳ ಚೆನ್ನಾಗಿ ಪರಿಪಕ್ವಗೊಳ್ಳಲು ಸಹಕರಿಸುತ್ತದೆ." ಎಂಬುದು ಅವರ ಖಚಿತವಾದ ನಿರ್ಧಾರವೂ ಆಗಿರುತ್ತದೆ.

ಸಂಗೀತ ಉಪಯೋಗಿಸಿಕೊಂಡು ಆಡು ಆಟದಲ್ಲಿ ಭಾಗವಹಿಸುವುದಕ್ಕಾಗಲೀ ಇಲ್ಲವೆ ಮಗುವನ್ನು ಜೋಗುಳ ಹಾಡಿ ಮಲಗಿಸ ವುದಕ್ಕಾಗಲೀ, ನಮ್ಮ ಮನಸ್ಸನ್ನು ಆಹ್ಲಾದಗೊಳಿಸಿಕೊಳ್ಳುವುದಕ್ಕೇ ಆಗ ನಾವು ಹಾಡನ್ನು ಕಲಿತಿರುವುದು ಒಳ್ಳೆ ಯದು. ಎಲ್ಲರೂ ಹೆಸರಾಂತ ಸಂಗೀತ ವಿದುಷಿ ಸುಬ್ಬುಲಕ್ಷ್ಮಿಯವರಂತೆ ಆಗಲು ಸಾಧ್ಯವೇ ಇಲ್ಲ. ಸಣ್ಣ ಸಣ್ಣ ಮಕ್ಕಳು ತಾ ಹಾಕಿಕೊಂಡು ಲಯಬದ್ಧವಾಗಿ ಕು ಯುವ ಆಟಗಳು, ಜೊತೆಗೆ ಸಂಗೀತ ಹೇ ಕೊಂಡು, ಬೆರಳುಗಳಿಂದಲೇ ತೋರಿಸುತ್ತಾ ಹೇಳುವ ಆಟಗಳು ಎಂದರೆ ಅವುಗಳಿಗೆ ಬಲು ಪ್ರೀತಿ. ದುಬಾರಿ ಬೆಲೆಯ ವಾದ್ಯಗಳನ್ನು ಬಿಟ್ಟು, ಅತಿ ಕಡಿಮೆ ಬೆಲೆಯ ಲಯಕ್ಕೆ ಉಪಯೋಗಿಸುವ ವಾದ್ಯಗಳ ಉದಾಹರಣೆಗೆ ಷೇಕರ್ಸ್, ಕಾಸ್ಟನೆಟ್ಸ್ ತಂಬೂರಿಯನ್ಸ್, ಕ್ಲಾಪರ್ಸ್, ಬೆಲ್ ಅಥವಾ ಆಟದ ತಬಲಗಳು ಇತ್ಯಾದಿ ಇಂಥವುಗಳನ್ನು ಚಿಕ್ಕ ಮಕ್ಕಳು ತಾವೇ ಉಪಯೋಗಿಸಿ ಆನಂದಪಡುವುದು ಒಳ್ಳೆ ಯದು. ಇದರಿಂದ ಅವರಿಗೆ ಆನಂದವೂ ಜೊತೆಗೆ ತಾಳಜ್ಞಾನವೂ ಏಕ ಕಾಲದಲ್ಲಿ ಅನುಭವವಾಗುವುದುಂಟು.

ನಿಮ್ಮ ಮಕ್ಕಳು ಬಹಳ ಸಣ್ಣವರಾಗಿ ದ್ದರೂ ಪರವಾಗಿಲ್ಲ ನೀವು ಅವರೊಡನೆ ರೇಡಿಯೋ, ಟಿ.ವಿ, ಟೇಪ್‌ರೆಕಾರ್ಡರ್ ಹಾಕಿ ಕೊಂಡು ಹಾಡುಗಳನ್ನು ಆಲಿಸುವುದೂ ಆ ಹಾಡಿಗೆ ತಕ್ಕಂತೆ ಹೆಜ್ಜೆಹಾಕಿಕೊಂಡು ಕುಣಿಯುವುದೂ ಮಾಡಿದಲ್ಲಿ, ಅವುಗಳ ಮೇಲೆ ಸಂಗೀತದ ಪರಿಣಾಮ ಅಚ್ಚೊತ್ತಿ ನಿಲ್ಲಲು ಸಾಧ್ಯ. ಹಿಂದೂಸ್ತಾನಿ ಸಂಗೀತ

ಾರ, ಸಂಗೀತ ತಜ್ಞ ಡಾ॥ ಅಶೋಕ್‌ರಾನಡೆ ಯವರು "ನಿಮ್ಮ ಮಕ್ಕಳಿಗೆ ಎಲ್ಲಾ ಥರಹದ ಸಂಗೀತವನ್ನು ಬಾರಿಸಿ ಅಭ್ಯಾಸಮಾಡಿಸಿ" ಎಂದು ಹೇಳಿದ್ದಾರೆ, ಜೊತೆಗೆ "ಸಿನಿಮಾ ಹಾಡು, ಭಜನೆ, ಪಾಪ್ ಸಂಗೀತ, ಶಾಸ್ತ್ರೀಯ ಸಂಗೀತ, ಬಾಯಿ ಹಾಡು ಗಾರಿಕೆ, ವಾದ್ಯಸಂಗೀತ ಪಾಶ್ಚಾತ್ಯ ಮತ್ತು ಭಾರತೀಯ ಸಂಗೀತ" ಎಲ್ಲದರ ಪರಿಚಯ ವನ್ನು ಮಾಡಿಕೊಡಿ ಎಂದೂ ಹೇಳಿದ್ದಾರೆ. ಪಾಶ್ಚಾತ್ಯ ಸಂಗೀತ ದೊಡ್ಡ, ದೊಡ್ಡ ಪಟ್ಟಣ ಗಳಲ್ಲಿ ಮಾತ್ರ ಲಭ್ಯ. ಇಲ್ಲವೇ ಗೋವಾ ರಾಜ್ಯಗಳಲ್ಲಿ ಮಾತ್ರ ಈ ರೀತಿಯ ಯುರೋಪಿಯನ್ ಸಂಗೀತವನ್ನು ಕೇಳಲು ಸಾಧ್ಯ.

ಸುಲಭವಾಗಿ ಸಿಕ್ಕುವ ವಾದ್ಯವೆಂದರೆ ಮನುಷ್ಯನ ಧ್ವನಿ. ಸಾಮಾನ್ಯವಾಗಿ ಎಲ್ಲಾ ಶಾಲೆಗಳಲ್ಲಿಯೂ, ಅದರಲ್ಲೂ ಕಿರಿಯರ ಶಾಲೆಗಳಲ್ಲಿ ಮಕ್ಕಳು ಗುಂಪು ಗುಂಪಾಗಿ ಹಾಡು, ಪದ್ಯ, ಚುಟಕುಗಳನ್ನು ಹಾಡುವು ದನ್ನು ನೀವು ಧಾರಾಳವಾಗಿ ಕೇಳಬಹುದು.

ಆದರೆ, ಕೆಲವು ಶಾಲೆಗಳಲ್ಲಿ ಸಂಗೀತದ ಬಗ್ಗೆ ಸರಿಯಾದ ಮಾಹಿತಿಯನ್ನು ಕೊಡದೇ ಇರುವುದು ಬಹಳ ದುರದೃಷ್ಟಕರ. ನಿಮ್ಮ ಮಗು ಹುಟ್ಟುಗುಣದಿಂದ ಸಂಗೀತದ ಬಗ್ಗೆ ಒಲವು ತೋರಿಸಿದಲ್ಲಿ, ನೀವು ಸ್ವಂತ ಸಂಗೀತದ ಪಾಠವನ್ನು ಗೊತ್ತುಮಾಡು ವುದೇ ಒಳ್ಳೆಯದು. "ನಿಮ್ಮ ಮಗುವಿಗೆ ಸಂಗೀತದ ಕಲೆ ಇದೆಯೋ ಇಲ್ಲವೇ ಎಂದು ಗೊತ್ತುಮಾಡಿಕೊಳ್ಳುವುದಕ್ಕೆ, ಮಗುವಿಗೆ ಒಂದು ಸಿನಿಮಾ ಹಾಡನ್ನೋ, ಇಲ್ಲವೇ ಟೆಲಿವಿಷನ್‌ನ್ನಿನ ಪ್ರಕಟಣೆಗಳ ಹಾಡಿನ ತುಣುಕುಗಳನ್ನೋ ಹಾಡಿ ತೋರಿಸುವಂತೆ ಕೇಳಿ" ಎಂದು ಶಾಸ್ತ್ರೀಯ ಸಂಗೀತದ ಬಾಯಿಹಾಡಿಕೆಗಾರರಾದ ಶ್ರೀರಘುನಂದನ ಪಂಶೀಕರ್ ಹೇಳುತ್ತಾರೆ. "ಮಗು ರಾಗ ವನ್ನು ಅಪಸ್ವರವಿಲ್ಲದೆ, ಸರಿಯಾಗಿ ಹಾಡಿ ತೋರಿಸಿದಲ್ಲಿ, ಅವನು ಮುಂದಕ್ಕೆ ಸಂಗೀತ ಕಲಿಯಲು ಯೋಗ್ಯನಾಗಿದ್ದಾನೆ ಎಂದು ಗೊತ್ತಾಗಿಬಿಡುತ್ತೆ. ಜೊತೆಗೆ, ಅವನಿಗೆ ಲಯಬದ್ಧತೆ ಬಗ್ಗೆ ಜ್ಞಾನವಿದೆಯೋ ಎಂದೂ ತಿಳಿದುಕೊಳ್ಳಬೇಕು. ಹಾಡಿನ ತಾಳಕ್ಕೆ ಮತ್ತು ಲಯಕ್ಕೆ ಬದ್ಧವಾಗಿ ಅವನು ನರ್ತಿಸುತ್ತಾನೆಯೋ!! ಎಂದೂ ಗಮನಿಸ ಬೇಕು. ನೀವು ಮೇಜಿನ ಮೇಲೋ, ಇಲ್ಲವೇ ಮೃದಂಗದ ಮೇಲೋ ಬಾರಿಸಿ ತೋರಿಸಿ ದಲ್ಲಿ ಅವನು ಪುನಃ ಮತ್ತೆ ಅದೇ ರೀತಿ ಬಾರಿಸಿ ತೋರಿಸುವ ಚೈತನ್ಯ ಇದೆಯೋ? ಎಂದೂ ನೋಡಿಕೊಳ್ಳಬೇಕು. ಸರಿಯಾದ ಖಾಸ ಸಂಗೀತ ಮೇಷ್ಟರನ್ನು ಗೊತ್ತು ಮಾಡುವುದು ಅಷ್ಟೇನು ಸುಲಭದ ಕೆಲಸ ವೇನಲ್ಲ. ವಿದೇಶಗಳಲ್ಲಿ ಅಂದರೆ ಉದಾ ಹರಣೆಗೆ ಲಂಡನ್ನಿನ ಟ್ರಿನಿಟಿ ಸಂಗೀತದ ಕಾಲೇಜ್ ಅಥವಾ ರಾಯಲ್ ಸಂಗೀತ ಶಾಲೆ ಇತ್ಯಾದಿ ಕಡೆಗಳಿಂದ ಪಾಶ್ಚಾತ್ಯ ಸಂಗೀತಗಾರರು ಡಿಪ್ಲೋಮಾ ಸರ್ಟಿಫಿಕೇಟ್ ಅನ್ನು ಪಡೆದುಕೊಂಡಿರುತ್ತಾರೆ. ಆದರೆ ಭಾರತೀಯ ಸಂಗೀತಗಾರರ ಬಳಿ ಸಂಗೀತ ಉದ್ಯೋಗದ ಬಗ್ಗೆ ಪರಿಚಯ ಪತ್ರ ಇರುವು ದಿಲ್ಲ. ಬಹಳ ಹಿಂದಿನ ಕಾಲದಲ್ಲಿ ಶಿಷ್ಯರು ಭಾರತೀಯ ಹೆಸರಾಂತ ಸಂಗೀತಗಾರರ ಹತ್ತಿರ ಅವರ ಮನೆ ಕೆಲಸ ಮತ್ತು ಅವರ ಸೇವೆ ಮಾಡುತ್ತಾ ಸಂಗೀತ ಕಲಿಯು ತ್ತಿದ್ದರು. ಈಗ ಅದಂತೂ ಸಾಧ್ಯವೇ ಇಲ್ಲ. ಆದ್ದರಿಂದ, ಅವರಿವರನ್ನು ಒಬ್ಬ ಸಂಗೀತದ

ಮೇಷ್ಟ್ರಿದ್ದರೆ ನಮಗೆ ತಿಳಿಸಿ ಎಂದು ಕೇಳಿಕೊಳ್ಳಿ. ಆದಲ್ಲಿ, ಆ ಸಂಗೀತದ ಮೇಷ್ಟ್ರು ಅವರಿವರ ಮನೆಗಳಲ್ಲಿ ಯಾವ ರೀತಿ ಮಕ್ಕಳಿಗೆ ಹಿತವಾದ ಸಂಗೀತ ಕಲಿಸಿಕೊಡುತ್ತಾರೆಯೇ ಎಂದೊಮ್ಮೆ ನೋಡಿ ಬನ್ನಿ. ಸಂಗೀತದ ಟೀಚರ್ ಸರಿಯಾಗಿ, ಮನಮುಟ್ಟುವಂತೆ ಹೇಳಿ ಕೊಡದಿದ್ದ ಪಕ್ಷದಲ್ಲಿ ಮಗು ಸಂಗೀತದ ಪಾಠಕ್ಕೆ ಏನು ಮಾಡಿದರೂ ಹೋಗಲು ಒಪ್ಪುವುದಿಲ್ಲ.

ನಿಮ್ಮ ಮಗನೋ ಮಗಳೋ ವಾದ್ಯ ಸಂಗೀತವೇ ಬೇಕೆಂದಲ್ಲಿ, ವಾದ್ಯವನ್ನು ಆರಿಸುವುದರ ಬಗ್ಗೆ ಅವರಿಗೇ ಬಿಟ್ಟುಬಿಡಿ, "ತಾಯಿ ತಂದೆಯರು ಅದು ಬೇಡ, ಇದು ಕಲಿ ಎಂದು ದುಂಬಾಲು ಬೀಳುವುದು ಒಳ್ಳೆಯದಲ್ಲ" ಎಂಬುದು ಜನಿದಿನ್‌ಷಾ ಅವರ ಅಭಿಪ್ರಾಯ. "ಮಗು ಸಂಗೀತದಲ್ಲಿ ಎಷ್ಟೇ ನಿಪುಣನಾಗಿರಲಿ, ಈ ತರಹದ ಬಲವಂತ ಮಾಘಸ್ನಾನದಿಂದ, ಸಂಗೀತವೆಂದರೆ ಬೆಚ್ಚಿ ಬೀಳುವಂತಾಗುತ್ತದೆ.

ನೀವು ಸಂಗೀತ ಕಲಿಸಲು ಎಷ್ಟು ಖರ್ಚು ಮಾಡಬಲ್ಲಿರಿ?

ಸಂಗೀತದ ಮೊದಲ ಪಾಠಗಳನ್ನು ಅರ್ಥ ಮಾಡಿಕೊಂಡು, ಅಭ್ಯಾಸ ಮಾಡಿಕೊಳ್ಳಲು ಮಗುವಿಗೆ ದೇಹದ ಮತ್ತು ಮನಸ್ಸಿನ ವಿಕಾಸ ಚೆನ್ನಾಗಿರಬೇಕು. ಕೆಲವೊಮ್ಮೆ ನಾವಂದುಕೊಂಡದ್ದಕ್ಕಿಂತ ತಡವಾಗಿ ಶುರುವಾಗುವುದೂ ಉಂಟು. ಭಾರತೀಯ ಶಾಸ್ತ್ರೀಯ ಸಂಗೀತ ಕಲಿಯುವುದು ಬಹಳ ಶ್ರಮದ ಕೆಲಸ. "ಆದ್ದರಿಂದ ಮಗುವಿಗೆ ಕನಿಷ್ಠ ಎಂಟು ವರ್ಷಗಳಾದರೂ ಆದನಂತರ ಪಾಠ ಶುರುಮಾಡುವುದು ಒಳ್ಳೆಯದು."

ಪಾಶ್ಚಾತ್ಯ ಸಂಗೀತ ಕಲಿಯಲಿಕ್ಕೂ ಇದೇ ವಿಧಾನ ಒಳ್ಳೆಯದು. ಮಗುವಿಗೆ ಸ್ವತಃ ಓದು ಬರೆಯುವುದಕ್ಕೆ ಬಂದಿರಬೇಕು, ಸಣ್ಣ ಪುಟ್ಟ ಲೆಕ್ಕಗಳನ್ನು ಮಾಡುವುದನ್ನು ಕಲಿತಿರಬೇಕು. ಆಗ ಸಂಗೀತ ಪಾಠದ ಕೆಲವು ನಿಯಮಗಳನ್ನು ತನಗೆ ತಾನೇ ಕಲಿತುಕೊಳ್ಳುವುದಕ್ಕೆ ಅನುಕೂಲವಾಗುತ್ತದೆ. "ಸಂಗೀತದ ಚಿಹ್ನೆಗಳನ್ನು ಅರ್ಥಮಾಡಿಕೊಳ್ಳುವಂತಿರಬೇಕು. ಜೊತೆಗೆ ಗುರುಗಳು ಬರೆದುಕೊಡುವ ವಿಷಯಗಳನ್ನು ಓದಿ ತಿಳಿದುಕೊಳ್ಳುವಷ್ಟು ತಿಳುವಳಿಕೆ ಇರಬೇಕು." ಹೀಗೆಂದು ಪಿಯಾನೋ ಟೀಚರ್ ಪೆರಿನ್‌ಜೆಸಿಯಾ ಹೇಳುತ್ತಾರೆ.

"ಮಗುವಿಗೆ ಶಾಲೆ ಮುಗಿದ ನಂತರ ಸಂಗೀತದ ಕ್ಲಾಸಿಗೆ ಬಂದು ಕಲಿಯಲು ದೇಹದಾರ್ಢ್ಯ ಇರಬೇಕು, ಇಲ್ಲದಿದ್ದ ಪಕ್ಷದಲ್ಲಿ ಅವರುಗಳಿಗೆ ಸಂಗೀತದ ಪಾಠದ ಮೇಲೆ ಗಮನವಿಡಲು ಬಹಳ ಕಷ್ಟವಾಗುತ್ತೆ." ಮಕ್ಕಳು ಸಣ್ಣವರಿದ್ದಾಗ ನಾನು ಏರೋಪ್ಲೇನ್ ಬಿಡೋ ಪೈಲಟ್ ಆಗ್ತೀನಿ, ಬಸ್ ಕಂಡಕ್ಟರ್ ಆಗ್ತೀನಿ, ಪೋಲೀಸ್ ಆಗ್ತೀನಿ ಅಂತ ಅರ್ಥವಿಲ್ಲದೆ ಮಾತಾಡುತ್ತಾ ಇರುವಂತೆಯೇ ನಂಗೆ ತಬಲ ಬಾರಿಸೋಕೆ ಇಷ್ಟ, ನಂಗೆ ಪಿಟೀಲು ಕಲಿಯೋಕೆ ಇಷ್ಟ ಎಂದೂ ಹೇಳುತ್ತವೆ, ಅದನ್ನು ನಿಜ ಎಂದು ತಿಳಿದು ನೀವು ಒಮ್ಮೆಗೇ ಅದೇ ರೀತಿ ನಿರ್ಧಾರ ತೆಗೆದುಕೊಂಡು ಸಂಗೀತ ಪ್ರಾರಂಭಿಸಲು ಹೊರಟರೆ ಕೆಲಸ ಕೆಡುತ್ತದೆ.

"ಸಣ್ಣ ಮಗು ಅಂದರೆ ಸುಮಾರು ೫ ವರ್ಷದ್ದು ಏನಾದರೂ ಸಂಗೀತದ ಬಗ್ಗೆ ಕಲಿಯಬೇಕಾದಲ್ಲಿ ಒಂದೆರಡು ವರ್ಷಗಳ

...ಯೂ ಬೇಕಾಗುತ್ತದೆ. ಅದೇ ಪಾಠವನ್ನು ಲ...ಸ್ಸಿದ ಹುಡುಗ ಕಲಿಯಲು ಒಂದೆರಡು, ...ಂಗಳಾದರೆ ಸಾಕು", ಹೀಗೆಂದು ತಬಲಾ ...ದಕರಾದ ಅಶೋಕ್‌ಗೋಡ ಬೋಲೆ ...ವರು ಅಭಿಪ್ರಾಯ ಪಡುತ್ತಾರೆ.

ಫೀಸು! ಹಣ! ಅದು ಒಂದೊಂದು ಕಡೆ ...ಂದೊಂದು ರೀತಿ ಇರುತ್ತದೆ. ಒಬ್ಬರಿಂದ ...ತೊಬ್ಬರಿಗೆ ದರ ಬಹಳ ವತ್ಯಾಸ ...ರುತ್ತೆ. ಸ್ವಂತ ಪಾಠ ಒಂದಕ್ಕೆ ಒಂದು ...ಟಿಗೆ ನೂರುರೂಪಾಯಿ ಹತ್ತಿರ ಹತ್ತಿರ ...ರುತ್ತೆ, ವಾದ್ಯಗಳನ್ನು ಕೊಳ್ಳಬೇಕೆಂದಾಗ ...ರೂ. ಕೊಟ್ಟರೆ ಒಂದು ಮರದ ...ಳಲು ಖರೀದಿಸಬಹುದು. ಒಂದು ...ರ್ಮೋನಿಯಂಗೆ ೨೫೦೦ ರೂ. ಬೆಲೆ ...ದೆ. ಒಂದು ಜೊತೆ ತಬಲದ ಬೆಲೆ ...೦೦ ರೂ. ಒಂದು ಸಿತಾರಿನ ಬೆಲೆ ...೫೦೦ ರೂ. ಇದೆ. ೧೦೦೦ ರೂ.ಗೆ ಒಂದು ...ಟಾರ್ ಕೊಳ್ಳಬಹುದು ಒಂದು ಸೆಕೆಂಡ್ ...ಹ್ಯಾಂಡ್ ಪಿಯಾನೋಗೆ ೭೫೦೦೦ ರಿಂದ ...,೦೦,೦೦೦ ವರೆಗೂ ಇದೆ ಏಕೆಂದರೆ ಭಾರತ ...ಲ್ಲಿ ಪಿಯಾನೋ ತಯಾರಿಸುವುದೇ ಇಲ್ಲ. ...ದ್ದರಿಂದ ಅದಕ್ಕೆ ಅಷ್ಟೊಂದು ಬೆಲೆ. ಆದರೆ ...ಲವು ವಾದ್ಯಗಳನ್ನು ಮಾರುವ ಅಂಗಡಿ ...ವರು ತಿಂಗಳಿಗೆ ೫೦೦ ರೂ. ಬಾಡಿಗೆ ...ಂತೆ ಪಿಯಾನೋ ಬಾಡಿಗೆಗೂ ಕೊಡುವು...ಟು. ಹೀಗೆ, ಸ್ವಂತ ಪಾಠಕ್ಕೆ ಹಣ ...ಡುವುದಾಗದಿದ್ದ ಪಕ್ಷದಲ್ಲಿ, ಗುಂಪು ...ಪಾಗಿ ಪಾಠ ಹೇಳಿಕೊಡುವಲ್ಲಿ ಹೋಗಿ ...ದಲ್ಲಿ ತಿಂಗಳಿಗೆ ೫೦ ರೂ.ನಿಂದ ನೂರು ...ಪಾಯಿಯೊಳಗೇ ಕಲಿಯಲು ಸಾಧ್ಯ ...ಗುತ್ತೆ ತಂಡಗಳಲ್ಲಿ ಸಂಗೀತಕ್ಕೆ ಹೋದಲ್ಲಿ ...ಗು, ಬೇರೆ ಮಕ್ಕಳೊಡನೆ ಅಭ್ಯಾಸ ಮಾಡುವ ಅವಕಾಶ ಸಿಕ್ಕುತ್ತದೆ. ಎಲ್ಲಾ ಥರಹದ ವಾದ್ಯಗಳನ್ನು ನುಡಿಸುವವರನ್ನು ಕೂಲಂಕುಷವಾಗಿ ನೋಡುವ ಅವಕಾಶ ಸಿಕ್ಕುವುದರಿಂದ, ಅವರಿಗೆ ತಾವು ಯಾವ ವಾದ್ಯವನ್ನು ಆರಿಸಿಕೊಳ್ಳಬೇಕೆಂಬ ವಿಷಯದ ಬಗ್ಗೆ ಚೆನ್ನಾಗಿ ಅರಿವಾಗುವುದಕ್ಕೂ ಸಹಾಯವಾಗುತ್ತೆ.

ಬಲವಂತ ಮಾಡಬೇಡ

ಕರ್ನಾಟಕ ಶಾಸ್ತ್ರೀಯ ಬಾಯಿ ಹಾಡುಗಾರ್ತಿ ಶ್ರೀಮತಿ ಟಿ. ಆರ್. ಬಾಲಾಮಣಿ, ಕಳೆದ ೨೭ ವರ್ಷಗಳಿಂದ ಸಂಗೀತದ ಸ್ಕೂಲನ್ನು ತೆರೆದು, ಬಹಳ ಮಕ್ಕಳಿಗೆ ಸಂಗೀತ ಹೇಳಿಕೊಡುತ್ತಾರೆ ಹೀಗೆ ಸಾಮೂಹಿಕವಾಗಿ ಮಕ್ಕಳು ಸಂಗೀತ ಕಲಿಯುವುದರಲ್ಲಿ ಕೆಲವಷ್ಟು ಅನುಕೂಲಗಳಿವೆ. ಅದಾವುದೆಂದರೆ, ಒಂದು ಮಗುವು ತಪ್ಪು ಹಾಡಿದಾಗ ತಿದ್ದಿದ್ದನ್ನು, ಇನ್ನೊಂದು ಮಗು ನೋಡುತ್ತಾ, ಕೇಳುತ್ತಾ ಕುಳಿತಿರುವುದರಿಂದ, ತನ್ನ ಸರದಿ ಬಂದಾಗ ಅವರುಗಳಿಗೆ ಕಾತುರ, ಭಯ ಇವುಗಳು ಉಂಟಾಗಲು ಸಾಧ್ಯವೇ ಇಲ್ಲ" ಎಂದು ಹೇಳುತ್ತಾರೆ.

ಕೊನೆಯದಾಗಿ ಅತಿ ಮುಖ್ಯವಾದ ಪ್ರಶ್ನೆಯೊಂದು ನಮ್ಮ ಮುಂದೆ ಧುತ್ ಎಂದು ಎದ್ದು ನಿಲ್ಲುತ್ತದೆ. ಅದ್ಯಾವುದೆಂದರೆ ನಿಮ್ಮ ಮಕ್ಕಳನ್ನು ನೀವು ಹಾಡು ಅಭ್ಯಾಸಿಸಲು ಎಷ್ಟು ಸಮಯ ಕೊಡುತ್ತೀರಿ? ಎಷ್ಟು ಹೊತ್ತು ಅಭ್ಯಾಸ ಮಾಡಬಲ್ಲರು? ಕೆಲವು ಮಕ್ಕಳು, ಸಂಗೀತದ ಪಾಠವನ್ನು ಶಾಲಾ ಪಾಠದಂತೆ ಆರಾಮವಾಗಿ ಕಲಿತುಕೊಂಡು ಹೋಗುತ್ತಾರೆ. ಹದಿಮೂರು

ವರ್ಷದ ಆದಿತ್ಯಲತ್ಗೂ ಎಂಬ ಹುಡುಗ ತನ್ನ ತಬಲ ಅಭ್ಯಾಸವನ್ನು ದಿನಕ್ಕೆ ಒಂದು ಗಂಟೆಯಂತೆ ಏಳುವರ್ಷದಿಂದಲೂ ಮುಂದು ವರಿಸಿಕೊಂಡು ಬರುತ್ತಿದ್ದಾನೆ. ಒಂದು, ಒಪ್ಪತ್ತೂ ಅಭ್ಯಾಸಕ್ಕೆ ಚ್ಯುತಿ ತಂದು ಕೊಂಡಿಲ್ಲ.

"ನನಗೆ ತಬಲಾ ಅಂದರೆ ಪ್ರಾಣ" ಎನ್ನುತ್ತಾನೆ ಅವನು "ನಾನು ಅದನ್ನೇ ಕಸಬನ್ನಾಗಿ ಮಾಡಿಕೊಂಡು ಜೀವಿಸಲು ಇಷ್ಟ ಪಡುವುದಿಲ್ಲ. ಆದರೆ ಅದನ್ನು ನನ್ನ ಜೀವನದ ಒಂದು ಅಂಗವೇನೋ ಅನ್ನುವಷ್ಟು ಮಟ್ಟಿಗೆ ತಬಲಾ ಅಭ್ಯಾಸಮಾಡಿ ಸಂತೋಷಪಟ್ಟುಕೊಳ್ಳುತ್ತೇನೆ" ಎಂದೂ ಹೇಳಿಕೊಳ್ಳುತ್ತಾನೆ.

ಮತ್ತೆ ಕೆಲವು ಮಕ್ಕಳಿಗೆ ಹೆಚ್ಚು ಪ್ರೋತ್ಸಾಹ ಕೊಡಬೇಕಾಗುತ್ತದೆ. ಜಾಲ್ ಡಮ್‌ಕಿವಾಲ ಎಂಬ ಎಂಟು ವರ್ಷದವನಾಗಿದ್ದಾಗಿನಿಂದಲೇ ಸೆಲ್ಲೋ ವಾದ್ಯದ ಕ್ಲಾಸಿಗೆ ಸೇರಿಬಿಟ್ಟಿದ್ದ, ಒಂದುವಾರ ದಿನಾ ಒಂದು ಗಂಟೆ ಅಭ್ಯಾಸಮಾಡಿದ. ಆದರೆ ಅವನಿಗೆ ಶಾಲೆಯ ಪಾಠಗಳ ಒತ್ತಡದಿಂದ, ಸೆಲ್ಲೋಕೈಯಲ್ಲಿ ಹಿಡಿಯುವುದನ್ನು ಕಡಿಮೆ ಅತಿಕಡಿಮೆ ಮಾಡುತ್ತಾ ಹೋದ. ಆದರೆ, ನನ್ನ ಮೇಷ್ಟ್ರು ಜಿನ್‌ದಿನ್‌ಷಾ "ನನ್ನನ್ನು ಬಯುತ್ತಿರಲಿಲ್ಲ" ಎನ್ನುತ್ತಾನೆ "ನಾನು ಓದಿಗೆ ಪ್ರಾಮುಖ್ಯತೆ ಕೊಡಬೇಕೆನ್ನುವುದು ಆಕೆಗೆ ತಿಳಿದ ಅಂಶವಾಗಿದ್ದುದರಿಂದ", "ನೀನು ಓದುವದು ಮುಖ್ಯ. ಆದರೆ, ದಿನಕ್ಕೆ ಗಂಟೆ ಗಟ್ಟಲೆ ಸೆಲ್ಲೋ ಅಭ್ಯಾಸ ಮಾಡಲಾಗದಿದ್ದರೂ ಪರವಾಗಿಲ್ಲ, ಕೆಲವು ನಿಮಿಷಗಳಾದರೂ ಅಭ್ಯಾಸಮಾಡು. ಬಿಟ್ಟೇ ಬಿಡಬೇಡ." ಎಂದು ಸಲಹೆ ಇತ್ತರು.

ಜಾಲ್ ಅದರಂತೆಯೇ ಮಾಡುತ್ತಿದ್ದಾನೆ. ಹದಿನಾರು ವರ್ಷದ ಜಾಲ್ ಈಗ ಕಾಲೇಜಿನಲ್ಲಿದ್ದಾನೆ. ವಾರಕ್ಕೆ ಮೂರು ಗಂಟೆಯ ಪ್ರಕಾರ ಸೆಲ್ಲೋ ಅಭ್ಯಾಸವಿಟ್ಟುಕೊಂಡಿದ್ದಾನೆ. ಬೊಂಬಾಯಿ ಛೇಂಬರ್ ಆರ್ಕೆಸ್ಟ್ರಾಕ್ಕೆ ಸೇರಿ, ಆಗಾಗ್ಗೆ ಕಛೇ ಕೊಡುತ್ತಾನೆ.

"ಕೆಲವು ಮಕ್ಕಳಿಗೆ, ಸಂಗೀತ ಅಭ್ಯಾ ಮಾಡಿ, ಅಭ್ಯಾಸಮಾಡಿ ಎಂದು ಮೇಲಿಂದ ಮೇಲೆ ಹೇಳುತ್ತಲೇ ಇರಬೇಕಾಗುತ್ತದೆ" ಎಂದು ಹಿಂದೂಸ್ತಾನಿ ಗಾಯಕಿ ನೀಲ ಭಗತ್ ಅಭಿಪ್ರಾಯ ಪಡುತ್ತಾರೆ, ತಾಯಿ ತಂದೆಯರು ಮಗು ಸಂಗೀತ ಪಾಠದಲ್ಲಿ ಎಷ್ಟರಮಟ್ಟಿಗೆ ಆಸಕ್ತಿ ತೋರಿಸುತ್ತ ಎಂಬುದನ್ನು ಆಗಾಗ್ಗೆ ಗಮನಿಸುವುದು ಒಳ್ಳೆಯದು, ಅವನು ಅಸಮಾಧಾನ ಹೊಂದಿದ್ದಾನೆಂದು ಕಂಡರೆ, ಅವನಿಗೆ ತಾನು ಕಲಿಯುತ್ತಿರುವ, ವಾದ್ಯ ಇಷ್ಟವಿಲ್ಲದೆಯೆ ಇರಬಹುದು ಅಥವಾ ಅವನಿಗೆ ಪಾಠ ಕಲಿಸುತ್ತಿರುವ ಉಪಾಧ್ಯಾಯರು ಹೇಳಿ ಕೊಡುವ ರೀತಿ ಅವನಿಗೆ ಅರ್ಥವಾಗದೇನೂ ಇರಬಹುದು. ಅಲ್ಲದೇ ಇದಾವುದೇ ಕಾರಣ ವಿಲ್ಲದೇನೇ ಇರಬಹುದು, ಆಗ ಆತುರದಲ್ಲಿ ನಿರ್ಧಾರ ತೆಗೆದುಕೊಳ್ಳದೆ ಸ್ವಲ್ಪ ಸಾವಧಾನಿಸಿ ಕಾದು ನೋಡುವುದು ಒಳ್ಳೆಯದು.

"ಮತ್ತೇ ಅದೇ ರೀತಿ ಸಂಗೀತ ಕಲಿಯುಲ ಸಾಕಷ್ಟು ಅಡಚಣೆ, ತೊಂದರೆ ಉಂಟಾದಲ್ಲಿ ಸಂಗೀತ ಕಲಿಯುವಿಕೆಯನ್ನು ನಿಲ್ಲಿಸುವುದ ಮೇಲು ಹೀಗೆಂದು ಡಾ|| ರಾನಡೆಯವರು ಹೇಳುತ್ತಾರೆ.

"ಆ ತರಹ ಇಷ್ಟವಿಲ್ಲದೇ ಸಂಗೀತ ಕಲಿಯುವುದಕ್ಕಿಂತ ನಿಲ್ಲಿಸಿಬಿಡುವುದೇ ಒಳ್ಳೆಯದು. ಸಂಗೀತ ಕಲಿಯುತ್ತೇನೆಂದು ನಿಶ್ಚಯಿಸಿಕೊಂಡಲ್ಲಿ ಅದೊಂದು ಸಂತೋಷ ಕೊಡುವಂಥಹ ಕಲಿಕೆಯಾಗಿರಬೇಕೇ ಹೊರತು "ಹೊರೆ"ಯಂತಾಗಬಾರದು. ನಾವು ನಮ್ಮ ಮಕ್ಕಳಿಗೆ ಸಂಗೀತ ಕಲಿಸಲು ಪ್ರಯತ್ನ ಪಡುವುದು, ಅವರಿಗೊಂದು ಪ್ರತಿಭೆಕೊಟ್ಟು ಅವರು ಜೀವನದಲ್ಲಿ ಆನಂದವಾಗಿರಲೆಂದೇ ಹೊರತು ಮತ್ಯಾವ ಉದ್ದೇಶದಿಂದಲೂ ಅಲ್ಲ.



ನಮ್ಮ ಮನಸ್ಸು ಶುದ್ಧವಾಗಿದ್ದರೆ ಜಗತ್ತು ಸರಿಯಾಗಿದೆ ಎನಿಸುತ್ತದೆ. ನಮ್ಮ ಮನಸ್ಸು ಅಶುದ್ಧವಾಗಿದ್ದರೆ ಜಗತ್ತು ಹಾಳಾಗಿದೆ ಎನಿಸುತ್ತದೆ.

—ಜವಹರಲಾಲ್ ನೆಹರು

ದೇವಲೋಕ, ಮರ್ತ್ಯಲೋಕ ಬೇರೆ ಇಲ್ಲ. ಸತ್ಯ ನುಡಿಯುವುದೇ ದೇವಲೋಕ; ಮಿಥ್ಯ ನುಡಿಯುವುದೇ ಮರ್ತ್ಯಲೋಕ.

—ಬಸವಣ್ಣ

ನಾವು ಎಷ್ಟು ಕಾಲ ಜೀವಿಸುತ್ತೇವೆ ಎಂಬುದು ಮುಖ್ಯ ಅಲ್ಲ, ಹೇಗೆ ಜೀವಿಸುತ್ತೇವೆ ಎಂಬುದು ಮುಖ್ಯ.

—ಒಬ್ಬ

ರೊಕ್ಕ ಎರಡಕ್ಕು ದುಃಖ ಕಾಣಕ್ಕ

ದುರ್ಗಾ ಪಿ. ಎನ್.
ಸ.ಮಾ.ಹಿ.ಪ್ರಾ. ಶಾಲೆ
ಮಿತ್ತನಡ್ಕ
ಅಂಚೆ ಕರೋಪಾಡಿ (ದ.ಕ.) ೫೭೪ ೨೮೦

"ವಿದ್ಯಡೆ ಮನುಜರ ಕರೆಸೋದು ರೊಕ್ಕ, ಹೊದ್ದಿದ ಜನರನು ಬಿಡಿಸೋದು ರೊಕ್ಕ, ನೆಂಟರ ಇಷ್ಟರ ಮರೆಸೋದು ರೊಕ್ಕ, ಕಂಟಕಗಳ ಪರಿಹರಿಸೋದು ರೊಕ್ಕ, ಇಲ್ಲದ ಗುಣಗಳ ತರಿಸೋದು ರೊಕ್ಕ, ಇಲ್ಲದಿರಲು ಬಹು ದುಃಖ ಕಾಣಕ್ಕ" ಎಂದು ಮುಂತಾಗಿ ಪುರಂದರದಾಸರು ಹಾಡಿದ ಜೀವನ ಮೌಲ್ಯ ಸದಾ ಚಲಾವಣೆಯಲ್ಲಿರುವ ಚಿರನೂತನ ನಾಣ್ಯ. ಈ ಕತೆ ಅದರ ಒಂದು ಚಮತ್ಕಾರ!

ಬೇಸಿಗೆಯ ಉರಿಬಿಸಿಲು. ಮಕ್ಕಳಿಗೆಲ್ಲಾ ರಜೆ. ತನ್ನ ಇಬ್ಬರು ಮಕ್ಕಳೊಂದಿಗೆ ಊರಿಗೆ ಹೊರಟ ಶ್ಯಾಮಲ ಮಂಗಳೂರಿನ ಜ್ಯೋತಿ ಬಸ್ ನಿಲ್ದಾಣದಲ್ಲಿ ಬಸ್ಸಿಗಾಗಿ ಕಾಯುತ್ತಿದ್ದಳು.

ಸಂಜೆ ಗಂಟೆ ಮೂರಾದರೂ ಬಿಸಿಲಿನ ಬೇಗೆ ಕಡಿಮೆಯಾಗಿರಲಿಲ್ಲ. ಊರಿಗೆ ಹೋಗಲು ಬಸ್ ಬಹಳ ಕಡಿಮೆ ಇದ್ದುದರಿಂದ ಶ್ಯಾಮಲ ಬಸ್ಸಿನ ವೇಳೆಗೆ ಸರಿಯಾಗಿ ಬಸ್ ನಿಲ್ದಾಣಕ್ಕೆ ಬಂದಿದ್ದಳು.

ಮೂರು ಗಂಟೆಗೆ ಹೊರಡುವ ಬಸ್ಸಿಗೆ ಹೋದರೂ ಶ್ಯಾಮಲ ಊರಿಗೆ ತಲಪುವಾಗ ಸಂಜೆ ಐದು ಗಂಟೆಯಾಗಬಹುದು. 'ಬಿಸಿಲಿದ್ದರೂ ತೊಂದರೆಯಿಲ್ಲ. ಊರಿಗೆ ಕತ್ತಲಾಗುವ ಮೊದಲು ತಲಪಬಹುದು' ಎಂದು ಆಕೆ ಮಕ್ಕಳೊಂದಿಗೆ ಹೊರಟಿದ್ದಳು.

ಗಂಟೆಗೆ ಮೂರೂವರೆಯಾದರೂ ಬಸ್ ಬರಲೇ ಇಲ್ಲ. ಯಾವ ಕೆಲಸವಾದರೂ ಆಗಬಹುದು, ಬಸ್ಸಿಗೆ ಕಾಯುವ ಕೆಲಸವಂತ[illegible] ಆಗಲಾರದು. ಶ್ಯಾಮಲಳಿಗೆ, ಬಸ್ ಬ[illegible]ತ್ತದೆಯೋ ಎಂದು ನೋಡಿ ನೋಡಿ ಸಾಕಾ[illegible] ಹೋಯಿತು.

ಒಂದೆಡೆ ಬಿಸಿಲಿನ ಬೇಗೆಯಿಂದ ಬಳಲಿ[illegible] ಬಾಯಾರಿಕೆ, ಮತ್ತೊಂದೆಡೆ ಮಕ್ಕಳಿ[illegible] ಊರಿಗೆ ಹೋಗುವ ಕುತೂಹಲ, ಒಟ್ಟಾ[illegible] ಒಮ್ಮೆ ಊರಿಗೆ ಹೋಗಿ ಮುಟ್ಟಿದರೆ ಸಾ[illegible] ಎನ್ನುವಂತಾಯಿತು ಶ್ಯಾಮಲಳಿಗೆ.

'ಇನ್ನು ನಾಲ್ಕು ಗಂಟೆಗೆ ಬಸ್. [illegible] ಬಸ್ ಇಲ್ಲದಿದ್ದರೆ ಪುನಃ ರೂಮಿ[illegible] ಹೋಗಿ, ನಾಳೆ ಊರಿಗೆ ಹೋಗುವ' ಎಂ[illegible] ಮಕ್ಕಳನ್ನು ಸಮಾಧಾನಪಡಿಸಿದಳು.

ಅಷ್ಟರಲ್ಲಿ ಪೇಪರ್ ಮಾರುವ ಹುಡುಗ[illegible] ಗೌಜಿ ಪ್ರಾರಂಭವಾಯಿತು. ಸಂಜೆ ಪೇಪ[illegible] ಗಳ ಬಿಸಿ ಬಿಸಿ ಸುದ್ದಿ ಹೇಳುತ್ತಾ ಪ್ರ[illegible] ಯೊಬ್ಬರ ಹತ್ತಿರ ಹೋಗಿ 'ತಕ್ಕೊ[illegible] ತಕ್ಕೊಳ್ಳಿ' ಎಂದು ಒತ್ತಾಯಿಸುತ್ತಿದ್ದ[illegible]

ಒಬ್ಬ ಹುಡುಗ ಶ್ಯಾಮಲಳ ಹತ್ತಿರ ಬಂದು 'ಜೀವನದಲ್ಲಿ ಜುಗುಪ್ಸೆಗೊಂಡು ಯುವತಿಯ ಆತ್ಮಹತ್ಯೆ' ಎಂದು ಸಂಜೆ ಪೇಪರೊಂದನ್ನು ಆಕೆಯ ಮುಂದೆ ಹಿಡಿದ. ಬಸ್ಸಿಗೆ ಇನ್ನೂ ಅರ್ಧ ಗಂಟೆ ಇದೆ ಎಂದು ಆಕೆ ಪೇಪರೊಂದನ್ನು ಖರೀದಿಸಿದಳು.

ಅದೇ ಆ ಹುಡುಗ ಹೇಳಿದ 'ಜೀವನದಲ್ಲಿ ಜುಗುಪ್ಸೆ, ಹುಡುಗಿಯ ಆತ್ಮಹತ್ಯೆ' ಎಂದು ದೊಡ್ಡ ಅಕ್ಷರದಲ್ಲಿ ಎಂಟು ಕಾಲಮ್ ಹೆಡ್ಡಿಂಗನ್ನೇ ನೋಡಿ ತಲೆ ತಿರುಗುವಂತಾ ಯಿತು, ಶ್ಯಾಮಲಳಿಗೆ.

ಇಂಥ ಸುದ್ದಿಗಳೆಲ್ಲಾ ಮಾಮೂಲು, ಆದರೂ ಸಮಯ ಕಳೆಯಲೆಂದು ಅವಳು ಪೇಪರ್ ಓದಲು ಪ್ರಾರಂಭಿಸಿದಳು.

ಒಂದೊಂದೆ ಶಬ್ದವನ್ನು ಓದುತ್ತಾ ಹೋದಂತೆ ಶ್ಯಾಮಲಳಿಗೆ ಅನುಮಾನವಾಗ ತೊಡಗಿತು. ಇನ್ನೊಮ್ಮೆ ಓದಿದಳು, ಮತ್ತೊಮ್ಮೆ ಓದಿದಳು, ಎರಡು-ಮೂರು ಸಲ ಓದಿದರೂ ವಿಷಯ ಆಕೆಗೆ ನಂಬಲಾಗ ಲಿಲ್ಲ. ಆತ್ಮಹತ್ಯೆ ಮಾಡಿಕೊಂಡವಳ ವಿಷಯ ಸ್ಪಷ್ಟವಾಗಿ ಕೊಡಲಾಗಿತ್ತು. ಆತ್ಮಹತ್ಯೆ ಮಾಡಿಕೊಂಡವಳು ಬೇರೆ ಯಾರೂ ಅಲ್ಲ, ಶ್ಯಾಮಲಳ ಆತ್ಮೀಯ ಗೆಳತಿ, ಜೀವನದಲ್ಲಿ ತನಗೊಂದು ದಾರಿಮಾಡಿಕೊಟ್ಟ ತ್ಯಾಗ ಮಯಿ ಸ್ವರ್ಣಲತಾ!

ಶ್ಯಾಮಲಳಿಗೆ ತಲೆತಿರುಗಿ ಅಲ್ಲೇ ಬೀಳು ವಂತಾಯಿತು. ಹೇಗೋ ಸುಧಾರಿಸಿ ಕೊಂಡಳು. 'ಛೆ! ಇದು ಸತ್ಯವೆ, ಭಗವಂತಾ ಹತ್ಯೆ ಮಾಡಿಕೊಂಡವಳು ನನ್ನ ಸ್ವರ್ಣಲತಾ ಆಗಿರದೆ ಬೇರೆ ಯಾರೋ ಆಗಿರಲಿ' ಮನದಲ್ಲೇ ಪ್ರಾರ್ಥಿಸಿದಳು. ಆದರೆ ಪ್ರತಿಯೊಂದು ವಿಷಯವನ್ನು ಓದಿದ ಆಕೆ ಆತ್ಮಹತ್ಯೆ ಮಾಡಿಕೊಂಡವಳು ತನ್ನ ಗೆಳತಿ ಅಲ್ಲ ಎಂದು ನಂಬುವುದು ಸಾಧ್ಯ ವಾಗಲಿಲ್ಲ.

ಇಲ್ಲ, ಇದು ಆತ್ಮಹತ್ಯೆ ಅಲ್ಲ. ಜೀವನ ದಲ್ಲಿ ಎಷ್ಟೇ ಕಷ್ಟ ಬಂದರೂ ಆಕೆ ಹೆದರು ವವಳಲ್ಲ. ಬಾಲ್ಯದಿಂದಲೇ ತಾಯಿಯನ್ನು ಕಳೆದುಕೊಂಡು ಮಲತಾಯಿಯೊಂದಿಗೆ ಬೆಳೆದವಳು ಅವಳು. ಸ್ವರ್ಣನಿಗೆ ಸತ್ತ ತಾಯಿಯ ಆಸ್ತಿ, ಬಂಗಾರ ಬೇಕಾದಷ್ಟು ಇತ್ತು. ಓದಿ ವಿದ್ಯಾವಂತಳಾಗಿದ್ದಳು. ಅಪಘಾತವೊಂದರಲ್ಲಿ ತನ್ನ ಕೈಯೊಂದನ್ನು ಕಳಕೊಂಡಾಗ ಆಕೆಯೇ ಹೇಳಿದ್ದಳು, "ಶ್ಯಾಮಲ ನಾನು ಏನೇ ಆದರೂ ಆತ್ಮ ಹತ್ಯೆ ಮಾಡಿಕೊಳ್ಳಲಾರೆ" ಎಂದು. ಅದ ಕ್ಕಿಂತ ಹೆಚ್ಚಿನ ಕಷ್ಟ ಈಗೇನು ಬಂದಿರ ಬಹುದು. ಹೇಗೂ ಊರಿಗೆ ಹೋಗು ತ್ತಿದ್ದೇನೆ. ವಿಷಯ ಏನೆಂದು ಸರಿಯಾಗಿ ತಿಳಿಯಬಹುದು. ಯೋಚನೆಗೆ ಕಡಿವಾಣ ಹಾಕಿ ವಾಚು ನೋಡಿದಾಗ ಗಂಟೆ ನಾಲ್ಕಾ ಗಿತ್ತು. ಮಕ್ಕಳಿಬ್ಬರೂ ಊರಿಗೆ ಹೋಗುವ ಆತುರದಲ್ಲಿದ್ದರು. ಬಸ್ಸು ಬಂತು. ಶ್ಯಾಮಲ ಮಕ್ಕಳೊಂದಿಗೆ ಬಸ್ಸಿಗೆ ಹತ್ತಿ ಕುಳಿತಳು. ಬಸ್ಸು ಹೊರಟಿತು.

ಮಕ್ಕಳಿಬ್ಬರೂ ಹೊರಗಿನ ದೃಶ್ಯವನ್ನೇ ನೋಡುತ್ತಿದ್ದರು. ಸ್ವರ್ಣಳನ್ನು ನೆನೆದಂತೆ ಶ್ಯಾಮಲಳಿಗೇಕೋ ದುಃಖ ತಡೆಯಲಾಗ ಲಿಲ್ಲ. ನೆನಪಿನ ಆಳವನ್ನು ಅಗೆದಾಗ ಕಣ್ಣೀರಿನ ಪ್ರವಾಹವೇ ಉಕ್ಕಿ ಬಂತು. ಬಸ್ಸಲ್ಲಿ ಬೇರೆಯವರೂ ಇದ್ದಾರೆ ಎಂಬುದೂ ಮರೆತು ಹೋಯಿತು. ಗೆಳತಿ ಸ್ವರ್ಣ ತುಳಿದ ಮುಳ್ಳಿನ ಹಾದಿಯ ಒಂದೊಂದು ತಿರುವುಗಳೂ ಶ್ಯಾಮಲಳ ಕಣ್ಣ ಮುಂದೆ ಬರತೊಡಗಿದವು.

ಶ್ಯಾಮಲ ಮತ್ತು ಸ್ವರ್ಣಲತಾ ಅಕ್ಕ ಪಕ್ಕ ಮನೆಗಳ ಹುಡುಗಿಯರು. ಒಂದೇ ಪ್ರಾಯದವರು. ಮನೆಯ ಸ್ಥಿತಿಯಲ್ಲಿ ಮಾತ್ರ ವ್ಯತ್ಯಾಸ ಇತ್ತು. ಸ್ವರ್ಣಳ ಮನೆ ಸಿರಿವಂತಿಕೆಯಿಂದ ಮೆರೆಯುತ್ತಿತ್ತು. ಶ್ಯಾಮಲಳ ಮನೆ ಬಡತನದಿಂದ ಮರುಗುತ್ತಿತ್ತು.

ಸ್ವರ್ಣಳ ತಾಯಿ ಈಕೆಯ ತಂದೆ ತಾಯಿಗೆ ಏಕಮಾತ್ರ ಪುತ್ರಿ. ಹಾಗಾಗಿ ಆಸ್ತಿಯೆಲ್ಲಾ ಈಕೆಗೆ ದೊರಕಿತ್ತು. ಸ್ವರ್ಣಾಳ ತಂದೆ, ತಮ್ಮ ಮನೆಯನ್ನು ತೊರೆದು ಹೆಂಡತಿಯ ತವರು ಮನೆಯಲ್ಲೇ ಉಳಿದರು.

ಸ್ವರ್ಣಳಿಗೆ ಇನ್ನೂ ಐದು ವರ್ಷವಾಗಿಲ್ಲ. ಅವಳ ತಾಯಿ ಗರ್ಭಕೋಶದ ಕ್ಯಾನ್ಸರಿನಿಂದ ಪರಲೋಕದ ಪ್ರಯಾಣ ಬೆಳೆಸಿದ್ದರು. ಮುಗ್ಧ ಹುಡುಗಿ ಸ್ವರ್ಣಲತಾಳಿಗೆ ಏನು ಮಾಡಬೇಕೆಂದೇ ತೋಚಲಿಲ್ಲ. ಅಂತೂ ಅಮ್ಮ ಇನ್ನಿಲ್ಲ ಎಂದು ಗೊತ್ತಾದಾಗ ಗೊಳೋ ಎಂದು ಅತ್ತಳು. ಅಮ್ಮನ ಆಸ್ತಿಯೆಲ್ಲಾ ಮಗಳ ಪಾಲಾಯಿತು. ಆದರೆ ಅಮ್ಮನಿಗಿಂತ ದೊಡ್ಡ ಆಸ್ತಿ ಬೇರೆ ಇದೆಯೇ?

ಸ್ವರ್ಣಾಳ ತಂದೆ ಇಕ್ಕಟ್ಟಿನಲ್ಲಿ ಸಿಲುಕಿದರು. ಮರು ಮದುವೆಯಾದರೆ ಮಗಳು ಮಲತಾಯಿಯೊಂದಿಗೆ ಬೆಳೆಯಬೇಕು. ಬಂದವಳು ಒಳ್ಳೆಯವಳಾದರೆ ಕಷ್ಟವಿಲ್ಲ. ಮದುವೆಯಾಗದಿದ್ದರೆ ಆತ ಎಲ್ಲವನ್ನೂ ನಿಭಾಯಿಸುವುದು ಕಷ್ಟ.

ಕೊನೆಗೆ ಮದುವೆಯಾಗುವುದೆಂದೇ ನಿಶ್ಚಯಿಸಿದರು. ಬಡವರ ಮನೆಯ ಹುಡುಗಿಯೊಬ್ಬಳನ್ನು ಸರಳ ವಿವಾಹದೊಂದಿಗೆ ಮನೆಗೆ ಬರಮಾಡಿಕೊಂಡರು.

'ಅಲ್ಪನಿಗೆ ಅಂತಸ್ತು ಬಂದರೆ ತಿಂಗಳ ಬೆಳಕಿಗೂ ಕೊಡೆ ಹಿಡಿಯುತ್ತಾನಂತೆ' ಎನ್ನುವ ಗಾದೆ ಮಾತೊಂದಿದೆ. ಹಾಗಾಯಿತು ಸ್ವರ್ಣಾಳ ಚಿಕ್ಕಮ್ಮನ ಸ್ಥಿತಿ. ಬಡತನದಲ್ಲಿಯೇ ಹುಟ್ಟಿ ಬೆಳೆದ ಆಕೆಗೆ ಸಿರಿತನ ದೊರಕಿದಾಗ ತನಗಿಂತ ಶ್ರೀಮಂತರು ಬೇರೆ ಯಾರೂ ಇಲ್ಲ ಎನ್ನುವ ಅಹಂ ಬಂತು. ಸ್ವರ್ಣಾಳ ತಾಯಿಯ ಚಿನ್ನವನ್ನೆಲ್ಲಾ ಧರಿಸಿ ಮೆರೆವುದೇ ಆಕೆಗೆ ಸಂತೋಷ ಕೊಟ್ಟಿತು.

ಈ ಎಲ್ಲಾ ಸಂತೋಷದಿಂದ ಆ ಸಿರಿತನದ ಒಡತಿಯಾದ ಐದು ವರ್ಷದ ಸ್ವರ್ಣಾಳನ್ನು ಕಡೆಗಣಿಸಿದಳು.

ಸ್ವರ್ಣಾ ಈಗ ಶಾಲೆಗೆ ಹೋಗುವ ಹುಡುಗಿ. ಶಾಲೆಗೆ ಹೋಗಬೇಕಾದರೆ ಒಂದೂವರೆ ಮೈಲಿನಷ್ಟು ನಡೆಯಬೇಕು. ಸಣ್ಣ ಹುಡುಗಿಯಾದರೂ ತನ್ನ ಕೆಲಸಗಳಿಗಾಗಿ ಚಿಕ್ಕಮ್ಮನನ್ನು ಪೀಡಿಸುತ್ತಿರಲಿಲ್ಲ. ಬೆಳಿಗ್ಗೆ ಬೇಗ ಎದ್ದು ಚಿಕ್ಕಮ್ಮನಿಗೆ ಸಹಾಯ ಮಾಡುತ್ತಿದ್ದಳು. ಬೇಯಿಸಿಟ್ಟ ಅನ್ನವೋ, ದೋಸೆಯೋ, ಏನಾದರೂ ಇದ್ದದ್ದನ್ನು ಡಬ್ಬಿಗೆ ತುಂಬಿಸಿಕೊಂಡು ಶಾಲೆಗೆ ಹೊರಡುವಳು. ನೆರೆಮನೆ ಹುಡುಗಿ ಶ್ಯಾಮಲಳೊಂದಿಗೆ ಹರಟೆ ಹೊಡೆಯುತ್ತಾ ನಡೆಯುವಳು.

ಸಂಜೆ ಶಾಲೆಯಿಂದ ಬಂದು ಊಟ ಮಾಡಿ, ಸಣ್ಣಪುಟ್ಟ ಕೆಲಸಗಳನ್ನು ಮಾಡುತ್ತಿದ್ದಳು. ತನ್ನ ಬಟ್ಟೆಯನ್ನು ತಾನೇ ಒಗೆಯುತ್ತಿದ್ದಳು. ತಾಯಿಯಿಲ್ಲದ ಹುಡುಗಿಯಾದರೂ ಸ್ವರ್ಣ ಬಹಳ ಚುರುಕಿನ ಹುಡುಗಿ. ಮಾತೂ ಅಷ್ಟೇ. ಅವಳ ಮಾತನ್ನು ಇನ್ನೂ ಕೇಳುವಂತಾಗುತ್ತದೆ ಕೇಳುಗರಿಗೆ.

ಸಂಜೆಯ ಕೆಲಸಗಳೆಲ್ಲಾ ಮುಗಿದ ಮೇಲೆ ಸ್ವರ್ಣಾ ಪುಸ್ತಕದೊಂದಿಗೆ ಶ್ಯಾಮಲಳ ಮನೆಗೆ ಹೋಗುವಳು. ರಾತ್ರಿಯಾಗುವ ಮೊದಲು ಪುನಃ ಮನೆಗೆ ಬರುತ್ತಿದ್ದಳು. ಶ್ಯಾಮಲಳೊಂದಿಗೆ ತಾನೂ ಓದುವಳು. ಅವರಿಬ್ಬರೂ ಒಂದೇ ತರಗತಿಯಲ್ಲಿ ಓದುತ್ತಿದ್ದರು.

ಶ್ಯಾಮಲಳೂ ಒಮ್ಮೊಮ್ಮೆ ಸ್ವರ್ಣಾಳ ಮನೆಗೆ ಬರುತ್ತಿದ್ದಳು. ಸ್ವರ್ಣಾ ತನ್ನ ಪಾಲಿನ ತಿಂಡಿಯಲ್ಲಿ ಅವಳಿಗೂ ಸ್ವಲ್ಪ ಕೊಡುತ್ತಿದ್ದಳು. ಆ ಎಳೆಯರ ನಿಷ್ಕಲ್ಮಷ ಗೆಳೆತನಕ್ಕೆ ಸಿರಿತನ-ಬಡತನ ಎಂಬ ಅಂತರ ಅಡ್ಡ ಬರಲಿಲ್ಲ.

ಮೊದಮೊದಲು ಸ್ವರ್ಣಾಳ ಚಿಕ್ಕಮ್ಮ ಅವಳ ಯಾವ ಕೆಲಸಕ್ಕೂ ಅಡ್ಡಿ ಮಾಡುತ್ತಿರಲಿಲ್ಲ. ಗಂಡ ಏನಾದರೂ ಹೇಳಿದರೆ ಎನ್ನುವ ಭಯ ಇತ್ತು. ಕಾಲಕ್ರಮೇಣ ಆ ಭಯ ಮಾಯವಾಯಿತು. ತಾನೇ ಸಾಮ್ರಾಜ್ಞಿಯಂತೆ ಮೆರೆದಳು. ಗಂಡ ಏನಾದರೂ ಹೇಳಿದರೆ "ನಿಮಗೇನು ಅಧಿಕಾರ? ಈ ಆಸ್ತಿ ನಿಮ್ಮದಲ್ಲ" ಎಂದು ಹೇಳುವಷ್ಟು ಧೈರ್ಯ ಆಕೆಗೆ ಈಗ ಬಂದಿದೆ. ಸ್ವರ್ಣಾಳ ತಂದೆ ಎಲ್ಲವನ್ನೂ ಸಹಿಸಿಕೊಳ್ಳಬೇಕಾಯಿತು. ಮರು ಮದುವೆಯಾದ ತಪ್ಪಿಗೆ ಪ್ರಾಯಶ್ಚಿತ್ತ ಅನುಭವಿಸಿದರು.

ಸ್ವರ್ಣಾ ಶ್ಯಾಮಲಳ ಮನೆಗೆ ಹೋದರೆ ಚಿಕ್ಕಮ್ಮನಿಂದ ಬೈಗುಳ. "ಆ ದರಿದ್ರರ ಮನೆಗೆ ಹೋಗುವುದಕ್ಕೂ ನಾಚಿಕೆಯಾಗುವುದಿಲ್ಲವೇ. ಅವರು ಕೊಟ್ಟಿದ್ದನ್ನು ತಿಂದು ಏನಾದರೂ ರೋಗ ಹಿಡಿಸಿದರೆ ಯಾರು ಮದ್ದು ತರುತ್ತಾರೆ" ಹೀಗೆ ಕಟುನುಡಿಗಳ ಸರಮಾಲೆ!

ಚಿಕ್ಕಮ್ಮ ಎಷ್ಟೇ ಬೈದರೂ ಸ್ವರ್ಣಾ ಶ್ಯಾಮಲಳ ಮನೆಗೆ ಹೋಗುವುದನ್ನು ನಿಲ್ಲಿಸಲಿಲ್ಲ. ಶ್ಯಾಮಲಳನ್ನೂ ತನ್ನ ಮನೆಗೆ ಕರೆದುಕೊಂಡು ಬರುತ್ತಿದ್ದಳು.

ಒಮ್ಮೆ ಶ್ಯಾಮಲ ಬಂದಾಗ ಸ್ವರ್ಣಾಳ ಚಿಕ್ಕಮ್ಮ ಬೈದಿದ್ದರು. "ಈ ಬಡವರ ಮನೆ ಹುಡುಗಿಯನ್ನು ನಮ್ಮ ಮನೆಗೆ ಯಾಕೆ ಬರಲು ಹೇಳಿದ್ದು. ಏನಿದು ಧರ್ಮಛತ್ರವಾ? ಇದೇ ಕೊನೆ. ಇನ್ನು ಅವಳು ಇಲ್ಲಿಗೆ ಬರಬಾರದು. ನೀನು ಅಲ್ಲಿಗೆ ಹೋಗಬಾರದು" ಎಂತಹ ಕಟ್ಟಪ್ಪಣೆ!

ಪಾಪ! ಆ ಎಳೆ ಕಂದಮ್ಮಗಳು ಮೂಕ ಹಕ್ಕಿಗಳಂತೆ ಕಣ್ಣೀರಿಟ್ಟವು. ಶ್ಯಾಮಲ ಅಳುತ್ತಲೇ ಮನೆ ಸೇರಿದಳು.

ಸ್ವರ್ಣಾಳಿಗೆ ಸಮಯ ಕಳೆಯಲು ಶ್ಯಾಮಲಳ ಮನೆಯಿತ್ತು. ಈಗ ಅಲ್ಲಿಗೆ ಹೋಗುವ ಆಸೆಯೂ ಇಲ್ಲ.

ಆ ರಾತ್ರಿಯಿಡೀ ಸ್ವರ್ಣಾ ಅತ್ತಳು. ತಾಯಿಯ ಮಮತೆಯಲ್ಲಿ ಬೆಳೆಯಬೇಕಾದ ಸಮಯದಲ್ಲಿ ಆ ಎಳೆ ಜೀವ ಮಲತಾಯಿಯ ಬಂಧನದಲ್ಲಿ ಸಿಲುಕಬೇಕಾಯಿತು.

ತರಗತಿಯಲ್ಲಿ ಇಬ್ಬರು ಗೆಳತಿಯರೂ ಬಾಯಿತುಂಬ ಮಾತಾಡಿಕೊಂಡರು. ಅವರ ಗೆಳೆತನ ಇನ್ನೂ ಹಾಗೆಯೇ ಇತ್ತು. ಮನಸ್ಸು-ಮನಸ್ಸು ಸಂಬಂಧಗಳನ್ನು ಯಾರಿಂದ ತಾನೇ ಮುರಿಯಲು ಸಾಧ್ಯ!

ಕಾಲ ಚಕ್ರಕ್ಕೆ ಯಾವುದೇ ಅಡೆತಡೆ ಇಲ್ಲವಲ್ಲ. ಎಳೆಯ ಹುಡುಗಿ ಸ್ವರ್ಣಾ ಈಗ ಕಾಲೇಜು ಮೆಟ್ಟಲು ಹತ್ತಿದ್ದಾಳೆ. ಅದೃಷ್ಟವಶಾತ್ ಆಕೆಯ ವಿದ್ಯಾಭ್ಯಾಸಕ್ಕೆ ಚಿಕ್ಕಮ್ಮನ ಅಡ್ಡಿಯಿರಲಿಲ್ಲ. ಶ್ಯಾಮಲ ಹತ್ತನೇ ತರಗತಿ ಪಾಸ್ ಮಾಡಿ ಮನೆ

ಯಲ್ಲೇ ಉಳಿದಳು. ಹಣದ ಅಡಚಣೆ ಇತ್ತು. ಸ್ವರ್ಣಳಿಗೆ ಬೇಸರವಾಯಿತು.

"ಅಮ್ಮ ಇರುತ್ತಿದ್ದರೆ ಈಗ ಶ್ಯಾಮಲ ಳಿಗೆ ಹಣ ಕೊಟ್ಟು ವಿದ್ಯಾಭ್ಯಾಸ ಮುಂದು ವರಿಸುವಂತೆ ಮಾಡುತ್ತಿದ್ದೆ. ಆದರೆ ಈಗ ಅವಳಿಗೆ ಹಣ ಕೊಡುವುದು ಹಾಗಿರಲಿ, ನನಗೆ ಬೇಕಾಗುವಷ್ಟು ಹಣ ಸಿಗುವುದೇ ಇಲ್ಲ." ಸ್ವರ್ಣಾ ಯೋಚಿಸದೇ ಇರಲಿಲ್ಲ. ಈಗ ಅವರಿಬ್ಬರ ಮಾತುಕತೆ ಪತ್ರದ ಮುಖಾಂತರ ಸಾಗುತ್ತಿತ್ತು.

ಚಿಕ್ಕಮ್ಮನಿಗೆ ಈಗ ಇಬ್ಬರು ಮಕ್ಕಳು. ದೊಡ್ಡವಳು ಏಳನೇ ತರಗತಿಯಲ್ಲಿ ಓದು ತ್ತಿದ್ದರೆ ಸಣ್ಣವ ನಾಲ್ಕನೇ ತರಗತಿಯಲ್ಲಿ ಓದುತ್ತಿದ್ದ. ಆ ಮಕ್ಕಳಿಬ್ಬರಿಗೂ ಅಕ್ಕ ನಲ್ಲಿ ತುಂಬಾ ಪ್ರೀತಿ. ಈಗ ಸ್ವರ್ಣಾಳಿಗೆ ಸ್ವಲ್ಪ ಸಮಾಧಾನ ಇತ್ತು. ಅದನ್ನೂ ಚಿಕ್ಕಮ್ಮ ಸಹಿಸುತ್ತಿರಲಿಲ್ಲ. ಮಕ್ಕಳನ್ನು ವಿನಾಕಾರಣ ಬೈಯುತ್ತಿದ್ದರು.

ಸ್ವರ್ಣಾ ಎಂ.ಕಾಂ. ಪದವೀಧರೆಯಾಗಿ ಬ್ಯಾಂಕೊಂದರಲ್ಲಿ ಉದ್ಯೋಗ ಸಿಕ್ಕಿತು. ಶ್ಯಾಮಲಳನ್ನು ಅಂಚೆ ತೆರಪಿನ ಮೂಲಕ ಎಂ.ಎ. ಮಾಡುವಂತೆ ಒತ್ತಾಯಿಸಿ ಹಣದ ಸಹಾಯವನ್ನೂ ಮಾಡಿದಳು. ಗೆಳತಿಯ ಪ್ರೀತಿಯ ಮುಂದೆ ಶ್ಯಾಮಲಳಿಗೆ ಇಲ್ಲ ಎನ್ನಲಾಗಲಿಲ್ಲ.

ಸ್ವರ್ಣಾಳಿಗೆ ಮದುವೆ ಮಾಡುವ ವಿಚಾರ ಚಿಕ್ಕಮ್ಮ ತನ್ನ ಗಂಡನಲ್ಲಿ ಹೇಳಿ ದರು. "ಆದಷ್ಟು ಬೇಗ ಆಕೆಯನ್ನು ಮನೆ ಯಿಂದ ಸಾಗಹಾಕಿದರೆ ಮುಂದೆ ಎಲ್ಲವೂ ತನ್ನ ಮಕ್ಕಳಿಗೇ" ದುರಾಸೆಯೊಂದು ತಲೆ ಯಲ್ಲಿ ಹೊಳೆಯಿತು.

ಸ್ವರ್ಣಾಳ ತಂದೆ ಅಲ್ಲಿ ಇಲ್ಲಿ ವಿಚಾರಿಸಿ ದರು. ಯೋಗ್ಯ ವರನೊಬ್ಬ ಸಿಕ್ಕಿದ. ಅತ ಕೂಡಾ ಬ್ಯಾಂಕ್ ಉದ್ಯೋಗಿ. ಶ್ರೀಮಂತ ಮನೆತನ. ವರದಕ್ಷಿಣೆ ಬೇಡ. ಎರಡೂ ಕಡೆಗೆ ಒಪ್ಪಿಗೆಯಾಗಿ ಮದುವೆಯೂ ನಿಶ್ಚಯ ವಾಯಿತು. ಸ್ವರ್ಣಾಳ ತಾಯಿಯ ಚಿನ್ನ ಹೇರಳವಾಗಿದ್ದರೂ ಚಿಕ್ಕಮ್ಮ ಕೊಡುವ ಮನಸ್ಸು ಮಾಡಲಿಲ್ಲ. ಸ್ವರ್ಣಾಳಿಗೆ ಅದರ ಮೇಲೆ ಆಸೆಯೂ ಇರಲಿಲ್ಲ. ಆದರೂ ಅದು ಅವಳಿಗೇ ಸೇರಬೇಕಾದುದು!

ಹುಡುಗನ ಮನೆಯವರೂ ಹಣ ವಾಗಲೀ, ಚಿನ್ನವಾಗಲೀ ಕೇಳಲಿಲ್ಲ. ಸ್ವರ್ಣಾಳ ಚಿಕ್ಕಮ್ಮನಿಗೆ ಖುಷಿಯೋ ಖುಷಿ, ಎಲ್ಲವೂ ತನಗೆ ಸಿಕ್ಕಿತೆಂದು.

ಎಂದಿನಂತೆ ಸ್ವರ್ಣಾ ಬ್ಯಾಂಕಿಗೆ ಹೊರಟಿ ದ್ದಳು. ದಿನವೂ ಹೋಗುವ ಬಸ್ಸಲ್ಲೇ ಪ್ರಯಾಣಿಸುತ್ತಿದ್ದಳು. ಅನಿರೀಕ್ಷಿತವಾಗಿ ಎದುರಿನಿಂದ ಬಂದ ಜೀಪೊಂದಕ್ಕೆ ಡಿಕ್ಕಿ ಹೊಡೆಯುವುದನ್ನು ತಪ್ಪಿಸಲೆಂದು ಪಕ್ಕಕ್ಕೆ ತಿರುಗಿದ ಬಸ್ಸು ಆಳವಾದ ಕಮರಿಯೊಂದಕ್ಕೆ ಬಿದ್ದಿತು. ಹತ್ತು ಜನರ ಜೀವಗಳನ್ನು ಬಲಿ ತೆಗೆದುಕೊಂಡ ಆ ಬಸ್ಸು ಸ್ವರ್ಣಾಳ ಎಡ ಗೈಯನ್ನೂ ಅವಳಿಂದ ಬೇರೆ ಮಾಡಿತು.

ಮತ್ತೆ ಹದಿನೈದು ದಿನದಲ್ಲಿ ಸ್ವರ್ಣಾಳ ಮದುವೆ ಎಂದಿತ್ತು. ಆ ದಿನ ಬ್ಯಾಂಕಿಗೆ ಹೋಗಿ ಮತ್ತೆ ಒಂದು ತಿಂಗಳು ರಜೆ ಹಾಕೋಣ ಎಂದು ಹೊರಟಿದ್ದಳು.

ಹಸೆಮಣೆಯಲ್ಲಿ ಕೂರಬೇಕಾದ ಸ್ವರ್ಣಾ ಆಸ್ಪತ್ರೆಯ ಹಾಸಿಗೆಯಲ್ಲಿ ಶೂನ್ಯದತ್ತ ದೃಷ್ಟಿ ಹಾಯಿಸಿ ಮಲಗಿದ್ದಳು. ಶ್ಯಾಮಲ ಅವಳನ್ನು ನೋಡಲೆಂದು ಹೋದಾಗ ಸ್ವರ್ಣಾ ಹೇಳಿದ ಮಾತು, "ಎಡಗೈಯೊಂದೇ

ಹೋಗಿದೆ. ಪುಣ್ಯಕ್ಕೆ ಬಲಗೈ ಉಳಿದಿದೆ. ನನಗೇನೂ ಬೇಸರವಿಲ್ಲ. ಬಂದದ್ದನ್ನು ಎದುರಿಸುವ ಧೈರ್ಯ ಬಂದಿದೆ. ನನ್ನ ಜೀವ ಹೋಗಲಿಲ್ಲ. ಇನ್ನೂ ಬದುಕುವ ಆಸೆ ನನ್ನಲ್ಲಿದೆ." ಯಾರಾದರೂ 'ನನ್ನ ಜೀವ ಹೋಗುತ್ತಿದ್ದರೆ ಒಳ್ಳೆದಿತ್ತು' ಎನ್ನುತ್ತಿದ್ದರು. ಆದರೆ ಸ್ವರ್ಣಾ ಹಾಗನ್ನಲಿಲ್ಲ. ಬಂದದ್ದನ್ನು ಧೈರ್ಯದಿಂದ ಎದುರಿಸುವ ಎದೆಗಾರಿಕೆ ಅವಳಲ್ಲಿತ್ತು. ಅಭಿಮನ್ಯುವಿನಂತೆ ಕೊನೆತನಕವೂ ಹೋರಾಟದ ಬದುಕು ಸಾಗಿಸುವ ಆಸೆ ಅವಳಿಗಿತ್ತು.

ಒಂದು ತಿಂಗಳ ಅನಂತರ ಸ್ವರ್ಣಾ ಚೇತರಿಸಿಕೊಂಡಳು. ಹುಡುಗನ ಮನೆಯವರು ಅವಳನ್ನು ತಂದುಕೊಳ್ಳಲು ತಯಾರಿದ್ದರು. ಹುಡುಗನಿಗೂ ಮನಸ್ಸಿತ್ತು. ಎಷ್ಟು ಒಳ್ಳೆ ಮನುಷ್ಯರು! ಯಾರಾದರೂ ಒಂಟಿ ಕೈಯ ಹುಡುಗಿಯನ್ನು ಮದುವೆಯಾಗಲು ಒಪ್ಪುವರೆ? ಆದರೆ ಅವರು ಆಕೆಗೊಂದು ಬಾಳು ಕೊಡಲು ತಯಾರಿದ್ದರು.

ಸ್ವರ್ಣ ಎಷ್ಟು ಮಾತ್ರಕ್ಕೂ ಒಪ್ಪಲಿಲ್ಲ. ನಾನಿನ್ನು ಒಂಟಿಯಾಗಿಯೇ ಬದುಕುತ್ತೇನೆ ಎಂದು ಹಠ ಹಿಡಿದಳು. ಯಾರು ಎಷ್ಟು ಹೇಳಿದರೂ ಮನಸ್ಸು ಬದಲಾಯಿಸಲಿಲ್ಲ.

ಶ್ಯಾಮಲ ಎಂ.ಎ. ಮುಗಿಸಿ ಮನೆಯಲ್ಲಿಯೇ ಇದ್ದಳು. ಆಕೆಯ ಮದುವೆಗಾಗಿ ಮನೆಯವರು ಪ್ರಯತ್ನಪಡುತ್ತಿದ್ದರು. ಸ್ವರ್ಣಾ ಮದುವೆ ನಿಶ್ಚಯವಾದ ಮೇಲೆ ಗೆಳತಿ "ನನ್ನ ಮದುವೆಯೇನೋ ನಿಶ್ಚಯವಾಯಿತು. ಆದರೆ ನೀನು ಮದುವೆಯಾಗದೇ ಉಳಿದಿದ್ದಿಯಲ್ಲ. ನನಗಿಂತ ನಿನಗೇ ಮೊದಲು ಆಗುತ್ತಿದ್ದರೆ ಒಳ್ಳೆದಿತ್ತು" ಎಂದಿದ್ದಳು. ಆದರೆ ಈಗ ಅವಳ ಮದುವೆಯೂ ನಿಂತಿತಲ್ಲ. ಆಕೆ ಇನ್ನು ಮದುವೆಯೇ ಆಗುವುದಿಲ್ಲ ಎಂದು ನಿರ್ಧಾರ ಕೈಗೊಂಡಿದ್ದಳು.

ಶ್ಯಾಮಲ ಆಗತಾನೇ ಸ್ನಾನ ಮಾಡಿ ಬಂದು ಹಣೆಗೆ ಬೊಟ್ಟು ಇಡುತ್ತಿದ್ದಳು. ನಾಯಿ ಬೊಗಳಿತು. ಆಕೆಯ ಅಮ್ಮ ಹೊರಗೆ ಬಂದು ನೋಡಿ "ನೋಡು ಶ್ಯಾಮಲ ಯಾರು ಬಂದಿದ್ದಾರೆ" ಎಂದು ಖುಷಿಯಿಂದ ಹೇಳಿದಾಗ ಯಾರಿರಬಹುದು ಎಂದು ನೋಡಲು ಹೊರಗೆ ಬಂದ ಶ್ಯಾಮಲಳಿಗೆ ಆಶ್ಚರ್ಯವೂ ಸಂತೋಷವೂ ಆಯಿತು. ಸ್ವರ್ಣಾ ಒಬ್ಬ ಯುವಕನೊಂದಿಗೆ ಬಂದಿದ್ದಾಳೆ. ಎಲ್ಲೋ ನೋಡಿದ ನೆನಪು. 'ಹೌದು ಸ್ವರ್ಣಾಳ ಮದುವೆ ಅವನೊಂದಿಗೆ ನಡೆಯುವುದಿತ್ತು. ಆದರೆ ಅವಳು ಕೈಯನ್ನು ಕಳೆದುಕೊಂಡ ನಂತರ ಮದುವೆಗೆ ಒಪ್ಪಲಿಲ್ಲ. ಈಗ ಪುನಃ ಮನಸ್ಸು ಬದಲಾಯಿಸಿರಬೇಕು. ಇಬ್ಬರೂ ಮದುವೆಗೆ ಹೇಳಲು ಬಂದಿರಬೇಕು! ಯೋಚನೆಯಲ್ಲಿ ಅವರನ್ನು ಕುಳಿತುಕೊಳ್ಳಲು ಹೇಳುವುದನ್ನು ಮರೆತಳು. ಅವರೇ ಕುಳಿತುಕೊಂಡರು. ಸ್ವರ್ಣಾಳೇ ಮಾತಿಗಿಳಿದಳು.

"ಇವಳೇ ಶ್ಯಾಮಲ, ನನ್ನ ಗೆಳತಿ" ಆ ಯುವಕನಿಗೆ ಪರಿಚಯಿಸಿದಳು.

"ಇವರ ಹೆಸರು ಮುರಳೀಧರ. ನನ್ನನ್ನು ಮದುವೆಯಾಗಲಿದ್ದವರು ನಿನ್ನನ್ನು ಪರಿಚಯಿಸೋಣ ಎಂದು ಇಲ್ಲಿಗೆ ಕರಕೊಂಡು ಬಂದೆ."

ಅಪರೂಪದಲ್ಲಿ ಗೆಳತಿ ಬಂದಿದ್ದಾಳೆ. ಏನನ್ನು ಮಾಡುವುದೆಂದು ಶ್ಯಾಮಲ

ಯೋಚಿಸಿದಳು. ಸ್ವಲ್ಪ ಅವಲಕ್ಕಿ ಇತ್ತು. ಬೆಲ್ಲ ಹಾಕಿ ಸಿಹಿ ಅವಲಕ್ಕಿ ಮಾಡಿದಳು. ಕಾಫಿಯನ್ನೂ ಮಾಡಿದಳು. ಅಪ್ಪ ಅಮ್ಮ ಹೊರಗೆ ಮಾತಿನಲ್ಲಿದ್ದರು. ಹೊರಗೆ ಆಡುವ ಮಾತೆಲ್ಲವೂ ಅವಳಿಗೆ ಕೇಳುತ್ತಿತ್ತು. ಎಲ್ಲವೂ ಅರ್ಥವಾಯಿತು. ಅಂದರೆ ಅವರು ನನ್ನನ್ನು ಮದುವೆಯಾಗಲು ಒಪ್ಪಿದ್ದಾರೆಯೇ? ಸ್ವರ್ಣಾಳೇ ಅವರಿಗೆ ಹೇಳಿದ್ದಿರಬಹುದು. ತನಗೆ ಒಲಿದು ಬಂದ ಭಾಗ್ಯವನ್ನು ನಿರಾಕರಿಸಿ ತನ್ನ ಗೆಳತಿಗೆ ಅದನ್ನು ದಯಪಾಲಿಸಿದ ಆಕೆಯ ತ್ಯಾಗ ಎಂಥ ವಿಚಿತ್ರ. "ಬಾರೇ ಹೊರಗೆ" ಎಂದು ಸ್ವರ್ಣಾ ಒಳ ಬಂದಾಗ ಶ್ಯಾಮಲ ಬಿಕ್ಕಿಬಿಕ್ಕಿ ಅಳುತ್ತಿದ್ದಳು. "ಸ್ವರ್ಣಾ ಇದೆಂಥ ನಿನ್ನ ತ್ಯಾಗ" ಎಂದು ಶ್ಯಾಮಲ ಗೆಳತಿಯ ಕೈಯನ್ನು ಹಿಡಿದು ಸಣ್ಣ ಮಗುವಿನಂತೆ ಬಿಕ್ಕಿದಳು.

"ಇದು ತ್ಯಾಗವಲ್ಲ ಶ್ಯಾಮಲ, ನಾನು ಮದುವೆಯಾಗುವುದೇ ಇಲ್ಲ. ಒಂಟಿ ಕೈಯ ನಾನು ಒಂಟಿಯಾಗಿಯೇ ಬದುಕಲು ಇಷ್ಟಪಡುತ್ತೇನೆ. ಅವರು ಬೇರೆ ಮದುವೆಯಾಗುವವರು. ಹಾಗಾಗಿ ನಿನ್ನನ್ನು ಒಮ್ಮೆ ಪರಿಚಯಿಸೋಣ ಎಂದು ಇಲ್ಲಿಗೆ ಕರಕೊಂಡು ಬಂದೆ. ಅವರಿಗೆ ಒಪ್ಪಿಗೆಯಂತೆ. ಅವರಿಗೆ ಒಪ್ಪಿಗೆಯಾದ ಮೇಲೆ ಮನೆಯವರಿಗೂ ಒಪ್ಪಿಗೆಯಾದಂತೆ. ಬೇಡ ಎನ್ನಬೇಡ. ನನ್ನ ಮಾತನ್ನು ತಿರಸ್ಕರಿಸಿ ನನ್ನ ಮನಸ್ಸನ್ನು ನೋಯಿಸುವೆಯಾ" ಸ್ವರ್ಣಾಳ ಮಾತಿಗೆ ತಲೆ ಬಾಗಲೇ ಬೇಕಾಯಿತು.

ಯಾರೊಂದಿಗೋ ನಡೆಯಬೇಕಾದ ಮದುವೆ ಇನ್ನಾರೊಂದಿಗೋ ನಡೆಯಿತು.

ಸ್ವರ್ಣಾ ಎಂದೂ ಕಡೆಯುವರೊಂದಿಗೆ ತ ಯಿಂದಲೇ ಮಾತನಾಡಿದಳು.

ವರ್ಷಗಳು ಕಳೆದುವು. ಶ್ಯಾಮಲ ಎ ಮಕ್ಕಳ ತಾಯಿ. ಇಬ್ಬರೂ ಶಾ ಹೋಗುತ್ತಿದ್ದಾರೆ. ಸ್ವರ್ಣಾಳ ತ ವಿಧವರರಾಗಿದ್ದರು. ಈಗ ಅವ ಚಿಕ್ಕಮ್ಮನ ಕಾತುಬಾರು ಸ್ವಲ್ಪ ಕಡ ಯಾಗಿತ್ತು. ಸ್ವರ್ಣಾ ಯಾವುದೇ ಜಗ್ಗದ ಕಾರಣದಿಂದಲೇ ಚಿಕ್ಕಮ್ಮ ಸ್ವ ಕೆಣ್ಣಗಾದ್ದು. ಗೆಳತಿಯರ ಪತ್ರ ವ್ಯವಹಾ ನಡೆಯುತ್ತಲೇ ಇತ್ತು.

"ಇನ್ನೂ ಎಷ್ಟಿದೆಯಮ್ಮಾ" ಮಕ್ಕ ಕೇಳಿದಾಗ ಶ್ಯಾಮಲ ಯೋಚನಾಲೋ ದಿಂದ ಹೊರ ಬಂದಳು. ಮತ್ತೆ ಎ ನಿಮಿಷದ ದಾರಿ ಇತ್ತು.

ಬಸ್ಸಿನಿಂದಿಳಿದು ಶ್ಯಾಮಲ ಮ ಳೊಂದಿಗೆ ತಾಯಿ ಮನೆಗೆ ಹೋದ ಪೇಟೆಯಲ್ಲಿ ಬೆಳೆದ ಮಕ್ಕಳಿಗೆ ಹಳ್ಳಿ ದೃಶ್ಯವನ್ನು ನೋಡುವಾಗ ಬಹಳ ಆನ ವಾಗುತ್ತದೆ. ಅವರು ಅವರದೇ ಲೋಕದ ವಿಹರಿಸುತ್ತಿದ್ದರು.

ಶ್ಯಾಮಲ ಮನೆ ತಲುಪಿ ನೀರೂ ಕು ಯದೆ "ಅಮ್ಮಾ ಸ್ವರ್ಣಾ ಸತ್ತಿದ ನಿಜವೇ" ಎಂದು ಕೇಳಿದಳು

"ಸತ್ತದ್ದು ಅಲ್ಲ, ಕೊಂದದ್ದು !"

"ಅಂದರೇನಮ್ಮ ?"

"ಅವಳ ಚಿಕ್ಕಮ್ಮ ಪ್ರೀತಿಯ ನಾಟ ಮಾಡಿ ಹಾಲಿಗೆ ವಿಷ ಬೆರೆಸಿ ಕೊಟ್ಟದ್ದು ಸ್ವರ್ಣಾಳಿಗೇಕೋ ಗೊತ್ತಾಗಲಿಲ್ಲ. ಅವಳ ಅಷ್ಟು ಸುಲಭದಲ್ಲಿ ನೋಡ ಹೋಗುವ ಳಲ್ಲ. ಪಾಪ! ಅವಳ ಆಯುಷ್ಯವೇ ಅಷ್ಟು. ದಿನ ಬಸ್ಸು ಬಿದ್ದಿರುವಾಗ ಸಾಯುವವಳು

...ಷ್ಟು ದಿನ ಬದುಕುವುದಿತ್ತು. ಜೀವಾ ...ಷ್ಟು ಕಷ್ಟಪಟ್ಟಳು. ಅವಳು ಮನೆಯನ್ನು ...ರಕವಾಗಿ ಊರೆಲ್ಲಾ ಆಸ್ತಿಯನ್ನು ...ಮಾಜ ಸೇವಾ ಸಂಸ್ಥೆಗೆ ಕೊಡುವ ...ದಾನಪತ್ರವಿದ್ದಳಂತೆ, ಹಾಗಾಗಿ ಚಿಕ್ಕಮ್ಮ ...ಪಿತೂರಿ ಮಾಡಿದ್ದಿರಬೇಕು."

"ಇದೆಲ್ಲ ನಿನಗೆ ಹೇಗೆ ಗೊತ್ತಾಯಿತು ...ಮ್ಮ."

"ಸ್ವರ್ಣಾಳು ದುಡಿಯುತ್ತಿದ್ದ ಬ್ಯಾಂಕ್ ...ದ್ಯೋಗಿಗಳಿಗೆಲ್ಲ ಅನುಮಾನ ಬಂದು ...ಲಧಿಕಾರಿಗಳಿಗೆ ದೂರು ಸಲ್ಲಿಸಿದ್ದರು. ...ರು ಬಂದು ಗದರಿಸಿದಾಗ ಚಿಕ್ಕಮ್ಮ ...ಹೇಳಲೇಬೇಕಾಯಿತು. ಸುದ್ದಿ ಒಬ್ಬ ...ದ ಒಬ್ಬರಿಗೆ ಹರಡಿತು. ಸ್ವರ್ಣಾ ...ಯ ಹಕ್ಕನ್ನು ಸಮಾಜ ಸೇವಾ ...ಸ್ಥೆಗೆ ಬರೆದಿಟ್ಟಿದ್ದಾಳಂತೆ."

ಆಗಲೇ ಕತ್ತಲಾಯಿತು. ಹೇಗ್ಯಾ ...ಡನೆ ಸ್ವರ್ಣಾಳ ಮನೆಗೆ ಹೋಗಿ ...ಯ ಚಿಕ್ಕಮ್ಮನನ್ನು ದಬಾಯಿಸ ...ಬೇಕೆಂಬ ಯೋಚನೆ ಶ್ಯಾಮಲಳಿಗೆ ಬಂತು. ...ದ. ಯಾಕೆ, ಇನ್ನೇನು ಪ್ರಯೋಜನ, ಸ್ವರ್ಣಾ ಹೇಗೂ ಬರಲಾರಳು. ಸುದ್ದಿ ಹೇಳದಲ್ಲಿ ಬಂದರೆ ಸಾಕು' ಶ್ಯಾಮಲ ಊಟದ ಶಾಸ್ತ್ರ ಮಾಡಿ ಮಲಗಿದಳು. ಆಯಾಸವಾಗಿದ್ದರೂ ಶ್ಯಾಮಲಳಿಗೆ ಸ್ವಲ್ಪವೂ ನಿದ್ದೆ ಬರಲಿಲ್ಲ. ಸತ್ತ ಗೆಳತಿಯದೇ ನೆನಪು.

ಮಕ್ಕಳನ್ನು ಮನೆಯಲ್ಲೇ ಬಿಟ್ಟು ಶ್ಯಾಮಲ ಮಂಗಳೂರಿಗೆ ಹೋದಳು. ಸಂಜೆಯ ಸಮಯ, ನಿನ್ನೆಯ ಹುಡುಗ 'ಆಸ್ತಿಯ ಆಸೆಯಿಂದ ಚಿಕ್ಕಮ್ಮನಿಂದ ಯುವತಿಯ ಕೊಲೆ! ಹೇಳುತ್ತಾ ಪೇಪರ್ ಮಾರುತ್ತಿದ್ದ.

ಕುತೂಹಲದಿಂದ ಶ್ಯಾಮಲ ಪೇಪರ್ ತೆಗೆದುಕೊಂಡು ಅಲ್ಲೇ ಓದಿದಳು. ಸ್ವರ್ಣಾಳ ವಿಷಯವೇ. ನಿನ್ನೆ ಶ್ಯಾಮಲಳ ತಾಯಿ ಹೇಳಿದ ವಿಷಯವೆಲ್ಲಾ ಇತ್ತು.

"ನಿನ್ನೆ ಹಾಗೆ, ಇಂದು ಹೀಗೆ ಇನ್ನು ನಾಳೆ ಹೇಗೆ ಸುದ್ದಿಯಾಗುತ್ತದೋ, ಅಂತೂ ಸ್ವರ್ಣಾ ಇನ್ನಿಲ್ಲ" ನಿಟ್ಟುಸಿರೊಂದನ್ನು ಬಿಟ್ಟು, ಶ್ಯಾಮಲ ರೂಮಿನ ಕಡೆಗೆ ನಡೆದಳು.

ಯಾರು ಯಾವಾಗಲೂ ಅಜಾಗರೂಕರಾಗಿರುತ್ತಾರೆಯೋ, ಅಂಥವರು ಯಾವಾಗಲೂ ದುಃಖಿಗಳಾಗಿರುತ್ತಾರೆ. ಯಾರು ಯಾವಾಗಲೂ ಜಾಗರೂಕತೆಯಿಂದ ಇರುತ್ತಾರೆಯೋ ಅಂಥವರು ಯಾವಾಗಲೂ ಸುಖಿಗಳಾಗಿರುತ್ತಾರೆ.

—ಭಗವಾನ್ ಮಹಾವೀರ

ಅವಿಸ್ಮರಣೀಯ ಜ್ಯಾಕ್ ಗಿಬ್ಸನ್

ಲಲಿತ ಎ. ಪಿ.
೩೫, 'ಶ್ರೀಪಾದುಕ'
ಒಂದನೆಯ ಮುಖ್ಯ ರಸ್ತೆ
ಜಯಲಕ್ಷ್ಮೀಪುರ, ಮೈಸೂರು

ವಿದ್ಯಾರ್ಥಿ ನಿಲಯದಲ್ಲಿ ಹಾಸಿಗೆಯ ಮೇಲೆ ಮೈ ಚೆಲ್ಲಿದ ನಾನು ನಿದ್ರೆ ಬಾರದೆ ಚಡಪಡಿಸ ತೊಡಗಿದೆ. ಬದುಕಿನಲ್ಲಿ ಹಿಂದೆಂದೂ ಎದುರಾಗಿರದ ಸಂದಿಗ್ಧತೆ ಇಂದು ನನ್ನೆದುರು ಮೈದಳೆದು ನಿಂತಿದೆ! ಮೇಯೋ ಕಾಲೇಜ್ ಶಾಲೆಯ ನಾಯಕನಾಗಿ ನನ್ನನ್ನು ಆರಿಸಿದ್ದಾರೆ ಮತ್ತು ಮರು ಮುಂಜಾನೆ ಪ್ರಾಂಶುಪಾಲ ಜೆ.ಟಿ.ಎಂ. ಜ್ಯಾಕ್ ಗಿಬ್ಸನ್ ಔಪಚಾರಿಕವಾಗಿ ನನ್ನ ಒಪ್ಪಿಗೆ ಕೇಳಲಿದ್ದಾರೆ ಎಂದು ಅದೇ ಕೆಲವು ತಾಸುಗಳ ಮುನ್ನವಷ್ಟೇ ನನಗೆ ತಿಳಿಯಿತು.

ಬಹುತೇಕ ಹುಡುಗರು ನನ್ನ ಸ್ಥಾನದಲ್ಲಿರುತ್ತಿದ್ದರೆ ಸಂಭ್ರಮಾಶ್ಚರ್ಯಗಳಿಂದ ರೋಮಾಂಚನಗೊಳ್ಳುತ್ತಿದ್ದರು. ಏಕೆಂದರೆ ಶಾಲಾ ನಾಯಕತ್ವ ಅಧಿಕಾರ ಮತ್ತು ಪ್ರತಿಷ್ಠೆಯ ಪ್ರತೀಕ. ಆದರೆ ನನಗೋ ಎಲ್ಲಿಲ್ಲದ ದಿಗಿಲು, ಅಳುಕು ಮತ್ತು ಅಭದ್ರ ಭಾವ. ಹದಿನಾಲ್ಕು ವರ್ಷದ ಕಪ್ಪು ಚರ್ಮದ ನಾನು ಆ ಪ್ರಭಾವಶಾಲೀ ನಾಯಕಸ್ಥಾನಕ್ಕೆ ತೀರ ಚಿಕ್ಕವನು ಮತ್ತು ಅನರ್ಹ ಎಂದು ನನಗನ್ನಿಸಿತು. ನನಗಿಂತ ಹಿರಿಯ ಮತ್ತು ಬಲಿಷ್ಠ ಸಹಪಾಠಿಗಳು ನನ್ನನ್ನು ಅಣಕಿಸುವುದರಲ್ಲಿ ಅನುಮಾನ… ಇರಲಿಲ್ಲ. ನಾಯಕನಾಗುವುದೆಂದರೆ ಅನ… ಸಮಸ್ಯೆಗಳನ್ನು ಮತ್ತು ಅಪಮಾನಗಳನ… ಆಹ್ವಾನಿಸಿದಂತೆ ಎಂದು ತೋರಿತು.

ಆದರೆ ನಾನೇನು ಮಾಡಲು ಶಕ… ಗಂಟೆಗಟ್ಟಲೆ ಚಿಂತಿಸಿದೆ. ಕೊನೆಗೂ ಪರಿಹ… ಹುಡುಕಿದೆ. ಮರು ಬೆಳಗ್ಗೆ ಗಿಬ್ಸನ… ಎದುರು ಇತರ ಭಾವೀ ಹಿರೀಮ… ಗಳೊಂದಿಗೆ ಸಾಲಿನಲ್ಲಿ ನಿಂತೆ. ಆಳವ… ಉಸಿರನ್ನೆಳೆದು ಹೆಜ್ಜೆ ಮುಂದಿಕ್ಕಿ ಕ… ಸುತ್ತ ನಾನಂದೆ "ನಾನು ನಾಯಕನಾಗ… ಬಯಸುವುದಿಲ್ಲ."

ಒಂದಿಷ್ಟು ಪ್ರೇರಣೆ

"ಯಾಕೆ ಇಲ್ಲ?" ಗಿಬ್ಸನ್‌ರು ಪ್ರಶ್ನಿ… ದರು. ನನ್ನೊಳಗಿನ ಅಧೀರತೆಯು ನ… ಬಿಚ್ಚಿಡಲು ಸಾಧ್ಯವಾಗಲಿಲ್ಲ. ಹಾಗ… ತೊದಲಿದೆ "ಈ ಗುರುತರ ಜವಾಬ… ಯನ್ನು ನಿಭಾಯಿಸಲು ನಾನು ಶಕ್ತನಲ್ಲ…

ಕೊಳವೆಯಿಂದ ಹೊಗೆ ಉಗುಳು… ಒಂದೆರಡು ಕ್ಷಣ ಗಿಬ್ಸನ್ ನನ್ನನ್ನು ಗ…

೧೯೯೬ರ ಜೂನ್ ತಿಂಗಳಿನ 'ರೀಡರ್ಸ್ ಡೈಜೆಸ್ಟ್'ನಲ್ಲಿ ಪ್ರಕಟವಾದ ಅಶೋಕ್ ವ… ದೇವನ್ ಅವರ "ಅನ್‌ಫರ್‌ಗೆಟಬಲ್ ಜ್ಯಾಕ್ ಗಿಬ್ಸನ್" ಲೇಖನ.

...ಾಗಿ ನಿಟ್ಟಿಸಿದರು. ಆಮೇಲೆ ಬಲು ಶಾಂತ ...ಾಗಿ ಆದರೆ ಅಷ್ಟೇ ನಿಖರವಾಗಿ ನುಡಿದರು ...ನೀನು ನಿರಾಕರಿಸಲು ಸಾಧ್ಯವೇ ಇಲ್ಲ. ...ನಗನ್ನಿಸುತ್ತದೆ, ನೀನು ಪ್ರಥಮ ...ೇಯಾಂಕದವನು."

ನಾನು ಅಭಿಮಾನದಿಂದ ನಾಚಿದೆ, ನಂಬಿಕೆ ...ಡುವ ಮೂಲಕ ಗಿಬ್ಸನ್‌ರು ನನ್ನಲ್ಲಿ ...ತ್ಮವಿಶ್ವಾಸ ತುಂಬಿದರು. ವಾಸ್ತವವಾಗಿ ...ನ್ನೆಲ್ಲ ಅಪನಂಬಿಕೆ, ಹಿಂಜರಿಕೆಗಳು ಆಧಾರ ...ಹಿತವಾಗಿದ್ದುವು. ಮಾತ್ರವಲ್ಲ, ನಾನು ...ಧಿಕಾರದ ಸುಖಾನುಭವವನ್ನು ಸವಿದೆ.

ಅಕ್ಟೋಬರ್ ೧೯೯೪ರಲ್ಲಿ ಜ್ಯಾಕ್ ...ಬ್ಸನ್‌ರು ನಿಧನರಾದ ವಾರ್ತೆ ಕೇಳಿದಾ ...ಕ್ಷಣ ನೆನಪುಗಳು ಹಿಂದಕ್ಕೋಡಿದುವು; ಈ ...ೃಶ್ಯ ಸ್ಮೃತಿಪಟಲದಲ್ಲಿ ಮೂಡಿತು. ...ಮೂವತ್ತೊಂದು ವರ್ಷಗಳಷ್ಟು ಹಿಂದಿನ ... ದಿನದ ಅರ್ಥ ಇದ್ದಕ್ಕಿದ್ದಂತೆ ನನ್ನೆದುರು ...ೆರೆದುಕೊಂಡಿತು! ನಿಜಕ್ಕೂ ಅಂದು ನಡೆದು ...ೇನು? ನನ್ನ ಅಂಜಿಕೆಯನ್ನು ಜ್ಯಾಕ್ ...ುರುತಿಸಿದ್ದರು. ಜೊತೆಗೆ ನಾನು ತೀರ ...ಮುಖಹೇಡಿಯಲ್ಲ, ಒಂದಿಷ್ಟು ಪ್ರೇರಣೆ ...ನ್ನ ಸಂಕೋಚದ ಚಿಪ್ಪನ್ನು ಒಡೆಯಲು ...ಮರ್ಥ ಎನ್ನುವುದನ್ನೂ ಅವರು ಅರಿತಿ ...್ದರು. ಅವರು ಅಂಥ ತಿದಿಯೊತ್ತಿದರು ...ುತ್ತು ನಾನು ಬೆಳೆಯಲು ಪ್ರೇರಕ ಶಕ್ತಿ ...ಮಾದರು.

ಭಾರತದ ಸೇವೆಗಾಗಿ ತಮ್ಮ ಬದುಕನ್ನೇ ...ುಡಿಪಾಗಿಟ್ಟ ಹಲವಾರು ಆಂಗ್ಲರ ಪೈಕಿ ...ಬ್ಸನ್‌ರದು ಒಂದು ಶಾಶ್ವತ ಹೆಸರು. ...ವರು ಯೋಗ್ಯ ವಿದ್ಯಾರ್ಥಿಗಳನ್ನು ರೂಪಿ ...ುವ ಶ್ರೇಷ್ಠ ಶಿಕ್ಷಕ ಮಾತ್ರ ಆಗಿರಲಿಲ್ಲ; ...ಮ್ಮಂತಹ ಎಷ್ಟೋ ವಿದ್ಯಾರ್ಥಿಗಳಿಗೆ ಎಲ್ಲವೂ ಆಗಿದ್ದರು–ಸಮರ್ಥ, ಅಕುಟಿಲ, ಉದಾರಿ, ನ್ಯಾಯಶೀಲ....ವರುಷಗಳು ಕಳೆದಂತೆ ಜ್ಯಾಕ್ ಇನ್ನಷ್ಟು ಅಪೂರ್ವರೆನಿಸುತ್ತಾರೆ.

ಗಿಬ್ಸನ್‌ರು ವಿಶ್ವದರ್ಜೆಯ ಪರ್ವತಾರೋಹಿ ಮತ್ತು ಕತ್ತಿವರಸೆ ಪ್ರವೀಣ. ಉತ್ತಮ ಕ್ರೀಡಾಪಟು. ಆದರೆ ಜ್ವರದ ಬಳಲಿಕೆಯಿಂದಾಗಿ ೧೯೩೨ರ ಒಲಂಪಿಕ್ಸ್‌ನಲ್ಲಿ ಇಂಗ್ಲೆಂಡನ್ನು ಪ್ರತಿನಿಧಿಸುವ ಅವಕಾಶದಿಂದ ವಂಚಿತರಾದರು. ಗಿಬ್ಸನ್‌ರು ಪ್ರಥಮ ವರ್ಗದ ಛಾಯಾಚಿತ್ರಗಾರ, ಜ್ಞಾನಸಂಪನ್ನ ಪಕ್ಷಿವೀಕ್ಷಕ, ದಕ್ಷ ತೋಟಿಗ ಮತ್ತು ಉತ್ತಮ ಲೇಖಕ.

ಗಿಬ್ಸನ್‌ರ ಶ್ರೇಷ್ಠ ಸಾಧನೆಗಳಲ್ಲಿ ಅಜ್ಮೀರಿನ ಮೇಯೋ ಕಾಲೇಜಿನ ಪರಿವರ್ತನೆಯೂ ಒಂದು. ೧೮೭೫ರಲ್ಲಿ ರಾಜಸ್ಥಾನದ ಕುಲೀನ ಮನೆತನದವರಿಗೋಸ್ಕರ ಆ ಕಾಲೇಜನ್ನು ಸ್ಥಾಪಿಸಲಾಗಿತ್ತು. ಪತನದ ಅಂಚಿಗೆ ಸಾಗಿದ್ದ ಅದರ ಆಡಳಿತವನ್ನು ಜನವರಿ, ೧೯೫೪ರಲ್ಲಿ ಗಿಬ್ಸನ್‌ರು ವಹಿಸಿಕೊಂಡರು. ಆಗ ಅದರ ವಿದ್ಯಾರ್ಥಿಗಳ ಸಂಖ್ಯೆ ಸುಮಾರು ೧೫೦ ಮಾತ್ರ! ಸಂಸ್ಥೆ ದಿವಾಳಿಯೆದ್ದಿತ್ತು, ಶೈಕ್ಷಣಿಕ ಗುಣಮಟ್ಟ ಕುಸಿದಿತ್ತು. ಹದಿನೈದು ವರ್ಷಗಳ ಬಳಿಕ ನಿವೃತ್ತರಾದಾಗ ಮೇಯೋದಲ್ಲಿ ಭಾರತದ ವಿಭಿನ್ನ ಭಾಗಗಳ ಸುಮಾರು ೬೦೦ ವಿದ್ಯಾರ್ಥಿಗಳಿದ್ದರು. ಅಲ್ಲಿ ಆರ್ಥಿಕ ದೃಢತೆ ಇತ್ತು, ದೇಶದ ಅತ್ಯುತ್ತಮ ಶಾಲೆಯೆಂದು ಖ್ಯಾತಿ ಪಡೆದಿತ್ತು.

ಯುಕ್ತವ್ಯಕ್ತಿ

ಭಾರತದಲ್ಲಿ ಮೂರು ದಶಕಗಳಿಗೂ ವಿಹಾರಿ ಗಿಬ್ಸನ್‌ರು ಅಧ್ಯಾಪಕ ಮತ್ತು

ಆಡಳಿತಾಧಿಕಾರಿಗಳಾಗಿ ಸೇವೆ ಸಲ್ಲಿಸಿದರು. ನಾಗರಿಕ ಅಧಿಕಾರಿ, ವಾಣಿಜ್ಯೋದ್ಯಮಿ, ಸೇನಾಧಿಕಾರಿ, ವೈದ್ಯ.... ಹೀಗೆ ಹತ್ತು ಹಲವು ಕ್ಷೇತ್ರಗಳ ಉನ್ನತ ಸ್ಥಾನಗಳನ್ನು ಅಲಂಕರಿಸುವಂತೆ ಸಹಸ್ರಾರು ವಿದ್ಯಾರ್ಥಿಗಳನ್ನು ಅವರು ರೂಪಿಸಿದರು. ಭಾರತೀಯ ವಾಯು ಮಾರ್ಗದ ಆಡಳಿತಾಧಿಕಾರಿ ಪ್ರೊಬೀರ್ ಸೇನ್ ವಿನಮ್ರರಾಗಿ ಒಪ್ಪಿಕೊಳ್ಳುತ್ತಾರೆ "ಜ್ಯಾಕ್ ಗಿಬ್ಸನ್‌ರಂತೆ ನನ್ನನ್ನು ಪ್ರಭಾವಿಸಿದ ವ್ಯಕ್ತಿಗಳು ಅತಿ ವಿರಳ. ಅವರ ಅದ್ಭುತ ವ್ಯಕ್ತಿತ್ವದ ಪರಿಚಯ ನನ್ನ ಜೀವನದ ಅಮೂಲ್ಯ ಆಶೀರ್ವಾದಗಳಲ್ಲೊಂದು".

ಡೆಹ್ರಾಡೂನಿನಲ್ಲಿ ಹೊಸದಾಗಿ ಸ್ಥಾಪಿತವಾಗಿದ್ದ 'ಡೂನ್' ಶಾಲೆಗೆ ೧೯೩೭ರಲ್ಲಿ ಗಿಬ್ಸನ್ ಕೇವಲ ಅಧ್ಯಾಪಕರಾಗಿ ಬಂದರು —ಓರ್ವ ಉದ್ಯೋಗಿ ಅಷ್ಟೆ! ಹೀಗೆ ಈ ದೇಶದಲ್ಲಿ ಅವರ ಜೀವನ ಯಾತ್ರೆ ಆರಂಭವಾಯಿತು. ಇಂಗ್ಲೆಂಡ್ ಮತ್ತು ಸ್ವಿಟ್ಜರ್ಲೆಂಡ್ ಶಾಲೆಗಳಲ್ಲಿಯ ಅಧ್ಯಾಪನಾನುಭವದ ಹಿನ್ನೆಲೆ ಅವರಿಗಿತ್ತು. ಆಗ ಅವರು ಅದಮ್ಯ ಚೇತನ, ಕನಸು ಮತ್ತು ಆದರ್ಶಗಳಿಂದ ಬಿರಿಯುತ್ತಿದ್ದ ಪುಟಿಯುವ ಯೌವನದ ಇಪ್ಪತ್ತೊಂಬತ್ತರ ಹರೆಯದ ತರುಣ. ಸಾಹಸೀ ಕ್ರೀಡೆಗಳಿನ್ನೂ ಭಾರತದಲ್ಲಿ ಜನಪ್ರಿಯವಾಗಿರದಿದ್ದ ಕಾಲವದು. ಪರ್ವತಾರೋಹಣ, ಚಾರಣ, ಸ್ಕೀಯಿಂಗ್, ನದಿ ಉತ್ತರಣೆಗಳಂತಹ ಸಾಹಸೀ ಕ್ರೀಡೆಗಳನ್ನು ಭಾರತದಲ್ಲಿ ಜನಪ್ರಿಯಗೊಳಿಸಿದ ಕೀರ್ತಿ ಗಿಬ್ಸನ್‌ರಿಗೆ ಸಲ್ಲುತ್ತದೆ.

ಡೂನ್ ಶಾಲೆಯಲ್ಲಿ ಶಿಕ್ಷಣ ಪಡೆದು ಮುಂದೆ ಹಿಂದೂಸ್ಥಾನ್ ಲಿವರ್‌ನ ಮುಖ್ಯಸ್ಥ ಮತ್ತು ಯೋಜನಾ ಆಯೋಗ ಸದಸ್ಯರಾಗಿದ್ದ ವಸಂತ ರಾಜಾಧ್ಯಕ್ಷ ಹೇಳುತ್ತಾರೆ "ನಾನೆಂದೂ ಗವಿಗಳನ್ನು ಶೋಧಿಸಿದವನಲ್ಲ. ಆದರೂ ಶೋಧಕ ಆನಂದಾನುಭೂತಿಯನ್ನು ಪಡೆದಿದ್ದೇನೆ. ಜ್ಯಾಕ್ ತಮ್ಮ ಅಭಿರುಚಿಗಳನ್ನು ನಮ್ಮ ಅರಿವಿಗೆ ಬಾರದಂತೆ ನಮ್ಮಲ್ಲಿ ಬಿತ್ತಿಬಿಡುತ್ತಾರೆ."

ಅಸಾಂಪ್ರದಾಯಿಕ ವಿಧಾನಗಳು

ಡೂನ್ ಶಾಲೆಯ ಬಳಿಕ ಜ್ಯಾಕ್ 'ಭಾರತೀಯ ಸೈನಿಕದಳ ಅಕಾಡೆಮಿ'ಯ ಎರಡು ವರ್ಷ ಪ್ರಥಮ ಪ್ರಾಂಶುಪಾಲರಾದ್ದರು. ಅನಂತರ ಜನವರಿ ೧೯೫೪ರಲ್ಲಿ ಅವರು 'ಮೇಯೋ'ದ ಅಧಿಕಾರ ವಹಿಸಿಕೊಂಡರು.

ಆರಂಭದಲ್ಲಿ ಗಿಬ್ಸನ್‌ರು ಮೇಯೋ ೧೭೦ ಹೆಕ್ಟೇರ್ ಆವರಣವನ್ನು ತಮ್ಮ ಕುಂಕುಮ ಬಣ್ಣದ ಜೀಪಿನಲ್ಲಿ ಒಂದೇ ಸಮನೆ ಸುತ್ತಿದರು. ವಿದ್ಯಾರ್ಥಿಗಳ ದ್ವಿಗುಣಿತ ಉತ್ಸಾಹ-ಶ್ರದ್ಧೆಗಳಿಂದ ಮುನ್ನಡೆಯುವಂತೆ ಗರ್ಜಿಸಿದರು. ಗಿಬ್ಸನ್‌ರು ಮಾಮೂಲಿ ಶರಟು, ಪೈಜಾಮ ಮತ್ತು ಪಠಾಣ ಚಪ್ಪಲಿಗಳನ್ನು ಧರಿಸಿದ್ದರೂ, ಅವರ ಎತ್ತರ, ದೇಹದಾರ್ಢ್ಯ ಗಂಭೀರ ನಿಲುವು ಮತ್ತು ಸುಸಂಬದ್ಧ ನಡವಳಿಕೆಗಳು ಎಲ್ಲರನ್ನೂ ಸೂಜಿಗಲ್ಲಿನಂ ಸೆಳೆದವು. ಅವರೊಬ್ಬ ಕರ್ತವ್ಯನಿಷ್ಠ ವ್ಯವಹಾರ ಚತುರ ಎನ್ನುವುದು ಆರಂದಲ್ಲೇ ಸ್ಪಷ್ಟಗೊಂಡಿತು.

ಪ್ರಾಂಶುಪಾಲರಾಗಿದ್ದ ಕಾರಣ ಗಿಬ್ಸನ್‌ರು ಪಾಠ ಮಾಡಬೇಕಾದ ಅಗತ್

ವಿರಲಿಲ್ಲ. ಆದರೂ ಅವರು ಇಂಗ್ಲಿಷ್ ಮತ್ತು ಭೂಗೋಳ ಶಾಸ್ತ್ರವನ್ನು ವಾರಕ್ಕೆ ೧೨ ಗಂಟೆಗಳ ಕಾಲ ಸ್ವಯಂ ಆಸಕ್ತಿಯಿಂದ ಕಲಿಸುತ್ತಿದ್ದರು..

"ಅವರೋರ್ವ ಅಸಾಂಪ್ರದಾಯಿಕ, ಉತ್ತೇಜನಕಾರಿ, ಅಪೂರ್ವ ಅಧ್ಯಾಪಕ"— ಗಿಬ್ಸನ್‌ರ ವಿದ್ಯಾರ್ಥಿಯಾಗಿದ್ದ ದರ್ಶನ ಲಾಲ್, ಬಿ.ಎ.ಎಸ್.ಎಫ್. ಇಂಡಿಯಾ ಲಿಮಿಟೆಡ್‌ನ ಮುಖ್ಯ ಕಾರ್ಯನಿರ್ವಾಹಕರು ನೆನಪಿಸಿಕೊಳ್ಳುತ್ತಾರೆ "ಖ್ಯಾತ ಸಾಹಿತಿ ಜಾರ್ಜ್ ಎಲಿಯೆಟ್‌ನ ನಿಜ ನಾಮಧೇಯವನ್ನು ಹುಡುಕುವಂತೆ ಒಂದು ದಿನ ಅವರು ಸೂಚಿಸಿದರು. ಮೊದಲು ನನಗೆ ದಿಕ್ಕೇ ತೋಚಲಿಲ್ಲ. ಅನಂತರ ಎನ್‌ಸೈಕ್ಲೋಪಿಡಿಯಾವನ್ನು ಜಾಲಾಡಿಸುವ ಯೋಚನೆ ಹೊಳೆಯಿತು. ತತ್‌ಕ್ಷಣ ನಾನು ಗ್ರಂಥಾಲಯಕ್ಕೆ ಧಾವಿಸಿದೆ. ಉಳಿದ ಅಧ್ಯಾಪಕರಿಗಿಂತ ಭಿನ್ನರಾಗಿ ಜ್ಯಾಕ್ ನಮ್ಮನ್ನು ಚಿಂತನೆಗೊಳಪಡಿಸುತ್ತಿದ್ದರು.'

ಜ್ಯಾಕ್ ನಮ್ಮಂತಹ ಹಲವರಲ್ಲಿ ಆಂಗ್ಲ ಸಾಹಿತ್ಯ ಪ್ರೇಮದ ಹಣತೆ ಉರಿಸಿದರು. ಅವರೊಂದಿಗೆ ಕುಳಿತು ಸಾಹಿತ್ಯವನ್ನು ಅಭ್ಯಸಿಸುತ್ತಿದ್ದರೆ ಸಾಹಿತ್ಯದ ಸತ್ಯಸೌಂದರ್ಯ ಸ್ವರೂಪ ನಮ್ಮೆದುರು ಅನಾವರಣಗೊಳ್ಳುತ್ತಿತ್ತು,

ನೈಜ ಪ್ರಜಾಪ್ರಭುತ್ವವಾದಿ

ಮೇಯೋ ಕಾಲೇಜಿನ ಶ್ರೇಯಸ್ಸಿಗಾಗಿ ಏನು ಮಾಡಲೂ ಜ್ಯಾಕ್ ಹಿಂಜರಿಯುತ್ತಿರಲಿಲ್ಲ. ಒಮ್ಮೆ ದರ್ಶನಲಾಲ್ 'ನ್ಯಾಷನಲ್ ಡಿಫೆನ್ಸ್ ಅಕಾಡೆಮಿ'ಯ ಪ್ರವೇಶ ಪರೀಕ್ಷೆಗೋಸ್ಕರ ಬೆಂಗಳೂರಿಗೆ ಹೋಗಿದ್ದ. ಆದರೆ ದುರದೃಷ್ಟವಶಾತ್, ಸೇನೆಯ ವೈದ್ಯಕೀಯ ಪರೀಕ್ಷೆಯನ್ನು ಎರಡು ದಿವಸ ಮುಂದೂಡಿದ್ದರಿಂದ, ಅವನು ಮೇಯೋ-ಡೂನ್ ನಡುವಣ ಕ್ರಿಕೆಟ್ ಪಂದ್ಯದಲ್ಲಿ ಭಾಗವಹಿಸುವುದು ಅಸಾಧ್ಯವಾಯಿತು. ಈ ಕುರಿತು ಲಾಲ್ ಕಳುಹಿಸಿದ ತಂತಿ ಅಜ್ಮೀರನ್ನು ತಲಪಿದ್ದೇ ತಡ, ಜ್ಯಾಕ್ ಸೇನಾ ಕೇಂದ್ರಕ್ಕೆ ದೂರವಾಣಿಸಿದರು. "ಡೂನ್ ಶಾಲೆ ಜಯಶಾಲಿಯಾಗಬೇಕೆಂದು ಸೇನೆಗೇಕಿಷ್ಟು ಉತ್ಸುಕತೆ?" ಎಂದು ಸೇನಾ ಮುಖ್ಯಸ್ಥನ ಬಳಿ ಹಾಸ್ಯ ಚಟಾಕಿ ಹಾರಿಸಿದರು. ಕೆಲವು ಗಂಟೆಗಳೊಳಗೆ ಲಾಲ್ ಡೆಹ್ರಾಡೂನಿನತ್ತ ಪ್ರಯಾಣಿಸುತ್ತಿದ್ದ !

ಜ್ಯಾಕ್ ನಿಜ ಅರ್ಥದಲ್ಲಿ ಪ್ರಜಾಪ್ರಭುತ್ವವಾದಿಯಾಗಿದ್ದರು. ಪೆಡಸಾದ ಸಾಮಾಜಿಕ ಕ್ರಮಾಗತ ವ್ಯವಸ್ಥೆ, ತಾರತಮ್ಯ ನೀತಿ ಈ ದೇಶಕ್ಕೆ ವಿನಾಶಕಾರಿ ಎನ್ನುವುದನ್ನು ಅವರು ಗುರುತಿಸಿದ್ದರು. ವಿದ್ಯಾರ್ಥಿಗಳಲ್ಲಿರುವ ವರ್ಗ ಪ್ರಜ್ಞೆಯನ್ನು ಕಡಿದೊಗೆಯಲು ಅವರು ಸದಾ ಪ್ರಯತ್ನಿಸುತ್ತಿದ್ದರು. "ಒಬ್ಬ ಜಾಡಮಾಲಿಯಿಂದ ಹಿಡಿದು ಪ್ರಾಂಶುಪಾಲರ ತನಕ ಪ್ರತಿ ವ್ಯಕ್ತಿ ಗೌರವಾನ್ವಿತ ಎಂಬುದನ್ನು ಮರೆಯಲು ಅವರು ನಮಗೆಂದೂ ಎಡೆ ನೀಡುತ್ತಿರಲಿಲ್ಲ" ಎಂದು ಸಂಡೇ ಪತ್ರಿಕೆಯ ಸಂಪಾದಕ ವಿರ್ ಸಾಂಘವಿ ಸ್ಮರಿಸುತ್ತಾರೆ.

ತರಗತಿಯನ್ನಾಳುತ್ತಿದ್ದ ಪೂರ್ವಗ್ರಹಗಳನ್ನು ಹೊಡೆದೋಡಿಸಲು ಜ್ಯಾಕ್ ಹೊಸ ಬಗೆಯ ಹೋರಾಟವನ್ನೇ ನಡೆಸುತ್ತಿದ್ದರು. ಪ್ರತಿ ವಿದ್ಯಾರ್ಥಿಯೂ ವಾರದಲ್ಲಿ ಒಂದು ಗಂಟೆ ಕಡ್ಡಾಯವಾಗಿ ದುಡಿಯಬೇಕಿತ್ತು. 'ಗಾಂಧೀ ಜಯಂತಿ'ಯಂದು ಮೇಯೋದ

ನೌಕರರಿಗೆಲ್ಲ ರಜೆ ನೀಡಲಾಗುತ್ತಿತ್ತು ಮತ್ತು ವಿದ್ಯಾರ್ಥಿಗಳು ಅವರ ಕೆಲಸಗಳನ್ನು ನಿರ್ವಹಿಸಬೇಕಾಗುತ್ತಿತ್ತು.

ಹಲವಾರು ಮೇಯೋ ವಿದ್ಯಾರ್ಥಿಗಳು ಜ್ಯಾಕ್‌ರ ಸಮತಾ ತತ್ವವನ್ನು ತಮ್ಮ ಜೀವನದಲ್ಲಿ ಅಳವಡಿಸಿಕೊಂಡಿದ್ದಾರೆ. "ನಾನು ನನ್ನ ಬಾಗಿಲನ್ನು ಸದಾ ತೆರೆದೇ ಇಟ್ಟಿರುತ್ತೇನೆ. ಯಾರೇ ಆಗಿರಲಿ, ಯಾವುದೇ ವೇಳೆಯಲ್ಲಿ ಬಂದು ನನ್ನನ್ನು ಕಾಣಬಹುದು" ಎಂದು ಏರ್ ಫ್ರೈಟ್ ಲಿಮಿಟೆಡ್‌ನ ಜನರಲ್ ಮ್ಯಾನೇಜರ್ ರೋಹಿತ್ ಪಟೇಲ್ ಹೇಳಿದರೆ, ಭಾರತೀಯ ವಾಯು ಮಾರ್ಗದ ಪ್ರೊಬೀರ್ ಸೇನ್ ನುಡಿಯುತ್ತಾರೆ "ಬೆನ್ನೆಲುಬಿರುವ ಮನುಷ್ಯರೆಂದರೆ ಜ್ಯಾಕ್‌ಗೆ ಇಷ್ಟ. ಅಂತೆಯೇ ನನಗೂ ಕೂಡ. ನನ್ನ ಸರಿಸಮರಾಗಿ ಕರ್ತವ್ಯ ನಿರ್ವಹಿಸುವಂತೆ ಕೈಕೆಳಗಿನ ಉದ್ಯೋಗಸ್ಥರನ್ನು ಉತ್ತೇಜಿಸುತ್ತಿರುತ್ತೇನೆ."

ಓದಿನಲ್ಲಾಗಲಿ, ಕ್ರೀಡೆಯಲ್ಲಾಗಲಿ ತಮ್ಮ ವಿದ್ಯಾರ್ಥಿಗಳು ಉತ್ಕೃಷ್ಟರಾಗಿರಬೇಕೆಂದು ಜ್ಯಾಕ್ ಬಯಸುತ್ತಿದ್ದರಾದರೂ, ಪ್ರತಿಯೊಬ್ಬನೂ ಔನ್ನತ್ಯವನ್ನು ತಲುಪಲಾರನೆಂಬ ಅರಿವು ಅವರಿಗಿತ್ತು. ಯಶಕ್ಕಿಂತ ಪ್ರಯತ್ನಕ್ಕೆ ಅವರು ಅಧಿಕ ಪ್ರಾಮುಖ್ಯ ನೀಡುತ್ತಿದ್ದರು. ವಿದ್ಯಾರ್ಥಿಗಳ ಅಪ್ರಯತ್ನಶೀಲ ಪ್ರವೃತ್ತಿಯನ್ನು ಅವರು ದ್ವೇಷಿಸುತ್ತಿದ್ದರು. ಪ್ರಾಮಾಣಿಕ ಪ್ರಯತ್ನದ ಬಳಿಕವೂ ನಿರೀಕ್ಷಿತ ಫಲ ದೊರಕದಿದ್ದಲ್ಲಿ, ವಿದ್ಯಾರ್ಥಿಗಳು ಮಾನಸಿಕವಾಗಿ ಕುಗ್ಗಿ ಹೋಗದಂತೆ ಜ್ಯಾಕ್ ಎಚ್ಚರಿಕೆ ವಹಿಸುತ್ತಿದ್ದರು ಮತ್ತು ಅಂಥವರಲ್ಲಿ ಆತ್ಮಸ್ಥೈರ್ಯ ಉತ್ಸಾಹಗಳನ್ನು ತುಂಬುತ್ತಿದ್ದರು.

ಜ್ಯಾಕ್‌ಗೆ ಪ್ರಿಯವಾಗಿದ್ದ ಇನ್ನೊಂದ ಧ್ಯೇಯ 'ನ್ಯಾಯ ಪಕ್ಷಪಾತ', ಯಾವುದಾ ರೊಂದು ಸಂದರ್ಭ ಅನ್ಯಾಯಪರವೆಂದ ಅನ್ನಿಸಿದರೆ ಅವರು, ತಮಗೆ ಕಷ್ಟ-ನಷ್ಟ ವಾದರೂ ಸರಿ, ಅಂಥ ಸಂದರ್ಭವನ್ನ ತಿರಸ್ಕರಿಸಿಬಿಡುತ್ತಿದ್ದರು. ಒಮ್ಮೆ ಅವರ ತಮ್ಮ ವೇತನ ಇತರ ಮೇಯೋ ಅಧ್ಯಾಪಕ ಗಿಂತ ಕೆಲವು ಪಟ್ಟು ಅಧಿಕ ಎಂದು ತಿ ಯಿತು. ಇದರಿಂದ ನೊಂದ ಅವರು ಉಳಿದವ ರಿಗೆ ಯೋಗ್ಯ ಸಂಬಳ ದೊರಕುವ ತನಕ ಆರು ವರ್ಷಗಳ ಕಾಲ ತಮ್ಮ ಸಂಬಳವನ್ನ ಕಡಿತಗೊಳಿಸಿದರು!

ಶ್ಲಾಘನೀಯ ಆರ್ಜವ

ಜ್ಯಾಕ್ ಓರ್ವ ದೇವದೂತ ಎಂದ ನಾನು ಹೇಳಲಾರೆ. ಅವರಲ್ಲಿ ಅಸಹನೆ ಮುಂಗೋಪ ಬಹಳವಿತ್ತು. ಒಮ್ಮೊಮ್ಮೆ ದರ್ಪಿಷ್ಟರಾಗಿರುತ್ತಿದ್ದರು— ದಬ್ಬಾಳಿಕೆ ನಡೆಸುವುದೂ ಇತ್ತು. ಆದರೆ ಮಾತ್ಸರ್ಯ, ದ್ವೇಷಕ್ಕೆ ಅವರಲ್ಲಿ ಸರ್ವಥಾ ಸ್ಥಾನವಿರ ಲಿಲ್ಲ. ತಮ್ಮ ತಪ್ಪು-ದೌರ್ಬಲ್ಯಗಳನ್ನು ಅತ್ಯಂತ ಪ್ರಾಮಾಣಿಕವಾಗಿ ಒಪ್ಪಿಕೊಳ್ಳು ತ್ತಿದ್ದರು.

ಕೆಲವೊಮ್ಮೆ ಈ ತಪ್ಪೊಪ್ಪಿಗೆಯನ್ನು ಅವರು ಮೂಕ ವಿಸ್ಮಿತ ಮಟ್ಟಕ್ಕೆ ಒಯ್ಯು ತ್ತಿದ್ದರು! ಒಂದು ಸಲ ಅವರು ಥಾಮಸ್ ಮ್ಯಾಥ್ಯೂ ಎಂಬ ಅಂತಿಮ ವರ್ಷದ ಹುಡುಗ ನನ್ನು ತಪ್ಪು ಉತ್ತರ ನೀಡಿದ್ದಕ್ಕಾಗಿ ಚೆನ್ನಾಗಿ ಚಚ್ಚಿದರು. ಆದರೆ ಮ್ಯಾಥ್ಯೂ ನದು ಸರಿ ಉತ್ತರ ಎಂದು ಅರಿವಾದ ಮರು

ಕ್ಷಣ ಜ್ಯಾಕ್ ಕ್ಷಮೆ ಬೇಡಿದರು, ಮಾತ್ರವಲ್ಲ ತಮಗೆ ಹೊಡೆಯುವಂತೆ ಮಾಥ್ಯೂವನ್ನು ಆಹ್ವಾನಿಸಿದರು. ಆಗ ಮೇಯೋದ ಅತ್ಯುತ್ತಮ ಬಾಕ್ಸರ್‌ಗಳಲ್ಲಿ ಒಬ್ಬನಾಗಿದ್ದ ಮತ್ತು ಈಗ ಕಲರ್–ಕಮ್ ಲಿಮಿಟೆಡ್‌ನ ಹಿರಿಯ ಕಾರ್ಯನಿರ್ವಾಹಕನಾಗಿರುವ ಮಾಥ್ಯೂ ಜ್ಞಾಪಿಸಿಕೊಳ್ಳುತ್ತಾರೆ "ನಾನು ಜ್ಯಾಕ್‌ರ ಹೊಟ್ಟೆಗೆ ಎಷ್ಟು ಬಲವಾಗಿ ಗುದ್ದಿದೆನೆಂದರೆ ಅವರು ತತ್ತರಿಸಿ ಬೀಳುವಂತಾಗಿದ್ದರು. ಆದರೆ ಅವರೆಂದೂ ಅದನ್ನು ಮನಸ್ಸಿನಲ್ಲಿಟ್ಟುಕೊಳ್ಳಲಿಲ್ಲ ಮತ್ತು ನನಗೆ ಕೇಡು ಬಗೆಯಲಿಲ್ಲ."

ಇಂಥ ಋಜುತ್ವ ಎಂದೂ ಮರೆಯಲಾಗದಂತಹ ಪ್ರಭಾವವನ್ನು ಅಚ್ಚೊತ್ತುತ್ತದೆ. ನ್ಯಾಯಶೀಲ ಜ್ಯಾಕ್‌ಗೆ ಎರಡು ಮುಖಗಳಿರಲಿಲ್ಲ. ಮುಚ್ಚುಮರೆಯಿಲ್ಲದ ನೇರ ಮಾತು, ಸ್ವಾಭಿಮಾನದ ನಡವಳಿಕೆ. "ಉದ್ಧಟ ಶಕ್ತಿಗೆ ಎಂದೂ ಮಣಿಯದಿರು" ಅವರ ಅಚ್ಚುಮೆಚ್ಚಿನ ನೀತಿವಾಕ್ಯವಾಗಿತ್ತು. ಈ ನೀತಿಯನ್ನು ನಾವು ಹಲವರು ಸಾಧ್ಯವಾದಷ್ಟು ಮಟ್ಟಿಗೆ ಅನುಸರಿಸಿದ್ದೇವೆ. ಒಂದು ಬಾರಿ ಮೇಯೋದ ಹಳೆಯ ವಿದ್ಯಾರ್ಥಿಯಾಗಿದ್ದ ಹಿರಿಯ ಐ.ಎ.ಎಸ್. ಅಧಿಕಾರಿಯ ಮೇಲೆ ಸೊಕ್ಕಿನ ರಾಜಕೀಯ ಪುಢಾರಿಯೊಬ್ಬ ವಿನಾಕಾರಣ ಹರಿಹಾಯ್ದ. ಆತ್ಮಾಭಿಮಾನಿಯಾದ ಅಧಿಕಾರಿ ಯಾವುದೇ ಒತ್ತಾಯ–ಒತ್ತಡಗಳಿಗೆ ಮಣಿಯದೆ ಕೆಲಸಕ್ಕೆ ರಾಜೀನಾಮೆ ಸಲ್ಲಿಸಿದ. ಅಂತಿಮವಾಗಿ ಪುಢಾರಿಯೇ ಅಧಿಕಾರಿಗೆ ತಲೆ ಬಾಗಿ ಕ್ಷಮಾಪಣೆ ಕೇಳಬೇಕಾಯಿತು.

ವಿಶಾಲ ಹೃದಯಿ

ನಾನು ಭಯವನ್ನು ಸಮರ್ಥವಾಗಿ ಎದುರಿಸಿ ಶಾಲಾ ನಾಯಕನಾಗಲು ಪ್ರೇರೇಪಿಸಿದ ಜ್ಯಾಕ್ ನನಗೆ ಜೀವನ ಪಾಠವನ್ನೇ ಕಲಿಸಿದರು. ನನ್ನ ಬಹುತೇಕ ಶಂಕೆ–ದಿಗಿಲುಗಳು ಕೇವಲ ಕಾಲ್ಪನಿಕ ಅಥವಾ ಅತಿರಂಜಿತ ಎಂದು ನನಗೆ ಅರ್ಥವಾಗಿತ್ತು. ಈ ಒಳನೋಟದಿಂದ ಮುಂದಿನ ದಿನಗಳಲ್ಲಿ ನನ್ನೆಲ್ಲ ದ್ವಂದ್ವಗಳು ಸಂಪೂರ್ಣ ಸ್ತಬ್ಧಗೊಳ್ಳಲಿಲ್ಲ ನಿಜ; ಆದರೆ ಇದು ನನ್ನೊಳಗಿನ ಹೋರಾಟವನ್ನು ಹತ್ತಿಕ್ಕಿ ನನ್ನ ದೃಢತೆಯನ್ನು ವರ್ಧಿಸಿತು.

ಜ್ಯಾಕ್‌ರ ಹೃದಯ ವೈಶಾಲ್ಯ ಅವಿಸ್ಮರಣೀಯ. ಕಷ್ಟದಲ್ಲಿರುವ ಸ್ನೇಹಿತರಿಗೆ ಮುಕ್ತ ಹಸ್ತದಿಂದ ಸಹಾಯ ಮಾಡುತ್ತಿದ್ದರು. ಬಹಳ ಉದಾರಿಯಾಗಿದ್ದರು. ಮೇಯೋವನ್ನು ಬಿಟ್ಟ ಅನಂತರ ನಾನು ರಾಜಕೀಯ ಸುಧಾಕರನಾದೆ. ಒಂದು ಸಲ ಮೇಯೋವನ್ನು 'ಪ್ರತಿಷ್ಠಿತ ಕಾಲವೈರುದ್ಧ್ಯ' ಶಾಲೆಯೆಂದು ಬಣ್ಣಿಸಿ ಜ್ಯಾಕ್‌ರಿಗೆ ಬರೆದಿದ್ದೆ. ಶಾಲಾ ಬಹುಮಾನ ವಿತರಣಾ ಸಮಾರಂಭದಲ್ಲಿ ಮುಖ್ಯ ಅತಿಥಿಗಳಾಗಿದ್ದ ರಾಷ್ಟ್ರಾಧ್ಯಕ್ಷರ ಸನ್ನಿಧಿಯಲ್ಲಿ ಜ್ಯಾಕ್ ಈ ಪತ್ರದ ಭಾಗಗಳನ್ನು ಓದಿದ್ದಾರೆಂದು ಕೆಲವು ತಿಂಗಳುಗಳ ಬಳಿಕ ನನಗೆ ತಿಳಿದಾಗ ಆಶ್ಚರ್ಯ ಚಕಿತನಾದೆ! ಮೇಯೋದಂಥ ಶಾಲೆ ವಿದ್ಯಾರ್ಥಿಗಳ ಚಿಂತನಾಸಾಮರ್ಥ್ಯವನ್ನಾಗಲಿ, ಸೃಜನಶೀಲತೆಯನ್ನಾಗಲಿ ದೋಚುವುದಿಲ್ಲವೆಂದು ನನ್ನ ಪತ್ರವನ್ನು ಉದಹರಿಸುತ್ತ ವಿವರಿಸಿದರಂತೆ.

ಪಿತೃ ಪ್ರತಿನಿಧಿ

ಅಸಾಮಾನ್ಯ ಪ್ರತಿಭೆಯುಳ್ಳ ವಿದ್ಯಾರ್ಥಿಗಳ ವಿಚಾರದಲ್ಲಿ ಜ್ಯಾಕ್‌ರ ಔದಾರ್ಯ

ಸೀಮಾತೀತ. ಡೆಬ್ ಬರೂವಾ ಎಂಬ ಮೇಯೋದ ಪ್ರತಿಭಾನ್ವಿತ ಹುಡುಗ ನಿಮ್ನ ಮಧ್ಯಮ ವರ್ಗದವನು. ಮೇಯೋದಿಂದ ಉತ್ತೀರ್ಣನಾದ ಬಳಿಕ ಅವನ ಪ್ರತಿಭೆಗಳೆಲ್ಲ ಭಾರತೀಯ ವಿಶ್ವವಿದ್ಯಾಲಯದಲ್ಲಿ ಕಳೆದು ಹೋಗಿಬಿಡಬಹುದು ಎಂಬ ಹೆದರಿಕೆಯಿಂದ ಜ್ಯಾಕ್ ತಾವು ಕಲಿತಿದ್ದ ಇಂಗ್ಲೆಂಡಿನ ಹೈಲೀಬರಿ ಶಾಲೆಯಲ್ಲಿ ವಿದ್ಯಾರ್ಥಿ ವೇತನದ ವ್ಯವಸ್ಥೆ ಮಾಡಿದರು.

ಹೈಲೀಬರಿಯ ತರುವಾಯ ಬರುವಾ ಕೇಂಬ್ರಿಡ್ಜ್‌ನಲ್ಲಿ ವಿದ್ಯಾಭ್ಯಾಸವನ್ನು ಮುಂದುವರಿಸಿದ. ಆ ಐದು ವರ್ಷಗಳ ಇಂಗ್ಲೆಂಡ್ ವಾಸದ ಅವಧಿಯಲ್ಲಿ ಅವನ ಜೀವನ ವೆಚ್ಚಕ್ಕಾಗಿ ಜ್ಯಾಕ್ ನಿಯಮಿತವಾಗಿ ಹಣ ಕಳುಹಿಸುತ್ತಿದ್ದರು. ರಜೆಯಲ್ಲಿ ಅವನನ್ನು ತಿರುಗಾಡಿಸುತ್ತಿದ್ದರು. ಅವರ ಅಸಂಖ್ಯ ಸ್ನೇಹಿತರಿಗೆ ಪರಿಚಯಿಸುತ್ತಿದ್ದರು. ಈಗ ಜಮೈಕದ ಕಿಂಗ್‌ಸ್ಟನ್‌ನಲ್ಲಿರುವ 'ಹೈಟೆಕ್ ಸಾಫ್ಟ್‌ವೇರ್ ಇಂಜನೀಯರ್ಸ್'ನ ಮುಖ್ಯ ಕಾರ್ಯನಿರ್ವಾಹಕಾಧಿಕಾರಿಯಾಗಿರುವ ಬರುವಾ ಹೃದಯ ತುಂಬಿ ಸ್ಮರಿಸುತ್ತಾರೆ "ಅವರು ನನ್ನನ್ನು ಮಗನಂತೆಯೇ ಆದರಿಸುತ್ತಿದ್ದರು. ಸಾಮಾಜಿಕವಾಗಿ ಅಥವಾ ಆರ್ಥಿಕವಾಗಿ ಯಾವುದೇ ಅಭಾವ ನನ್ನನ್ನು ಕಾಡದಂತೆ ಸಲಹುತ್ತಿದ್ದರು. ನಾನು ಕೂಡ ಅವರನ್ನು ನನ್ನ ತಂದೆಯೆಂದೇ ಪರಿಗಣಿಸಿದ್ದೇನೆ. ಈ ದಿನ ನಾನು ಏನಾಗಿದ್ದೇನೋ ಅದೆಲ್ಲವೂ ಅವರಿಂದ, ಕೇವಲ ಅವರಿಂದ."

ಕಿಂಚಿತ್ತಾಗಿ ಪರಿಚಯವುಳ್ಳ ಹುಡುಗರ ಅವಶ್ಯಕತೆಗಳಿಗೂ ಜ್ಯಾಕ್ ಸ್ಪಂದಿಸುತ್ತಿದ್ದರು. ಒಂಬತ್ತು ವರ್ಷದ ಸಾಂಘವಿ ಜನವರಿ, ೧೯೬೬ರಲ್ಲಿ ಮೇಯೋವನ್ನು ಸೇರಿದಾಗ ಅವನ ತಾಯಿ ಗಂಭೀರ ಕಾಯಿಲೆಯಿಂದ ಬಳಲುತ್ತಿದ್ದರು. ಪುಟ್ಟ ಹುಡುಗನಿಗೋ, ತಾಯಿಯ ಜೊತೆಯಲ್ಲಿರಬೇಕೆಂಬ ಸಹಜ ಕಾತರ, ಆಸೆ. ಸಾಂಘವಿ ಜ್ಯಾಕ್‌ರ ಹತ್ತಿರ ಮನೆಗೆ ಹಿಂದಿರುಗಲು ಸಹಾಯ ಮಾಡುವಂತೆ ಕೋರಿದ. ಜ್ಯಾಕ್ ಈ ವಿಚಾರವನ್ನು ತರುಣ ಅಧ್ಯಾಪಕರೊಂದಿಗೆ ಚರ್ಚಿಸಿದರು. ಕೊನೆಗೆ ಮಾರ್ಚ್‌ನಲ್ಲೂ ಅದೇ ರೀತಿ ತೀವ್ರ ಕಾತರವಿದ್ದರೆ ಅವನನ್ನು ಬೊಂಬಾಯಿಗೆ—ಮನೆಗೆ—ಕರೆದೊಯ್ಯುವ ತೀರ್ಮಾನಕ್ಕೆ ಬಂದರು. ಮಾತ್ರವಲ್ಲ, ಮನೆ ಸೆಳೆತದಿಂದ ಹಿಂದಿರುಗಲು ಬಯಸಿದ್ದಕ್ಕಾಗಿ ಸಾಂಘವಿಯನ್ನು ಯಾವ ಹುಡುಗನೂ ಅಪಹಾಸ್ಯ ಮಾಡದಂತೆ ಕಾಪಾಡಿದರು.

೩೧ ಜನವರಿ, ೧೯೬೯ ಮೇಯೋದಲ್ಲಿನ ಜ್ಯಾಕ್‌ರ ಕೊನೆಯ ದಿವಸ. ಬ್ರಹ್ಮಚಾರಿ ಜ್ಯಾಕ್ ಮೊದಲು ಇಂಗ್ಲೆಂಡಿನಲ್ಲಿ ನಿವೃತ್ತ ಜೀವನ ಸಾಗಿಸಬೇಕೆಂದುಕೊಂಡಿದ್ದರು. ಅಲ್ಲಿ ಅವರಿಗೊಬ್ಬ ತಂಗಿಯಿದ್ದಳು. ಆದರೆ ಅಲ್ಲಿ ಜೀವನ ನಿರ್ವಹಣೆ ಅಸಾಧ್ಯವೆನ್ನಿಸಿ, ಭಾರತದಲ್ಲಿ—ಮೇಯೋದ ಸಮೀಪ—ನೆಲಸಿದರು.

ನಿವೃತ್ತರಾದರೂ ಅವರ ಉತ್ಸಾಹ, ಚಟುವಟಿಕೆಗಳು ತಗ್ಗಲಿಲ್ಲ. ಪ್ರಯಾಣ, ಓದು, ಬರಹ, ಪತ್ರವ್ಯವಹಾರ, ಸಮಾಜಸೇವೆ ಹೀಗೆ ಸದಾ ಕಾರ್ಯತತ್ಪರರಾಗಿದ್ದರು. ಮೇಯೋದ ಹಳೆಯ ವಿದ್ಯಾರ್ಥಿಗಳು ಸಲಹೆಗಳಿಗಾಗಿ ಆಗಾಗ ಜ್ಯಾಕ್‌ರನ್ನು ಸಮೀಪಿಸುತ್ತಿದ್ದರು. ಜ್ಯಾಕ್ ಅವರೆಲ್ಲರಿಗೆ ಪಿತೃ ಪ್ರತಿನಿಧಿಯಾಗಿದ್ದರು.

ಎಪ್ಪತ್ತರ ದಶಕದ ಮಧ್ಯದಲ್ಲಿ ಜ್ಯಾಕ್ ನಿಧಾನವಾಗಿ ಕುಗ್ಗತೊಡಗಿದರು. ಆದರೆ

ಅವರ ಬದುಕಿನಾಸಕ್ತಿ, ಜೀವನಪ್ರೇಮ ಬತ್ತಲಿಲ್ಲ. ಅವರು ಎಂಬತ್ತೆರಡನೆಯ ವಯಸ್ಸಿನಲ್ಲಿ ಒಂದು ತಿಂಗಳು ಹಾಸಿಗೆ ಹಿಡಿದು ಮಲಗಿದ್ದಾಗಲೂ, ಒಂದು ಜೊತೆ ಬುಲ್‌ಬುಲ್ ಹಕ್ಕಿಗಳಿಗೆ ತಮ್ಮ ಕೈಯಲ್ಲಿರುವ ಬಾಳೆಹಣ್ಣನ್ನು ತಿನ್ನಲು ತರಬೇತಿ ನೀಡಿದ್ದರು.

ಎಂಬತ್ತಾರನೆಯ ವಯಸ್ಸಿನಲ್ಲಿ ೨೩ ಅಕ್ಟೋಬರ್ ೧೯೯೪ರಂದು ಅಜ್ಮೀರ್‌ನಲ್ಲಿ ಜ್ಯಾಕ್ ನಿಧನ ಹೊಂದಿದರು. ದಹನ ಸಂಸ್ಕಾರವಾದ ಮೇಲೆ ಅವರ ಬೂದಿಯ ಒಂದು ಭಾಗ ಇಂಗ್ಲೆಂಡಿನ ಕುಟುಂಬಸ್ಥರಿಗೆ ತಲುಪಿದರೆ, ಉಳಿದ ಭಾಗ ಹಿಮಾಲಯ ನದಿಗಳಲ್ಲಿ ಲೀನವಾಗಿಹೋಯಿತು.

ಒಬ್ಬ ಶಾಲಾ ಅಧ್ಯಾಪಕರಾಗಿ ಜ್ಯಾಕ್ ಗಳಿಸಿದ ಯಶಸ್ಸು, ಏರಿದ ಉನ್ನತಿಯ ಹಿಂದಿನ ರಹಸ್ಯದ ಬಗ್ಗೆ ಆಗಾಗ ನನ್ನನ್ನು ನಾನೇ ಪ್ರಶ್ನಿಸಿಕೊಳ್ಳುತ್ತೇನೆ. ಬಹುಶಃ ಅವರ ಅದ್ಭುತ ಬಹುಮುಖ ಸಾಮರ್ಥ್ಯ ಮತ್ತು ಅದಮ್ಯ ಚೈತನ್ಯ ಪ್ರಮುಖ ಕಾರಣಗಳಿರಬಹುದು—ಜೊತೆಗೆ ಅವರ ಔದಾರ್ಯ, ಅಸಾಂಪ್ರದಾಯಿಕತೆ ಮತ್ತು ಪರಿಪೂರ್ಣತೆ. ಇವೆಲ್ಲಕ್ಕಿಂತ ಮುಖ್ಯವಾಗಿ ಅವರಲ್ಲೊಂದು ಅಪರೂಪದ ಗುಣವಿತ್ತು. ಜ್ಯಾಕ್‌ರ ವಿದ್ಯಾರ್ಥಿ ಸಂಜೀವ ಪ್ರಕಾಶ್ ಹೇಳುವಂತೆ "ವಿದ್ಯಾರ್ಥಿಗಳನ್ನು ಹೇಗೆ ನಡೆಸಿಕೊಳ್ಳಬೇಕೆಂದು ಅವರು ಬಲು ಚೆನ್ನಾಗಿ ಅರಿತಿದ್ದರು. ಯಾಕೆಂದರೆ ಹೃದಯದಲ್ಲಿ ಅವರೊಬ್ಬ ಮುಗ್ಧ ಹುಡುಗನೇ ಆಗಿದ್ದರು!"



ಎಷ್ಟೇ ಚೆನ್ನಾಗಿದ್ದರೂ ಭವಿಷ್ಯವನ್ನು ನಂಬಬಾರದು; ಕಳೆದು ಹೋದದ್ದನ್ನು ಕುರಿತು ಚಿಂತಿಸಬಾರದು; ವರ್ತಮಾನ ಕಾಲದ ಕರ್ತವ್ಯಗಳನ್ನು ಶ್ರದ್ಧೆಯಿಂದ ನಿರ್ವಹಿಸಬೇಕು.

—ಲಾಂಗ್‌ಫೆಲೋ

ಆ ಹುಡುಗಿ ಆ್ಯನ್ ಫ್ರ್ಯಾಂಕ್

ಸರಸ್ವತಿ ಬಡೆಕ್ಕಿಲ
ಎಂ. ೪೭, ೩ನೇ ಹಂತ
ಜೆ.ಟಿ.ಕೆ. ಬಡಾವಣೆ, ಕುವೆಂಪು ನಗ
ಮೈಸೂರು-೫೭೦ ೦೨೩

ಸದಾ ಪ್ರಶ್ನಿಸುವ, ವಾದಿಸುವ ವಿದ್ಯಾರ್ಥಿ ಆತ—"ಮಾನವ ವಂಶ ಜಗತ್ತಿನಲ್ಲೇ ಅತ್ಯಂತ ಶ್ರೇಷ್ಠ, ಇದನ್ನು ಉಳಿಸಿಕೊಳ್ಳಲೇಬೇಕೆಂದು ನಿಮ್ಮ ಅಭಿಪ್ರಾಯತಾನೇ? ಇದಕ್ಕೇನಾದರೂ ಬಲವಾದ ಕಾರಣ ಇದೆಯೇ?"

ಪ್ರೊಫೆಸರ್ ಉತ್ತರಿಸಿದರು—'ಆ್ಯನ್ ಫ್ರ್ಯಾಂಕ್'ಳ ಡೈರಿ ಓದಿದ ಯಾರೇ ಆದರೂ ಈ ರೀತಿ ಹೇಳುತ್ತಾರೆ!

ಕೇವಲ ಹದಿಮೂರರ ಬಾಲೆಯೊಬ್ಬಳ ಡೈರಿಯನ್ನು ಪುಸ್ತಕರೂಪದಲ್ಲಿ ಮುದ್ರಿಸಿ ಪ್ರಕಟಿಸಿದ್ದು ಅವಳ ಡೈರಿಯಷ್ಟೇ ಕುತೂಹಲಕಾರಿಯಾಗಿದೆ. ಒಂದು ಕಾದಂಬರಿಯಂತಿದೆ. ಆ ಚಿಕ್ಕ ಪುಸ್ತಕ ಇಂಥ ಅದ್ಭುತ ಪರಿಣಾಮ ಬೀರಿತು ಎಂದರೆ ಯಾರೂ ನಂಬಲಾರರು. ಅದನ್ನು ಪ್ರಕಾಶಪಡಿಸಿದ ಅವಳ ತಂದೆಗೂ ಆ ಡೈರಿಯ ಮಹತ್ವದ ಬಗ್ಗೆ ಅಂಥ ಭಾವನೆ ಇರಲಿಲ್ಲ. ನಾಝೀ ಮೂಲಭೂತ ವಾದಿಗಳ ಸೆರೆಯಾಳುಗಳ ಶಿಬಿರದಲ್ಲಿ ಆ್ಯನ್ ಮಡಿದಿದ್ದಳು. ಅವಳ ಡೈರಿ ತಂದೆಗೆ ದೊರಕಿದ್ದು ಕೂಡ ಒಂದು ಆಕಸ್ಮಿಕ.

ಜರ್ಮನ್ ಭಾಷೆಯೂ ಸೇರಿದಂತೆ ಈ ಡೈರಿ ಹತ್ತೊಂಬತ್ತು ಭಾಷೆಗಳಲ್ಲಿ ಪ್ರಕ ಗೊಂಡಿವೆ. ಎರಡು ಮಿಲಿಯ ಪ್ರತಿಗಳ ಮಾರಾಟಗೊಂಡಿವೆ. ಫ್ರಾನ್ಸಿಸ್ ಗುಡ್‌ರಿ ಮತ್ತು ಆಲ್ಬರ್ಟ್ ಹ್ಯಾಕೆಟ್ ಎಂಬಿಬ್ಬ ಅದನ್ನು ನಾಟಕರೂಪಕ್ಕೆ ಪರಿವರ್ತಿಸಿದರ ಒಂದೇ ವರ್ಷಾವಧಿಯಲ್ಲಿ ಎಂದರೆ ೧೯೫೬-೫೭ ರಲ್ಲಿ ಇಪ್ಪತ್ತು ದೇಶಗಳಲ್ಲಿ ಈ ನಾಟ ವನ್ನು ಅಡಿತೋರಿಸಲಾಯಿತು. ಎರ ಮಿಲಿಯ ಪ್ರೇಕ್ಷಕರು ಈ ನಾಟಕ ನೋ ದರು. ಶ್ರೇಷ್ಠ ನಾಟಕಕ್ಕಾಗಿ ಕೊಡು ಪುಲಿಟ್ಜರ್ ಬಹುಮಾನ ಈ ನಾಟಕ ಸಂದಿತು. ಲಂಡನ್ನಿನ ಪ್ರಸಿದ್ಧ ರಂಗಮಂ 'ಫೋನಿಕ್ಸ್'ನಲ್ಲಿ ಈ ನಾಟಕ ಆರು ತಿಂಗ ಕಾಲ ಎಡೆಬಿಡದೆ ಪ್ರೇಕ್ಷಕರನ್ನು ರಂಜಿಸಿತು

"ಟ್ವೆಂಟಿಯತ್ ಸೆಂಚುರಿ ಫೋಕ್ಸ್" ಎಂ ಚಿತ್ರ ನಿರ್ಮಾಣ ಸಂಸ್ಥೆಯವರು ಇದ ಚಲನಚಿತ್ರವನ್ನು ತಯಾರಿಸಿದರು.

ಇಂಥ ಆಶ್ಚರ್ಯಕರ ಪ್ರತಿಕ್ರಿಯೆಗ ರಹಸ್ಯವನ್ನರಿಯಬೇಕಿದ್ದಲ್ಲಿ 'ಆ್ಯನ ಫ್ರ್ಯಾಂಕ್ ಯಾರು? ಅವಳು ಏನಾ

ಆಧಾರ: ರೀಡರ್ಸ್ ಡೈಜೆಸ್ಟ್‌ನಲ್ಲಿ ಪ್ರಕಟವಾದ 'ಲೂಯಿ ಡಿ ಜಾಂಗ್' ಅವರ "ದಿ ಗರ್ ಹೂ ವಾಸ್ ಆ್ಯನ್ ಫ್ರ್ಯಾಂಕ್" ಲೇಖನ.

...ಳು? ಇವನ್ನು ತಿಳಿಯಬೇಕು. ಜನರ
...ಸಕ್ತಿಯನ್ನು ಈ ತೆರನಾಗಿ ಕೆರಳಿಸಿದ
...ರ್ಷಿಸಿದ ಅವಳ ವ್ಯಕ್ತಿತ್ವವೆಂಥದ್ದು ಇರ
...ೇಡ!—ಹಿಟ್ಲರ್ ಅಧಿಕಾರದ ಗದ್ದುಗೆ
...ರಿದ್ದ ಕಾಲವದು. ಒಟೋಫ್ರ್ಯಾಂಕ್
...ಂಬಾತ ಜರ್ಮನಿಯ ಒಬ್ಬ ಬ್ಯಾಂಕ್
...ಧಿಕಾರಿ. ೧೯೨೫ರಲ್ಲಿ ಆತ ಮದುವೆ
...ಯಾಗಿದ್ದ. ೧೯೨೬ರಲ್ಲಿ ಆ ದಂಪತಿಗಳಿಗೆ
...ಣ್ಣು ಮಗುವೊಂದು ಜನಿಸಿತು. ಅವಳೇ
...ಮಾರ್ಗೊಟ್'. ಮತ್ತೆ ಮೂರು ವರ್ಷ
...ಳಲ್ಲಿ ಮತ್ತೊಂದು ಹೆಣ್ಣುಮಗುವಿನ
...ನನ. ಅವಳೇ ಆ್ಯನ್‌ಲೀಮಾರಿ. ಹೆಚ್ಚಾಗಿ
...್ಯನ್' ಎಂದೇ ಅವಳನ್ನು ಕರೆಯು
...ದ್ದರು. ಇಲ್ಲವೇ 'ಟೆಂಡರ್‌ಲೀ ಅರ್ಥಾತ್
...ೀಮಲಾಂಗೀ' ಎಂದು ಮುದ್ದಿನಿಂದ
...ರೆಯುತ್ತಿದ್ದರು.

೧೯೩೩ರ ತರತ್ಕಾಲ. ಹಿಟ್ಲರ್
...ಹೂದ್ಯರ ವಿರುದ್ಧವಾದ ಕಾನೂನು
...ಳನ್ನು ಒಂದರ ನೇಲೊಂದರಂತೆ ಜಾರಿ
...ೊಳಿಸತೊಡಗಿದ. ಬಿಟೊಫ್ರ್ಯಾಂಕ್ ಇನ್ನು
...ಲ್ಲಿರಬಾರದೆಂಮ ಉದಾರಿಗಳಿನ್ನಿಸಿದವರ
...ಾಡು ನೆದರ್ಲೆಂಡ್ಸ್‌ಗೆ ವಲಸೆ ಹೋಗುವ
...ಶ್ಚಯ ಮಾಡಿದ. ನೆದರ್ಲೆಂಡ್ಸಿನ
...್ಯಮ್‌ಸ್ಟರ್‌ಡ್ಯಾಮ್‌ನಲ್ಲಿ ಚಿಕ್ಕದೊಂದು
...ದ್ಯೋಗ ಪ್ರಾರಂಭಿಸಿದ ಮಿಸ್ಟರ್
...್ಯಾನ್‌ಡ್ಯಾನ್ ಎಂಬ ಇನ್ನೊಬ್ಬ
...ಹೂದಿ ಶರಣಾರ್ಥಿಯ ಜತೆ ಪಾಲು
...ರಿಕೆಯನ್ನೂ ಮಾಡಿಕೊಂಡ. ಅವರದು
...ನಬಳಕೆಯ ಸಂಬಾರ ಜೀನಸುಗಳ
...್ಯಾಪಾರವಾಗಿದ್ದರೂ, ಇನ್ನೂ ಪ್ರಾರಂಭ
...ಸೆಯಾದ್ದರಿಂದ ವ್ಯವಹಾರ ಮಂದಗತಿ
...ಯಲ್ಲೇ ಸಾಗಬೇಕಾಗಿತ್ತು. ಇದರಿಂದಾಗಿ

ಬಿಟೋಫ್ರ್ಯಾಂಕ್ ತನ್ನ ಕೈಕೆಳಗಿನ ನೌಕರರ ಪಗಾರವನ್ನು ಕೆಲಕಾಲದ ಮಟ್ಟಿಗೆ ಕಡಿತಗೊಳಿಸಬೇಕಾಗಿದೆಯೆಂದು ತಿಳಿಸಿದ. ಅವರ ಸಂಬಳ ಮೊದಲೇ ಮಿತಿಯೊಳಗಿನದಾಗಿತ್ತು ಸಿಬ್ಬಂದಿಯವರ ಸಂಖ್ಯೆಯೂ ಕಡಿಮೆಯೇ. ಹೀಗಿದ್ದರೂ ಅವರಾರೂ ವಿರೋಧಿಸಲಿಲ್ಲ. ಕೆಲಸ ತ್ಯಜಿಸಿ ಬೇರೆ ಕಡೆ ಹೋಗಲೂ ಇಲ್ಲ. ಅವರೆಲ್ಲ ಬಿಟೋಫ್ರ್ಯಾಂಕನ ಉತ್ತಮ ಸ್ವಭಾವ, ಸ್ನೇಹಪರತೆಗಳನ್ನು ಮೆಚ್ಚಿಕೊಂಡಿದ್ದರು. ತನ್ನ ಮಕ್ಕಳ ವಿದ್ಯಾಭ್ಯಾಸಕ್ಕೆ ಅವನು ನೀಡುತ್ತಿದ್ದ ಮಹತ್ವವನ್ನು ಕಂಡು ಬೆರಗಾಗುತ್ತಿದ್ದರು. ಬಾಳನ್ನು ಎದುರಿಸುವ ಆತನ ರೀತಿಯಿಂದ, ಧೈರ್ಯ ಪರಿಶ್ರಮಗಳಿಂದ, ಪ್ರಭಾವಿತರಾಗಿದ್ದರು.

'ವಿದ್ಯಾರ್ಥಿನಿ' ಎಂಬ ದೃಷ್ಟಿಯಿಂದ ನೋಡಿದರೆ ಆ್ಯನ್ ಅಂಥ ಮೇಧಾವಿಯಂತೆ ಕಾಣಿಸುತ್ತಿರಲಿಲ್ಲ. ತಂದೆ ತಾಯಿಯರೂ ಸೇರಿ ಸುತ್ತುಮುತ್ತಲಿನವರೆಲ್ಲ ಹಿರಿಯಳಾದ ಮಾರ್ಗೊಟಳೇ ಶ್ರೇಷ್ಠಮಟ್ಟಕ್ಕೇರತಕ್ಕವಳೆಂದು ಭಾವಿಸುತ್ತಿದ್ದರು. ಆ್ಯನ್‌ಫ್ರ್ಯಾಂಕ್ ಪಾಠಗಳಿಗಿಂತ ಹೆಚ್ಚಾಗಿ ಇತರರ ಬಗ್ಗೆ ಆಸಕ್ತಿ ವಹಿಸುವವಳಾಗಿದ್ದಳು; ಭಾವಜೀವಿಯಾಗಿದ್ದಳು. ಹಾಗೆಂದು ಚಂಚಲಚಿತ್ತಳಲ್ಲ ಧೈರ್ಯವಂತಳು. ಅವಳ ತಂದೆ ಒಂದುಬಾರಿ ನನ್ನೊಡನೆ "ನಿಜವಾಗಿಯೂ ಈ ಹುಡುಗಿ ಸಮಸ್ಯಾತ್ಮಕಳು. ಇವಳ ವರ್ತನೆ ಅರ್ಥವೇ ಆಗುತ್ತಿಲ್ಲ" ಎಂದಿದ್ದರು. ಸದಾ 'ಅರಳು ಹುರಿ'ದಂತೆ ಪಟಪಟನೆ ನುಡಿಯುತ್ತಲೇ ಇರುವವಳು ಅಂದ ಚಂದದ ಬಟ್ಟೆಬರೆಗಳೆಂದರೆ ಅವಳಿಗೆ ಅತಿಮೆಚ್ಚು. ಅವಳ ಹಿಂದೆ ಮುಂದೆ, ಹಕ್ಕಿಗಳಂತೆ ಚಿಲಿಪಿಲಿ

ಗುಟ್ಟುವ ನಗೆಮೊಗದ ಗೆಳತಿಯರ ಹಿಂಡೇ ಇರುತ್ತಿತ್ತು. ಆ್ಯನ್‌ಗೆ ಇವರಿಂದ ಸಂತಸದ ಪರಿಸರ, ಮನೋರಂಜನೆ, ನಿರ್ಮಾಣಗೊಳ್ಳುತ್ತಿತು. ಸಾಮಾನ್ಯವಾಗಿ ಎಲ್ಲ ಎಳೆಯರೂ ಬಯಸುವಂಥ—ರಜಾದಿನಗಳನ್ನು ಪಿಕ್‌ನಿಕ್‌ಗಳಲ್ಲಿ ಕಳೆಯುವ ಅಥವಾ ಕಾರಿನಲ್ಲಿ ಸುತ್ತಾಡುವ ಅವಕಾಶ ಫ್ರಾಂಕನ ಸಂಸಾರಕ್ಕೆ ಲಭ್ಯವಿರಲಿಲ್ಲ. ಆ ಕೊರತೆಯನ್ನು ಆ್ಯನಳ ಕೆಳದಿಯರ ಸಹಚರ್ಯೆಯು ನೀಗಿಸುವಂತಿತ್ತು.

೧೯೪೦ ರ ಮೇ ತಿಂಗಳಲ್ಲಿ ನಾಝಿಗಳು ನೆದರ್ಲೆಂಡ್ಸನ್ನು ಆಕ್ರಮಿಸಿದಾಗ ಇತರ ಯಹೂದಿಗಳೂ ಸೇರಿದಂತೆ ಫ್ರಾಂಕ್‌ನ ಕುಟುಂಬವು ಬೋನಿನೊಳಗೆ ಸಿಕ್ಕಿಬಿದ್ದಂತಾಯಿತು. ಆ್ಯಮ್‌ಸ್ಟರ್‌ಡ್ಯಾಮಿನ ಇತರ ಯಹೂದ್ಯರಿಗಿಂತಲೂ ಮುಂಚಿತವಾಗಿ "ಭೂಗತರಾಗುವುದೊಂದೇ ತಮಗುಳಿದ ಮಾರ್ಗನೆಂದು" ತಕ್ಷಣ ಕಂಡುಕೊಂಡ ಓಟೋಫ್ರಾಂಕ್. ಅದಕ್ಕಾಗಿ ಮಿಂಚಿನಂತೆ ಕಾರ್ಯಕೈಗೊಂಡ. ಮರಗಿಡಗಳಸಾಲಿಂದ ಮುಚ್ಚಿಹೋಗಿದ್ದ ಪ್ರದೇಶದಲ್ಲಿ ನಾಲೆಯ ಮುಂಭಾಗದಲ್ಲಿ ಅವನ ಸರಕುಗಳನ್ನು ತುಂಬಿಡುವ ಕಟ್ಟಡವಿತ್ತು. ಅದರ ಮೇಲು ಉಪ್ಪರಿಗೆಯು ಸುಲಭದಲ್ಲಿ ಜನರ ಕಣ್ಣಿಗೆ ಬೀಳುವಂತಿರಲಿಲ್ಲ. ಅದರಲ್ಲಿ ಅದುವರೆಗೆ ನಿರುಪಯುಕ್ತವಾಗಿದ್ದ ಅರೆಗಳಿದ್ದುವು. ಇವು ಇದ್ದುದರಲ್ಲಿ ಸುರಕ್ಷಿತ ಸ್ಥಾನವೆಂದು ಓಟೋಫ್ರಾಂಕ್ ಅಭಿಪ್ರಾಯಪಟ್ಟ. ಮೊತ್ತಮೊದಲಾಗಿ, ವ್ಯಾನ್‌ಡಾನ್ ಹಾಗೂ ತನ್ನ ಸಂಸಾರಗಳ ಕನಿಷ್ಠ ಅಗತ್ಯಗಳು ಪೂರೈಸುವಂತೆ, ವಾಸಯೋಗ್ಯವಾಗುವಂತೆ ಆ ರಹಸ್ಯ ಕೊಠಡಿಗಳನ್ನು ಸಜ್ಜುಗೊಳಿಸಿದ. ೧೯೪೨ರ ಜುಲೈಯಲ್ಲಿ ಮಾರ್ಗೋಟ್ ಫ್ರಾಂ
ದೇಶಬಿಟ್ಟು ಹೋಗುವಂತೆ ಸರಕಾರೀ
ಬಂತು. ಆದರೆ ಅವಳು ತಾಯಿ
ಯರನ್ನು ಬಿಟ್ಟು ಹೊರಡಬೇಕಾದಾಗ ಎಲ್ಲ
ಯಾರ ಕಣ್ಣಿಗೂ ಬೀಳದಂತೆ ಆ ಮಾಳಿಗೆ
ಉಪಗೃಹದೊಳಗೆ ಸೇರಿಕೊಂಡರು. ಫ್ರಾ
ಹೆಂಡತಿ ಮಕ್ಕಳ ಸಮೇತ ಅಲ್ಲಿ ಅದ
ನಾಲ್ಕಾರು ದಿನಗಳಲ್ಲಿ ವ್ಯಾನ್‌ಡಾ
ಕುಟುಂಬವೂ ಬಂದು ಕೂಡಿಕೊಂಡಿ
ಮುಂದೆ ನಾಲ್ಕು ತಿಂಗಳ ಮೇಲೆ ಇನ್ನೊ
ಯಹೂದಿ-ದಂತವೈದ್ಯ ಕಿಕ್ಕಿರಿದು ತುಂ
ಆ ಕೊಠಡಿಯೊಳಗೆ ಆಶ್ರಯ ಪಡೆದುಕೊ
ಈ ರೀತಿ ಅಲ್ಲಿ ಎಂಟುಜನರಾದರು. ನಾ
ಗಳ ಬೇಟೆಯ ಪಶುಗಳಾಗಿದ್ದರು—
ದುರದೃಷ್ಟಶಾಲಿಗಳು! ಅವರು ಹ
ಹೆಜ್ಜೆಗೂ ಜಾಗ್ರತೆ ವಹಿಸಬೇಕಾಗಿ
ಒಂದೊಂದು ಕ್ಷಣವನ್ನೂ ಅವರು ಭ
ದಿಂದ ಕಳೆಯಬೇಕಾಗಿತ್ತು. ಏನೇ ಸಪ್ಪ
ಯಾವುದೇ ಬೆಳಕು, ಅವರ ಇರುವಿಕೆಯನ
ನಾಝಿಗಳಿಗೆ ಸಾರಬಹುದಿತ್ತು. ಹೊ
ಜಗತ್ತಿನೊಡನೆ ಅವರಿಗಿದ್ದ ಒಂದೇ ಒಂ
ಸಂಬಂಧವೆಂದರೆ ಒಂದು ಪುಟ್ಟ ರೇಡಿಯೊ
ಇನ್ನುಳಿದ ಆಸರೆಯೆಂದರೆ ಫ್ರಾಂ
ವ್ಯವಹಾರಗಳ ಸಿಬ್ಬಂದಿಯವರಲ್ಲಿ ನಾಲ್ವ
ಡಚ್ ಧೀರರು. ಅವರಲ್ಲಿಬ್ಬರು ಟೈಪಿಸ್ಟ
(ಬೆರಳಚ್ಚುಗಾರರು) ಇವರು ರಹಸ್ಯವಾ
ಆಹಾರ, ಪತ್ರಿಕೆ, ಬರೆಯುವ ಪುಸ್ತ
ಇತ್ಯಾದಿಗಳನ್ನು ಅಡಗಿದ್ದವರಿಗೆ ಒದಗಿ
ತ್ತಿದ್ದರು. ಇವರಜತೆಗಿದ್ದ ಇನ್ನೊಂ
ಜೀವಿಯೆಂದರೆ ಒಂದು ಬೆಕ್ಕು.

ಈ ರೀತಿ ಅಡಗಿಕೊಂಡಿದ್ದಾಗ ಆ್ಯನ
ತನ್ನ ೧೩ ನೇ ಹುಟ್ಟುಹಬ್ಬದಂದು ತಾ

...ಪಿಯರು ತನಗೆ ಉಡುಗೊರೆಯಾಗಿ ...ಟ್ಟಿದ್ದ ಡೈರಿಯಲ್ಲಿ ಈ ಮೊದಲು ...ಚರಿ ಬರೆಯುತ್ತಿದ್ದ ಕ್ರಮದಲ್ಲೇ ತನ್ನ ...ವಣಿಗೆ ಮುಂದುವರಿಸಿದ್ದಳು. 'ಎನೆಕ್ಸ್' ...ದು ಹೇಳಲಾಗುತ್ತಿದ್ದ (ತೂಗುಮನೆ) ...ಗುಪ್ತಗೃಹದಲ್ಲಿ ನಡೆಯುತ್ತಿದ್ದ, ...ಹರಿಸಲಸಾಧ್ಯವಾದ, ಅವರ ಮಾನಸಿಕ ...ಳಲಾಟ, ಬಡಿದಾಟಗಳ ಪೂರ್ಣ ವಿವರ ...ನ್ನು ಆಕೆ ಬರೆಯತೊಡಗಿದಳು. ಆ ...ರಿಯ ಎಳೆಯ ಹೃದಯದ ನಿಷ್ಕಪಟ ...ಮುಕೋಮಲ ಭಾವಗಳು, ಆಶ್ಚರ್ಯ ...ಮಾಧುರ್ಯದಿಂದೊಡಗೂಡಿದ ...ಮಾಜಿಕ ಹಾಗೂ ಶ್ರೇಷ್ಠಮಟ್ಟದ ...ಣವಾಗಿತ್ತದು. ಅವಳ ಅಸಹನೀಯ ...ಂಗಿತನದಲ್ಲಿ ಸ್ವಾತಂತ್ರ್ಯದ ...ಲದ ಅಸಹಾಯ ರೋದನವಾಗಿತ್ತದು ...ರೌರ್ಯದಿಂದ ರೆಕ್ಕೆಗಳ ಹರಿದೆಳೆದು ...ಮುಲಾದ ಪುಟ್ಟ ಹಾಡಿನ ಹಕ್ಕಿಯಂತೆ, ...ಬಂಧಿಸಿದ ಪಂಜರದೊಳಗೆ ಕಗ್ಗತ್ತಲ ...ಣದ ಬಾವಿಯಲ್ಲಿ ಕುರುಡಾಗಿ ...ತ್ತಾ ಸರಳುಗಳಿಗೆ ಬಡಿಬಡಿದು ಛಟ..., ಹಾರಿಬೀಳುವ ತೆರದಲ್ಲಿ ಸಾಸಿದುವೆ" ...ಣ್ಣಬಣ್ಣದ ಉಣ್ಣೆಯ ಹೊದಿಕೆಯ ...ಂದರ ಪುಸ್ತಕದ ಎಲ್ಲ ಹಾಳೆಗಳೂ ...ಹೋದುವು. ಆಗ ಟೈಪಿಸ್ಟರಲ್ಲಿ ಒಬ್ಬ ... 'ಮಿಯಪ್'' ಎಂಬಾಕೆ ಸಾಧಾರಣ ...ಂದು ಶಾಲಾಭ್ಯಾಸದ (ಎಕ್ಸೈಜ್) ... ಒದಗಿಸಿದಳು. ಅದೂ ಬರೆದು ...ಯಿತು. ಮತ್ತೆ ಬರೆದಳಾಕೆ, ತನ್ನ ... ರಸಾಯನಶಾಸ್ತ್ರದ ನೋಟ್ ಬುಕ್ಕಿ ...ದಿನಾರು ತಿಂಗಳ ಭಯಾನಕ ದಿನಗಳ ... ಒಂಟಿತನದ ಬಗ್ಗೆ.

ಅವಳ ದಿನಚರಿ ಪುಸ್ತಕಗಳು ತಂದೆಯ ಜಾಣ್ಮೆ, ಚಾತುರ್ಯಗಳ ಬಗ್ಗೆ ಅವಳ ಶ್ರದ್ಧೆ, ವಿಶ್ವಾಸಗಳನ್ನು ಪ್ರಕಟಪಡಿಸುವುದರೊಂದಿಗೆ 'ತನ್ನನ್ನು ಅರ್ಥಮಾಡಿಕೊಳ್ಳಲಾಗದ ತಾಯಿ' ಎಂದೆಂಬ ಅಂತರಂಗದ ಅಳಲನ್ನೂ ವ್ಯಕ್ತಗೊಳಿಸಿವೆ. ವ್ಯಾನ್ ಡ್ಯಾನ್'ಳ ಹದಿನೇಳರ ಹರೆಯದ ಕುವರನ ಜತೆ ಮಿಷಿಮಯಿಗೊಂಡ ಭಾವೋದ್ವೇಗಭರಿತ, ಸಾಂತ್ವನದ ಪ್ರಥಮ ಚುಂಬನದಿಂ ಸಂಮೋಹಿತಳಾಗಿ ಆನಂದಪರವಶಳಾದುದನ್ನೂ ಅದರಲ್ಲಿ ಬರೆದಳು. ಪ್ರಕೃತಿ ಸಹಜವಾಗಿ ಅರಳುತ್ತಿದ್ದ ಅವಳ ವ್ಯಕ್ತಿತ್ವ, ಧೀರತೆಯಿಂದ ಜೀವನವನ್ನೆದುರಿಸುವತನಕ ಪ್ರಬುದ್ಧತೆಯ ಪರಿಪೂರ್ಣತೆಯೆಡೆಗೆ ಸಾಗುತ್ತಿದ್ದ ಅವಳ ಅಂತರ್ದೃಷ್ಟಿ, ಎಲ್ಲವೂ ಅತ್ಯಂತ ಹೃದಯಸ್ಪರ್ಶಿಯಾಗಿ, ಓದುಗರ ಕಣ್ತೆರೆಸುವಂತೆ, ಅತ್ಯಂತ ಪ್ರಖರಕಾಂತಿಯನ್ನು ಪ್ರಸರಿಸುವಂತೆ ಅಲೌಕಿಕವಾಗಿತ್ತು ಆಕೆಯ ಬರವಣಿಗೆ.

ಒಂದು ಚಿಕ್ಕ ಕಾಗದದ ಚೂರಿನಲ್ಲಿ, ಮುಂದೆ ಎಂದಾದರೂ, ತನ್ನ ಡೈರಿಯನ್ನು ಮುದ್ರಿಸಿ ಪ್ರಕಟಿಸುವುದಿದ್ದಲ್ಲಿ ಬಳಸಬಹುದಾದ ತನ್ನ ಕಾವ್ಯನಾಮವನ್ನೂ ಆಕೆ ಬರೆದಿಟ್ಟಳು. ಆದರೆ ಪ್ರಕೃತ ತನ್ನೀ ಬರವಣಿಗೆಯನ್ನು ಯಾರೂ ಕಾಣದಂತೆ ರಹಸ್ಯವಾಗಿ ಮುಚ್ಚಿಡುವುದು ಅವಳ ಬಯಕೆಯಾಗಿತ್ತು. ಮುಖ್ಯವಾಗಿ, ಅವಳ ಕೋಣೆಯಲ್ಲೇ ಮಲಗಬೇಕಾಗಿಬಂದ ಗೊಣಗಾಟದ ದಂತವೈದ್ಯನಿಂದ ಮುಚ್ಚಿಡುವುದು ಅವಳ ಉದ್ದೇಶವಾಗಿತ್ತು. ಒಟ್ಟೋ ಫ್ರ್ಯಾಂಕ್ ಮಗಳ ಇಚ್ಛೆಯಂತೆ ಅವನ್ನು ತನ್ನ ಕಿರುಪೆಟ್ಟಿಗೆ (ಬ್ರೀಫ್‌ಕೇಸ್) ಯಲ್ಲಿಡಲು

ಹೇಳಿದ. ಆದರೆ ಅವಳ ಮರಣದವರೆಗೂ ಆತ ಅದನ್ನೋದಿರಲಿಲ್ಲ.

೧೯೪೪ರ ಆಗಸ್ಟ್ ೪ರಂದು ಒಬ್ಬ ಜರ್ಮನ್ ಮತ್ತು ನಾಲ್ವರು ಡಚ್ ನಾಝೀ ಪೋಲೀಸರು ಬಿರುಗಾಳಿಯಂತೆ ಹಠಾತ್ತನೆ ಮಾಳಿಗೆ ಏರಿ ಬಂದರು. ('ಎನೆಕ್ಸ್'ನ ರಹಸ್ಯ ಹೇಗೆ ಬಯಲಾಯಿತೋ ತಿಳಿಯದು!) "ಎಲ್ಲಿದೆ ನಿಮ್ಮ ಹಣ, ಆಭರಣ?" ಅವರು ಗರ್ಜಿಸಿದರು. ಶ್ರೀಮತಿ ಫ್ರ್ಯಾಂಕ್ ಮತ್ತು ಶ್ರೀಮತಿ ವ್ಯಾನ್‌ಡ್ಯಾನ್—ಇಬ್ಬರ ಬಳಿಯಲ್ಲೂ ಸ್ವಲ್ಪ ಬಂಗಾರ ಮತ್ತು ರತ್ನಾಭರಣಗಳಿದ್ದುವು. ನಾಝಿಗಳು ತಕ್ಷಣ ಅವನ್ನು ಪತ್ತೆಹಚ್ಚಿದರು. ಆ ಅಮೂಲ್ಯ ವಸ್ತುಗಳನ್ನು ತುಂಬಿಕೊಂಡೊಯ್ಯಲು 'ಏನಿದೆ?' ಎಂದು ಸುತ್ತಲೂ ಶೋಧಿಸಿದರು ಪೋಲೀಸನೊಬ್ಬನಿಗೆ ಒಟೊಫ್ರ್ಯಾಂಕನ ಬ್ರೀಫ್ ಕೇಸ್ ಸಿಕ್ಕಿತು. ಅದರೊಳಗಿದ್ದ ಡೈರಿ, ಕಾಗದ ಪತ್ರ, ಪುಸ್ತಕಗಳನ್ನು ಅಲ್ಲೇ ಸುರಿದುಕೊಡವಿ ಖಾಲಿಮಾಡಿದರು. ಅಪಹರಿಸಿದ ಒಡವೆಗಳನ್ನು ಅದರಲ್ಲಿ ತುರುಕಿದರು. ಅಲ್ಲೇ ಬಿದ್ದಿದ್ದ ಪುಸ್ತಕಗಳ ಕಡೆಗೆ ದೃಷ್ಟಿ ಹಾಯಿಸಿಕೂಡ ನೋಡದೆ, ಅಲ್ಲಿದ್ದ ಎಲ್ಲರನ್ನೂ ಕೋಳಗಳಿಂದ ಬಂಧಿಸಿ ತಮ್ಮೊಂದಿಗೆ ಎಳೆದುಕೊಂಡೊಯ್ದರು. ಸೆಪ್ಟೆಂಬರ್ ತಿಂಗಳ ಮೊದಲ ದಿನಗಳಲ್ಲಿ—ಎಂದರೆ ಕೆಲವೇ ದಿನಗಳ ಅಂತರದಲ್ಲಿ ಮಿತ್ರ ರಾಷ್ಟ್ರಗಳ ಸೇನೆಯು ನೆದರ್ಲೆಂಡ್ಸನ್ನು ಸಮೀಪಿಸುತ್ತಿದ್ದಾಗ, ನತದೃಷ್ಟರಾದ ಒಟೊ ಫ್ರಾಂಕ್, ವ್ಯಾನ್‌ಡ್ಯಾನ್ ಕುಟುಂಬದವರು, ದಂತವೈದ್ಯನೂ ಸೇರಿದಂತೆ, ಎಲ್ಲರನ್ನು, ಜಾನುವಾರುಗಳನ್ನು ಸಾಗಿಸುವ

ಟ್ರಕ್ಕುಗಳಲ್ಲಿ ತುರುಕಿ ಜಡಿದಂತೆ ತುಂ
ಆಸ್ಕ್‌ವಿಚ್ ಎಂಬಲ್ಲಿಗೆ ಅತಿರಭಸದಿ
ಸಾಗಿಸಿದರು—ಪೋಲೆಂಡಿನ ದಕ್ಷಿಣ ಭಾಗ
ಈ ಆಸ್ಕ್‌ವಿಚ್ಸ್ ಪಟ್ಟಣವೆಂಬುದು ನಾಝಿ
ಗಳು ನಿರ್ಮಿಸಿದ ಮಾರಣ ಶಿಬಿರವಾಗಿತ್ತು
ಅಲ್ಲಿ ನಾಝೀಗಳು ಒಟೋಫ್ರಾಂಕನನ್
ಅವನ ಹೆಂಡತಿ ಮಕ್ಕಳಿಂದ ಬೇರ್ಪಡಿಸಿದರ
ಅವರು ಪರಸ್ಪರ ವಿದಾಯ ಹೇಳುವಷ
ಕಾಲಾವಕಾಶವನ್ನೂ ನೀಡದೆ ಬೇರೆ
ಕಳುಹಿಸಿದರು. ಶ್ರೀಮತಿ ಫ್ರಾಂಕ್
ಮಾರ್ಗೊಟ್ ಮತ್ತು ಆ್ಯನ್‌ರನ್ನು ಹೆಂಗ
ಶಿಬಿರದ ಕಡೆಗೆ ಕಾಲ್ನಡಿಗೆಯಲ್ಲೇ ಕರೆ
ಕೊಂಡು ಹೋದರು. ಮಾರ್ಗ ಕ್ರಮಿ
ತ್ತಿದ್ದಂತೆ ಶ್ರೀಮತಿ ಫ್ರಾಂಕ್ ಆಯಾ
ಗೊಂಡು ಮೃತಪಟ್ಟಳು! ಇತ್ತ ಕಡೆ ವ್ಯಾ
ಡ್ಯಾನ್ ಕುಟುಂಬದವರೂ, ಡೆಂಟಿಸ್ಟನ
ಕೂಡ ಸಾವನ್ನಪ್ಪಿದರು!

ಆ್ಯನ್ ಒಬ್ಬ ಧೀರಬಾಲಿಕೆಯೆಂಬುದು
ಈಗ ಬೆಳಕಿಗೆ ಬಂತು. ಆಸ್ಕ್‌ವಿಚ್ಸ್‌ನ
ಕಂಗೆಟ್ಟ ಹೆಣ್ಣುಮಕ್ಕಳ ಆ ಗುಂಪಿಗೆ ಅ
ನಾಯಕಿಯಾದಳು. ಅವರಿಗೆ ತಿನ್ನಲು ಏನ
ಇರಲಿಲ್ಲವಾದರೂ ಅಡಿಗೆ ಶಾಲೆಗೆ ಹೋಗು
ಅಡಿಗೆಯವನೊಡನೆ ಆಹಾರ ಕೇಳುವ-
ಸಾಹಸ ಯಾರಲ್ಲೂ ಇರಲಿಲ್ಲ. ಆ್ಯ
ಒಬ್ಬಳೇ ಎಲ್ಲರ ಪರವಾಗಿ ಅಧಿಕಾರಿಗಳ
ಮಾತಾಡುತ್ತಿದ್ದಳು. ಅಕ್ಕ ಮಾರ್ಗೊ ಬ
ಧೈರ್ಯ ಹೇಳುವವಳೂ ಅವಳೇ. ಒಂ
ಒಂದು ದಿನ ತಮ್ಮೆಲ್ಲರ ಬಿಡುಗಡೆಯಾ
ತೆಂದು, ನಿರಾಶೆಬೇಡವೆಂದು, ಸಂತೈಸ
ವಳೂ ಅವಳೇ. ಒಂದು ದಿನ ಹಂಗೇರಿ
ನೂರಾರು ಯಹೂದಿ ಬಾಲಕರು ಸಾ
ಗಟ್ಟಿ ನಿಂತಿದ್ದುದನ್ನು ನೋಡಿದಳು. ವ

ಸುರಿಯುತ್ತಿತ್ತು ಅವರ ಬೆತ್ತಲೆ ಮೈಮೇಲೆ. ನೆಲಕ್ಕೆ ಬಿದ್ದ ನೀರು ಹಿಮವಾಗಿ ಘನರೂಪ ತಾಳುತ್ತಿತ್ತು. ಅಂಥ ಭೀಕರ ಚಳಿಯಲ್ಲಿ ಆ ಬಾಲಕರನ್ನು ನಿಲ್ಲಿಸಿದ್ದರು. ಅವರ ಮುಂದಿನ ಮಜಲು ವಿಷಾನಿಲದ ಕೋಣೆ! ಆ ಬಾಲಕರ ಕಣ್ಣುಗಳ ಮುಗ್ಧತೆ ಆ್ಯನಳ ಶರೀರದಾದ್ಯಂತ ನಡುಕ ಹುಟ್ಟಿಸುತ್ತಿತ್ತು. ಕ್ರೌರ್ಯದ ಪರಾಕಾಷ್ಠೆಗೇರಿದ ಈ ವಯಸ್ಕರ ಜಗತ್ತಿನಲ್ಲಿ ತಮಗೇನಾಗಲಿದೆ, ಅವರ ಭೀಕರತೆ ಏನೆಂಬುದೆಂದು ಅರಿಯಲಾಗದ ಹಸುಳೆಗಳವರು! ಆ್ಯನ್‌ಳ ಬಾಯಿಂದ "ಆಃ ಎಂಥ ಕಣ್ಣುಗಳಿವು!" ತಾನಾಗಿಯೇ ಉದ್ಗಾರ ಹೊರಬಂತು!

ಕೆಲಕಾಲ ಕಳೆದು ಆ್ಯನ್ ಮತ್ತು ಅವಳ ಸೋದರಿಯನ್ನು ಬರ್ಲಿನ್ ಮತ್ತು ಹ್ಯಾಂಬರ್ಗ್‌ಗಳ ನಡುವಿನ ಬೆಲ್ಸೆನ್‌ನ ಠಾಣೆಗೆ ಕರೆದೊಯ್ಯಲಾಯಿತು. ಆತ್ಮೀಯಳಾಗಿದ್ದ ಹಳೆಯ ಗೆಳತಿಯೊಬ್ಬಳು ಅವರಿಗೆ ಕಾಣಸಿಕ್ಕಿದಳು, ಆ ಗೆಳತಿ ಅಲ್ಲಿ ಕಂಡದ್ದೇನು? ಯೋಗ್ಯ ಉಡುಪುಗಳಿಲ್ಲದೆ, ಚಳಿ, ಹಸಿವುಗಳಿಂದ ಕರಗಿ ಮೂಳೆ ಚಕ್ಕಳವಾದ ಶರೀರ ಬೋಳಿಸಿದ ತಲೆ, ದೊರಗು ನೂಲಿನ ಗೆರೆಗೆರೆಯಾದ ಆಕಾರವಿಲ್ಲದ ಸಮವಸ್ತ್ರ ತೊಟ್ಟ, ಕೈದಿಗಳಾದ ತನ್ನ ಪ್ರಿಯಸುಂದರ ಗೆಳತಿಯರು! ಅಂಥ ದುರ್ದೆಶೆಯೇ ಸಾಲದೆಂಬಂತೆ ಟೈಫಾಯಿಡ್ ಜ್ವರದಿಂದ ಜರ್ಜರಿತಳಾಗಿದ್ದ ಆ್ಯನ್ ಜೀವನಮರಣಗಳ ತೂಗುಯ್ಯಾಲೆಯಲ್ಲಿದ್ದಳು. ಅಕ್ಕ ಮಾರ್ಗೊಟ್ ಸತ್ತ ಕೆಲವೇ ದಿನಗಳಲ್ಲಿ ಆ್ಯನ್ ಅವಳನ್ನು ಹಿಂಬಾಲಿಸಿದಳು. ಆಗ ಮಾರ್ಚ್ ೧೯೪೫. ಕೈದಿಗಳು ಹುಳುಗಳಂತೆ ಸಾಯುತ್ತಿದ್ದರು. ಸಮೂಹ ಸಮಾಧಿಯಲ್ಲಿ ಮಾರ್ಗೊಟ್, ಆ್ಯನ್ ಫ್ರ್ಯಾಂಕ್‌ರನ್ನೂ ಹೂಳಲಾಯಿತು.

'ಆಸ್ಕ್‌ವಿತ್ಸ್'ನಲ್ಲಿ ಒಟ್ಟೋಫ್ರಾಂಕ್ ಅದೃಷ್ಟವಶಾತ್ ಬದುಕಿ ಉಳಿದ. ೧೯೪೫ರ ಮಧ್ಯಕಾಲದಲ್ಲಿ ರಷ್ಯನ್ ಸೈನಿಕರು ನಾಜಿಠಾಣೆಗಳನ್ನು ಹಿಮ್ಮೆಟ್ಟಿಸಿ ಕೈದಿಗಳನ್ನೆಲ್ಲ ಸೆರೆಯಿಂದ ಬಿಡಿಸಿ ಸ್ವತಂತ್ರಗೊಳಿಸಿದರು. ನೆದರ್ಲೆಂಡ್ಸ್ ಒಂದು ಸ್ವತಂತ್ರ ದೇಶವಾಯಿತು. ಒಟ್ಟೋಫ್ರಾಂಕ್ ಸ್ವತಂತ್ರ ಆ್ಯಮ್‌ಸ್ಟರ್‌ಡ್ಯಾಮ್‌ಗೆ ಬಂದು ತಲುಪಿದ. ಗೆಳೆಯನೊಬ್ಬ ಫ್ರ್ಯಾಂಕ್‌ನ ಮಡದಿ ತೀರಿಕೊಂಡ ಸುದ್ದಿ ತಿಳಿಸಿದ. ಆದರೆ ಆ್ಯನ್ ಮತ್ತು ಮಾರ್ಗೊಟ್ ಬಿಡುಗಡೆ ಹೊಂದಿ ಬರಬಹುದೆಂದು ಕಾಯುತ್ತಿರುವುದಾಗಿಯೂ ಹೇಳಿದ. ಆರು ವಾರಗಳ ಕಾತರದ ನಿರೀಕ್ಷೆಯ ಬಳಿಕ, ಪರಿಚಯದ ವ್ಯಕ್ತಿಯೊಬ್ಬನ ಭೇಟಿಯಾದಾಗ ಹೆಣ್ಣುಮಕ್ಕಳಿಬ್ಬರೂ ಅಳಿದುಹೋದ ಸಂಗತಿ ತಿಳಿದುಬಂತು. ಈ ಸಿಡಿಲಿನಂತಹ ವಾರ್ತೆ ಕೇಳಿದ ಕೆಲವು ದಿನಗಳ ಮೇಲೆ ಹಿಂದೆ ಅವನ ಕೈಕೆಳಗಿದ್ದ ಬೆರಳಚ್ಚುಗಾರ್ತಿ ಮಿಯೆಪ್ ಆ್ಯನ್ ಫ್ರ್ಯಾಂಕಳ ಡೈರಿಯನ್ನು ತಂದೊಪ್ಪಿಸಿದಳು.

ಫ್ರ್ಯಾಂಕ್ ಕುಟುಂಬವನ್ನು ಸೆರೆಹಿಡಿದ ಒಂದುವಾರದ ಮೇಲೆ ಮಿಯೆಪ್ ಧೈರ್ಯವಾಗಿ ಎನೆಕ್ಸ್‌ಗೆ ಬಂದಳು. ಅಲ್ಲಿ ಕಾಗದಗಳ ರಾಶಿಯೊಂದು ನೆಲದಲ್ಲಿ ಬಿದ್ದಿತ್ತು. ಆ್ಯನಳ ಹಸ್ತಾಕ್ಷರವೆಂದು ಅವಳಿಗೆ ಗೊತ್ತಾಯಿತು. ಆದರೆ ಅದನ್ನು ಓದುವಗೊಡವೆಗೆ ಹೋಗಲಿಲ್ಲ. ಅವನ್ನು ಜೋಪಾನವಾಗಿರಿಸಬೇಕೆಂದು ಮಾತ್ರ ನಿಶ್ಚಯಿಸಿದಳು. ಒಂದು ವೇಳೆ ಓದಿದ್ದರೆ ಅದರಲ್ಲಿದ್ದ ವಿಷಯಗಳಿಂದಾಗಿ ತನಗೇನಾದರೂ ಅಪಾಯ ಒದಗೀತೆಂದು ಭಯಪಡಬಹುದಿತ್ತು. ತಾನು ಮತ್ತು

ಇತರ ಕೆಲವರು ಫ್ರ್ಯಾಂಕ್ ಕುಟುಂಬಕ್ಕೆ ಮಾಡುತ್ತಿದ್ದ ಸಹಾಯವು ನಾಜಿಗಳಿಗೆ ತಿಳಿದು ಹೋದರೆ ತಮ್ಮೆಲ್ಲರ ಪ್ರಾಣಕ್ಕೆ ಸಂಚಕಾರ ಒದಗೀತೆಂಬ ಭಯದಿಂದ ಆತ್ಮ ರಕ್ಷಣೆಗಾಗಿ ಅವಳದನ್ನು ನಾಶಪಡಿಸುತ್ತಿದ್ದಳೋ ಏನೋ! ಆದರೆ ಹಾಗಾಗಲಿಲ್ಲ. ಓದದೆ ಇದ್ದುದು ಒಳಿತಾಯಿತು.

ಒಟೋಫ್ರಾಂಕನಿಗೆ, ಮೃತ್ಯುವಶಳಾದ ತನ್ನ ಮುದ್ದುಕಂದನ ಬರವಣಿಗೆಯನ್ನು ಓದಲು ಹಲವು ವಾರಗಳು ಹಿಡಿದುವು. ಪ್ರತಿಯೊಂದು ಪುಟ ಓದುತ್ತಲೂ ಅಳು ಒತ್ತರಿಸಿ ಬರುತ್ತಿತ್ತು. ಕಣ್ಣೀರು ತುಂಬಿ ಮುಂದೆ ಓದಲಾಗುತ್ತಿರಲಿಲ್ಲ. ಅವನ ಮುದಿತಾಯಿ ಇನ್ನೂ ಜೀವಂತಳಾಗಿದ್ದಳು. ಹಿಟ್ಲರನ ಅಟ್ಟಹಾಸ ಮೇರೆ ಮೀರುವ ಮೊದಲೇ ಆಕೆ ಸ್ವಿಟ್ಜರ್‌ಲೆಂಡಿನಲ್ಲಿ ವಾಸವಿದ್ದ ತನ್ನ ನೆಂಟರ ಮನೆಗೆ ವಲಸೆ ಹೋಗಿದ್ದರಿಂದ ಬದುಕಿ ಉಳಿದಿದ್ದಳು. ಫ್ರ್ಯಾಂಕ್, ಅವಳಿಗಾಗಿ ಆ್ಯನ್‌ಳ ಆತ್ಮ ನಿವೇದನೆಯ ಕೊನೆಯ ಹಸ್ತಾಕ್ಷರಗಳ ಪ್ರತಿ ತಯಾರಿಸತೊಡಗಿದ, ನಕಲು ಮಾಡುವಾಗ ವ್ಯಕ್ತಪಡಿಸಲಾಗದೆಂದು ತನಗನಿಸಿದ ಭಾಗಗಳನ್ನು—ಆ್ಯನಳ ಒಳ ಅಂತರಂಗದ ಚಿತ್ರಣಗಳನ್ನು, ಅತ್ಯಂತ ಆತ್ಮಗತ ರಹಸ್ಯಗಳನ್ನು ಬಹಿರಂಗಪಡಿಸಿದಲ್ಲಿ ತನ್ನ ತಾಯಿಗೆ ಅಥವಾ ಇನ್ನಿತರರಿಗೆ ಆಘಾತ, ಇಲ್ಲವೆ, ನೋವಾಗಬಹುದೆಂದು—ಭಾವನೆಗಳ ತೆರೆದಿರಿಸುವಿಕೆ ಅತಿಯಾಯಿತೆಂದು, ಅನಿಸಿದ ಕೆಲವಂಶಗಳನ್ನು ವರ್ಜಿಸಿ ಉಳಿದ ಭಾಗವನ್ನು ಮಾತ್ರ ಆಕೆಗೆ ಕಳುಹಿಸಿದ. ಲೇಖನವನ್ನು ಮುದ್ರಿಸುವ ಆಲೋಚನೆ ಅವನ ತಲೆಯೊಳಗೆ ಸುಳಿಯಲೇ ಇಲ್ಲ. ಟೈಪು ಮಾಡಿದ್ದ ಒಂದು ಪ್ರತಿಯನ್ನು ತನ್ನ ಆಪ್ತ ಮಿತ್ರನೊಬ್ಬ ಮಾತ್ರ ಕೊಟ್ಟ. ಆ ದ ಸ್ನ್ಯಾ ತ ಪರಿಚಯದ ಆಧುನಿಕ ಇತಿ ಪ್ರಾಚಾರ್ಯರಿಗೆ ತೋರಿಸಿದ.

ಒಂದು ದಿನ ಒಟೊಫ್ರಾಂಕ್ ದ ಪತ್ರಿಕೆಯೊಂದರಲ್ಲಿ ಆ್ಯನ್ ಫ್ರ್ಯಾಂ ಡೈರಿಯ ವಿಷಯವಾಗಿ ಲೇಖನವೊಂ ಪ್ರಕಟವಾಗಿದ್ದನ್ನು ಕಂಡು ಅಪ್ರತಿಭನಾ ಅದನ್ನು ಬರೆದವರು ಆ ಇತಿಹಾಸ ತಜ್ಞ ಅವರು ಆ್ಯನ್‌ಳಿಂದ ಬಹಳ ಪ್ರಭಾ ರಾಗಿದ್ದರೆಂಬುದಕ್ಕೆ ಸಾಕ್ಷಿಯಾಗಿತ್ತು ಆ ಲೇಖನ. ಫ್ರಾಂಕನ ಗೆಳೆಯರು ಡೈರಿಯನ ಮುದ್ರಿಸಿ ಪ್ರಕಾಶಪಡಿಸಬೇಕೆಂದು ಬಲ ಒತ್ತಾಯಿಸಿದರು. ಆ್ಯನಳೇ ತನ್ನ ಬರವ ಯಲ್ಲಿ ಒಂದೆಡೆ, ಅದನ್ನು ಮುದ್ರಿಸಿ ಪ್ರಕಾ ಸುವ ವಿಚಾರ ಪ್ರಸ್ತಾಪಿಸಿದ್ದಳು. ಪುಸ್ತಕದ ಶೀರ್ಷಿಕೆ 'ಎನೆಕ್ಸ್' ಎಂ ಬೇಕು ಮತ್ತು ಯುದ್ಧಾನಂತರ ಅದನ ಪ್ರಕಾಶಿಸಬೇಕೆಂದೂ ಆಕೆ ಅಪೇಕ್ಷಿಸಿದ್ದಳು.

"ಜನಾಂಗ ದ್ವೇಷದ ದುಷ್ಪರಿಣಾಮಗ ಬಗ್ಗೆ—ವಂಶದ ದುರಭಿಮಾನವು ಮನುಷ್ ನನ್ನು ಎಂಥ ಅಧಃಪಾತಕ್ಕೆಳೆಯಬಲ್ಲುದು ಮತಾಂಧತೆ, ಸರ್ವಾಧಿಕಾರಗಳು ಸಾಮಾಜಿಕ ನ್ಯಾಯ, ನೀತಿ, ಜವಾಬ್ದಾರಿ ಗಳನ್ನೆಲ್ಲಾ ತಲೆಕೆಳಗುಮಾಡಿ ಘೋರವಾ ಕ್ರೌರ್ಯ ಕುಟಿಲತೆಗಳ ನರಕವನ್ನು ಸೃಷ್ಟಿ ಮಾಡಬಲ್ಲುವು—ಎಂಬ ವಿಚಾರಗಳಿಂದ ಓದುಗರ ಹೃದಯವಾಳವನ್ನು ಕೆದಕುವಂತೆ ಮಾಡುವುದೇ, ಇದರ ಪ್ರಕಾಶನದ ಉದ್ದೇಶ ನನ್ನ ಈ ಡೈರಿ ಈ ಕಾರ್ಯವನ್ನು ನೆರವೇರಿಸಬಲ್ಲುದೆಂಬ ವಿಶ್ವಾಸವಿದೆ ನನ್ನಲ್ಲಿ" —ಈ ರೀತಿ ಆ ಚಿಕ್ಕಬಾಲಿಕೆ ಬರೆದಿದ್ದಳು.

ಗೆಳೆಯರೆಲ್ಲರ ಆಶಯದಂತೆ ಒಟ್ಟೊ
ಫ್ರ್ಯಾಂಕ್ ಕಟ್ಟಕಡೆಗೆ ಪುಸ್ತಕಪ್ರಕಾಶನಕ್ಕೆ
ಪ್ಪಿದನಾದರೂ, ಆ್ಯಮ್‌ಸ್ಟರ್ ಡ್ಯಾಮಿ
ಪ್ರಮುಖರೆನಿಸಿದ ಇಬ್ಬರು ಪ್ರಕಾಶ
ು ಪ್ರಕಾಶನ ತಮ್ಮಿಂದ ಸಾಧ್ಯವಿಲ್ಲ
ಂದು ಬಿಟ್ಟರು. ಆದರೆ ಒಟ್ಟೋ
ಫ್ರ್ಯಾಂಕನೂ ಅವನ ಗೆಳೆಯರೂ ಅಷ್ಟಕ್ಕೆ
ಾಶರಾಗದೆ ಪ್ರಯತ್ನ ಮುಂದುವರಿಸು
ದ್ದಾಗ ಪ್ರಕಾಶಕನೊಬ್ಬ ತಾನಾಗಿಯೇ
ುಂದೆ ಬಂದು ಆ ಕಾರ್ಯವನ್ನು ಸ್ವೀಕರಿ
ದ. ಡಚ್ ಭಾಷೆಯ ಆ ಪುಸ್ತಕದ ಒಂದೂ
ರೆ ಲಕ್ಷ ಪ್ರತಿಗಳು ಅಲ್ಪಕಾಲದಲ್ಲೇ
ಾರಾಟವಾಗಿ ಹೋದವು! ಆಮೇಲೆ
ಳುವುದೇನು? ಯೂರೋಪ್ ಖಂಡದ
ತರ ಭಾಷೆಗಳಲ್ಲೂ ಆ ಡೈರಿ ಭಾಷಾಂತರ
ಂಡು ಪ್ರಕಟಿತವಾಯಿತು. ಬ್ರಿಟನ್ನಿನಲ್ಲಿ
ಡೂವರೆ ಲಕ್ಷ, ಜಪಾನು ಅಮೇರಿಕದ
ಯುಕ್ತ ರಾಜ್ಯಗಳಲ್ಲಿ, ಕೂಡ ಅಷ್ಟೇ
ತಿಗಳು ಮಾರಾಟಗೊಂಡುವು. ಪರಿಣಾಮ
ಗಿ ಒಟ್ಟೋಫ್ರಾಂಕನಿಗೆ ಪ್ರತಿದಿನ
ರಾರು ಪತ್ರಗಳು ಬರತೊಡಗಿದವು.
ೇಲಿಯಿಂದ ಬಂದ ಒಂದು ಪತ್ರದಲ್ಲಿ ಈ
ಾಸವಿತ್ತು–"ಒಟ್ಟೋಫ್ರ್ಯಾಂಕ್, ಆ್ಯನ್
ಫ್ರ್ಯಾಂಕಳ ತಂದೆ, ಎಮ್‌ಸ್ಟರ್‌ಡ್ಯಾಮ್!"
'ದಿನಚರಿ'ಯ ಯಥಾರ್ಥತೆಯ ಬಗ್ಗೆ
ಾರೊಬ್ಬನೂ, ಯಾವದೇ ಪತ್ರದಲ್ಲಿ
ುಮಾನ ವ್ಯಕ್ತಪಡಿಸಿರಲಿಲ್ಲ. ಬದಲಾಗಿ
ರೂ ಕೌತುಕಪೂರ್ಣ ಶ್ಲಾಘನೆಗಳ ಜತೆ
ಮ್ಮ ನಿತಾಂತ ದುಃಖವನ್ನು, ಓದು
ದ್ದಾಗ ತಾವು ಅನುಭವಿಸಿದ ಹೃದಯ
ೇದನೆಯನ್ನು ಚಿತ್ರವತ್ತಾಗಿ ಬರೆದಿ
ು. ಆ್ಯನಳ ಸಮ ವಯಸ್ಕ ಹುಡುಗಿ

ಯರು, ಅವಳಂತೆಯೇ ಕಷ್ಟಕೋಟ್ಲೆಗಳಾದ
ವರು—"ಓದನ್ನಾ ಫ್ರ್ಯಾಂಕರೇ, ನಿಮ್ಮ
ಮಗಳು ಬಹುಮಟ್ಟಿಗೆ ನನ್ನಂತೆಯೇ
ಇದ್ದಾಳೆ. ನನ್ನ, ಅವಳ ಭಾವನೆ ಮತ್ತು
ಅನುಭವಗಳು ಎಷ್ಟು ತಾದಾತ್ಮ್ಯ
ಗೊಂಡಂತಿವೆ, ಏಕರೂಪದಲ್ಲಿವೆ, ಎಂದರೆ
ಎಲ್ಲಿ ನನ್ನ ಚಿತ್ರಣ ಪ್ರಾರಂಭವಾಗಿದೆ, ಎಲ್ಲಿ
ಆ್ಯನಳ ಅಭಿವ್ಯಕ್ತಿ ಕೊನೆಗೊಂಡಿದೆ ಎಂದು
ತಿಳಿಯದಂತಿದೆ."—ಈ ರೀತಿ ತಮ್ಮ ಸ್ವಾನು
ಭವದ ಸತ್ಯವನ್ನು ಪ್ರಕಟಿಸಿದ್ದರು.

ಹಲವು ಜನ ಫ್ರ್ಯಾಂಕನಿಗೆ ಸಣ್ಣ
ಉಡುಗೊರೆಗಳನ್ನೂ ಕಳುಹಿಸಿದರು.
ಜಪಾನಿನ ಕೆಲವು ಹುಡುಗಿಯರು ಫ್ರಾಂಕನಿ
ಗಾಗಿ ಮನೋಹರ ಗೊಂಬೆಗಳನ್ನು
ತಯಾರಿಸಿ ಕಳುಹಿಸಿದರು. ಒಬ್ಬ ಡಚ್ ಶಿಲ್ಪಿ
ಕಲ್ಲಿನಿಂದ ಆ್ಯನಳ ಮೂರ್ತಿಯನ್ನು ಕೆತ್ತಿ
ಉಡುಗೊರೆಯಾಗಿತ್ತಳು. ಆ್ಯನ್ ಮತ್ತು
ಮಾರ್ಗೊಟ್‌ರ ಹುಟ್ಟು ಹಬ್ಬಗಳಲ್ಲಿ
ಎಲ್ಲೆಲ್ಲಿಂದಲೋ ಯಾರ್ಯಾರೋ ಅಭಿಮಾನಿಕ
ರಿಂದ ರಾಶಿ ರಾಶಿ ಹೂಗಳು ಫ್ರಾಂಕನ ಮನೆ
ಯೊಳಕ್ಕೆ ಬಂದು ಕೂಡುತ್ತಿದ್ದವು.

ಪತ್ರಗಳ ಸುರಿಮಳೆಯಿಂದಾಗಿ ಒಟ್ಟೋ
ಫ್ರಾಂಕ್ ತನ್ನ ವ್ಯಾಪಾರ ವ್ಯವಹಾರ
ಗಳಿಂದ ನಿವೃತ್ತನಾಗಬೇಕಾಯಿತು. ಮಗಳ
'ದಿನಚರಿ' ಪುಸ್ತಕಗಳೇ ಅವನ ಜೀವನ
ಸರ್ವಸ್ವವಾದವು. ಅವಳ ಆಳವಾದ ಚಿಂತನೆ
ಗಳು ಮಾನವರೆಲ್ಲರ ಹೃದಯಗಳಲ್ಲಿ
ಸ್ಪಂದಿಸುವಂತೆ ಮಾಡುವುದೇ ಆತನ
ಹೆಗ್ಗುರಿಯಾಯಿತು. ಅವಳ ಪುಸ್ತಕ
ಪ್ರಕಾಶನದಿಂದ ದೊರಕುತ್ತಿದ್ದ ಸಂಭಾವನೆ
ಗಳನ್ನೆಲ್ಲಾ ಬಡಬಗ್ಗರ ಕ್ಷೇಮಾಭಿವೃದ್ಧಿ
ಗಾಗಿ ವಿನಿಯೋಗಿಸುತ್ತಿದ್ದ. ಇದು ತನ್ನ

ಮಗಳು ಒಪ್ಪುವ, ಮೆಚ್ಚಿಕೊಳ್ಳುವ, ಕಾರ್ಯವೆಂದು ಸಂತೋಷಿಸುತ್ತಿದ್ದ. ಅವಳಿಗಾಗಿ ಬರುತ್ತಿದ್ದ ಎಲ್ಲ ಪತ್ರಗಳಿಗೂ ತಾನೇ ಉತ್ತರ ಬರೆಯುತ್ತಿದ್ದ. ಪ್ರತಿ ದಿನ ತಾವು ಪಡುವ ಪರಿತಾಪವನ್ನು ವಿವರಿಸುವ ಹೊಸಹೊಸ ಪತ್ರಗಳು, ಅವನಿಗಾದ ನಷ್ಟವನ್ನು, ಅವನು ಪಟ್ಟ ಬವಣೆಗಳನ್ನು ನೆನಪಿಸುತ್ತಿದ್ದುವು. ಆದರೆ ಅವರ ಪತ್ರಗಳಲ್ಲಿ ಅತಿಶಯೋಕ್ತಿಯು ಲವಲೇಶವೂ ಇಲ್ಲದೆ ಸಂಪೂರ್ಣ ಸತ್ಯವಿದ್ದುದು ಅವನಿಗೆ ಮನವರಿಕೆಯಾಗುತ್ತಿತ್ತು. ಅವುಗಳಲ್ಲಿ ಅವನಿಗೆ ಸಾಂತ್ವನವೂ ಇರುತ್ತಿತ್ತು, ಹೆಮ್ಮೆಯುಂಟುಮಾಡುವಂತೆಯೂ ಇರುತ್ತಿದ್ದುವು. ಇಂಗ್ಲೆಂಡಿನ ಅತಿದೊಡ್ಡ ಪಾಠಶಾಲೆಯ ಮುಖ್ಯೋಪಾಧ್ಯಾಯಿನಿ ಬರೆದ ಪತ್ರವು ಅವನಿಗೆ ವಿಶೇಷವಾದ ಶಾಂತಿ, ಸಮಾಧಾನ, ತೃಪ್ತಿಗಳಿಂದ ತುಂಬಿದ ಭವಿಷ್ಯದ ಹಾರೈಕೆ ನೀಡಿತು. ಆಕೆ ಈ ರೀತಿ ಬರೆದಿದ್ದಳು—ತನ್ನವರೆಲ್ಲರನ್ನೂ ಕಳೆದುಕೊಂಡು ದುಃಖಿತನಾದ ನಿನಗೆ, ಆ್ಯನಳ ಜೀವನ ಅತ್ಯಂತ ಸಂಕ್ಷಿಪ್ತವಾಗಿದ್ದರೂ, ನಿನ್ನ ಭವಿಷ್ಯ ಜೀವನದುದ್ದಕ್ಕೂ ನೆಮ್ಮದಿ ನೀಡಬಲ್ಲ ಆನಂದದ ಬುಗ್ಗೆಯಂತೆ, ಸ್ಫೂರ್ತಿಯ ಕಾರಂಜಿಯಂತೆ ನಿನಗೆ ಅನುಭವವಾಗದಿರದು. ನಿನ್ನ ಮಗಳ ಮರಣೋತ್ತರ ಜೀವನವಿದು! ಅದು ಈಗಷ್ಟೆ ಪ್ರಾರಂಭವಾಗಿದೆ! ನೋಡುತ್ತಿರು."

ಎಲ್ಲಕ್ಕಿಂತ ಹೆಚ್ಚಿನ, ಗಮನಾರ್ಹ ಪ್ರತಿಕ್ರಿಯೆಮಾಡಿದುದು ಜರ್ಮನಿಯಲ್ಲೇ. ೧೯೫೦ರಲ್ಲಿ ಮೊದಲಬಾರಿಗೆ ನಾಲ್ಕುವರೆ ಸಾವಿರ ಪ್ರತಿಗಳು ಹೊರಬಂದಾಗ ಪುಸ್ತಕ ವ್ಯಾಪಾರಿಗಳಲ್ಲಿ ಹೆಚ್ಚಿನವರು ತಮ್ಮ ಅಂಗಡಿಯ ಹೊರ ಕಪಾಟುಗಳಲ್ಲಿ ಆ ಪುಸ್ತಕ
ಗಳನ್ನು ಇಡಲು ಭಯಪಡುತ್ತಿದ್ದ
ಆದರೆ ಮುಂದೆ ಕೆಲವೇ ದಿನಗಳಲ್ಲಿ ಒಂ
ಹಿಂದೆ ಇನ್ನೊಂದರಂತೆ ಜರ್ಮನಿಯ ಪ
ನಗರಗಳಲ್ಲಿ ಈ ದಿನಚರಿಯ ನಾಟಕವನ
ರಚಿಸಿ ಆಡಿ ತೋರಿಸಿದರು. ಪ್ರಥ
ಪ್ರದರ್ಶನದಲ್ಲಿ ಪ್ರೇಕ್ಷಕರ ಪ್ರತಿಕ್ರಿ
ಹೇಗಿದ್ದೀತೆಂಬ ಭಯ, ಶಂಕೆಗಳಿದ್ದು
ನಾಟಕವನ್ನು ೮ ದೃಶ್ಯಗಳಲ್ಲಿ ವಿಭಜ
ಹಂತ ಹಂತವಾಗಿ ಕಥೆಯನ್ನು ಬೆ
ಲಾಗಿತ್ತು. ಅದಲ್ಲದೆ ಇನ್ನೊಂದು ವಿಶೆ
ವೆಂದರೆ ರಂಗಸ್ಥಳದ ಮೇಲೆ ನಾಝಿಯನ
ಪ್ರತಿನಿಧಿಸುವ ಒಂದು ಪಾತ್ರವನ್ನು
ತೋರಿಸಿರಲಿಲ್ಲ. ಆದರೆ ನಾಟಕದ ಪ್ರತಿ
ದಲ್ಲೂ ಅವರ ಆಗಮನದ ಭಯ, ಆತ
ಗಳು ನಟರ ಹಾವ ಭಾವಗಳಲ್ಲಿ ಮೂ
ವಂತೆ, ರಂಗಸಜ್ಜಿಕೆಯಲ್ಲಿ ಅವರ ಭೀಕ
ಕ್ರೌರ್ಯಗಳ ಕರಿಯ ಛಾಯೆ ಮೂ
ವಂತೆ, ಹಿನ್ನೆಲೆಯಲ್ಲಿ ವಾದ್ಯಗಳ ಸ
ಸಂಯೋಜನೆಯು ಸೀರವರೋದನಗ
ಭಾಸವಾಗುವಂತೆ, ಇವೆಲ್ಲವುಗಳ ಜತೆಯ
ನಾಝಿಗಳ ದಪ್ಪಬೂಟುಗಳ ಸಪ್ಪ
ಮಾಳಿಗೆಯ ಮೆಟ್ಟಲೇರಿದಂತೆ, ಭಸ
ನುಗ್ಗಿಬಂದಂತೆ, ಆ ರಹಸ್ಯ ಬಿಡುಗ
ಅಪ್ಪಳಿಸಿ ಪುಡಿಪುಡಿಗೈದಂತೆ ಅತ್ಯ
ವಾಸ್ತವವೆನ್ನುವರೀತಿಯ ಧ್ವನಿಸಂವಧ
ಗಳೆಲ್ಲ ಸೇರಿ ಒಟ್ಟು ಪರಿಣಾಮವು ಅತ್ಯ
ಹೃದಯಸ್ಪರ್ಶಿಯಾಗಿ ನಾಟಕವ ನ
ಪ್ರದರ್ಶಿಸಲಾಯಿತು, ಕೊನೆಯ ದಾ
ಅಂಕದ ಪರದೆಬೀಳುವ ಮುನ್ನ, ಏಕ
ಯಾದೊಬ್ಬ ಮುದುಕ ಮೆಲ್ಲಗೆ ರಂಗ
ಬರುತ್ತಾನೆ. ತನ್ನ ಪತ್ನಿ, ಮಕ್ಕಳು, ಮ
ಹೊಂದಿದ ಸುದ್ದಿ ಬಂತೆಂದು ನಿರ್ವಿಕಾರನ

ಳಿಸುತ್ತಾನೆ. ಅಲ್ಲೇ ಬಿದ್ದಿರುವ ಆ್ಯನ್
ಫ್ರಾಂಕಳ ಡೈರಿಯನ್ನು ಹೆಕ್ಕಿ ತೆಗೆದು
ಕೊಳ್ಳುತ್ತಾನೆ. ಪುಟ ತಿರುವಿಹಾಕುತ್ತಾ
ಂದು ಕಡೆ ಬರೆದ ಸಾಲುಗಳನ್ನು ಓದಲು
ತೊಡಗುತ್ತಾನೆ. ಅಷ್ಟರಲ್ಲಿ ಎಳೆಯ ಬಾಲಕಿ
ಯೊಬ್ಬಳ ಸುಸ್ವರ ಕೇಳಿಬರುತ್ತದೆ.
"ಇಷ್ಟೆಲ್ಲ ದೌರ್ಜನ್ಯಗಳಿದ್ದರೂ, ಮನುಷ್ಯನ
ಅಂತರ್ಯವು ದಯೆ, ಪ್ರೇಮ, ಸಹಾನು
ಭೂತಿಗಳಿಂದ ಕೂಡಿರುವುದು ಚಿರಂತನ
ಸತ್ಯ. ಇದು ನನ್ನ ದೃಢವಿಶ್ವಾಸ!" ಕಿಕ್ಕಿರಿದ
ಪ್ರೇಕ್ಷಕ ಸಮೂಹ ಆ್ಯನ್ ಫ್ರಾಂಕಳ
ದುರಂತವನ್ನು ನಿಸ್ತಬ್ಧರಾಗಿ ಉಸಿರು ಬಿಗಿ
ಹಿಡಿದು ನೋಡುತ್ತಾರೆ, ದುಃಖದಿಂದ ಅವರ
ಹೃದಯಗಳು ಭಾರವಾಗಿವೆ.

ಡಸ್ಸೆಲ್ ಡಾರ್ಫ್‌ನ ಜನ-ನಾಟಕದ
ಮಧ್ಯಂತರದ ವಿರಾಮ ಕಾಲದಲ್ಲಿ ತಮ್ಮ
ಆಸನಗಳಲ್ಲೇ ಕುಳಿತಿದ್ದರಂತೆ, ಬೆಳಕಿಗೆ
ಅಂಜಿದವರಂತೆ, ಪರಸ್ಪರ ಮುಖ ವೀಕ್ಷಿಸಲು
ನಾಚಿದವರಂತೆ, ನಾಟಕ ಶಾಲೆಯೊಳಗೇ
ಕುಳಿತುಬಿಟ್ಟಿದ್ದರೆಂದು ಸುದ್ದಿಗಾರರು ವರದಿ
ಮಾಡಿದರು.

ಡಸ್ಸೆಲ್‌ಡಾರ್ಫ್‌ನ ನಾಟಕಮಂಡಲಿಯ
ಒಡೆಯ ಕ್ರ್ಯೂಸೋ ಎಪ್‌ಲ್ ವಿವರಿಸು
ತ್ತಾನೆ—ಆ್ಯನ್‌ಫ್ರಾಂಕಳ ಈ ಮಟ್ಟದ
ವಿಜಯದ ರಹಸ್ಯವೇನೆಂದರೆ ಕೆಲವೇ ವರ್ಷ
ಗಳ ಹಿಂದೆ ನಡೆದ ಘಟನೆಗಳ ಹಿನ್ನೆಲೆಯ
ಆಕರ್ಷಣೆ, ತಾವೇ ಸ್ವತಃ ನೋಡಿದ,
ಕೇಳಿದ, ಅನುಭವಿಸಿದ ಭಯಾನಕ ಸಂಗತಿ
ಗಳ, ಪ್ರೈನವಿರೇಳಿಸುವ ಯಥಾರ್ಥತೆ,
ಎಳೆಯಬಾಲಕಿ ಆ್ಯನ್‌ಫ್ರ್ಯಾಂಕಳ ಅಸಾ
ಮಾನ್ಯ ವ್ಯಕ್ತಿತ್ವ, ಯಾರನ್ನೂ ದೂಷಣೆ
ಮಾಡದ, ಬಹಿರಂಗ ಮಾನಖಂಡನೆ ಮಾಡ
ದಿರುವಂಥ ಉದಾರ, ಪ್ರೇಮಭರಿತ, ನಿಷ್ಕಪಟ ಹೃದಯ. ಸಹಜೀವಿಗಳ ಮೇಲೆ ನಡೆಸಲಾದ ಅಮಾನವೀಯ ದೌರ್ಜನ್ಯಗಳನ್ನು ಅತ್ಯಂತ ದೈನ್ಯತೆಯ ಕರುಣಾದ್ರವಾಣಿಯಿಂದ ಖಂಡಿಸುವ ರೀತಿಯು ನಾಟಕ ನೋಡು ತ್ತಿದ್ದಂತೆ ಪ್ರೇಕ್ಷಕರ ಹೃದಯವು ಕರಗಿ ನೀರಾಗಿ, ನಾಚಿಕೆಯಿಂದ ಪಶ್ಚಾತ್ತಾಪ ದಿಂದ, ತಲೆತಗ್ಗುವಂತೆ, ತಮ್ಮನ್ನು ತಾವೇ ದೂಷಿಸುವಂತೆ, ಬೈದುಕೊಳ್ಳುವಂತೆ ಮಾಡುತ್ತದೆ. ಇಲ್ಲಿ ಜರ್ಮನರನ್ನು ಯಾರೂ ದೂರುವುದಿಲ್ಲ. ಜರ್ಮನರೇ ತಾವು ತಪ್ಪು ಮಾಡಿದೆವೆಂದು ಕಣ್ಣೀರು ಸುರಿಸುತ್ತಾರೆ. ಯುದ್ಧಾನಂತರ ಜರ್ಮನಿಯನ್ನು ಆಳ ತೊಡಗಿದ ಅಧಿಕಾರಿಗಳು, ಅರ್ಥಹೀನ ವಂಶಾಭಿಮಾನ ಮತ್ತು ಜನಾಂಗ ದ್ವೇಷದ ದಳ್ಳುರಿಯನ್ನು ಹರಡಿ ಸರ್ವನಾಶವನ್ನು ಉಂಟುಮಾಡಿದ ನಾಝೀ ಸರ್ವಾಧಿಕಾರಿ ಗಳ ಮೂರ್ಖತೆಯ ಬಗ್ಗೆ ಅರಿವು ಮೂಡಿ ಸಲು, ಜರ್ಮ್ಮನರ ಹೃದಯ ಪರಿವರ್ತನೆ ಗೈಯಲು, ಹಲವಾರು ವರ್ಷ ನಿಷ್ಫಲ ಪ್ರಯತ್ನ ನಡೆಸಿ ಕೈಚೆಲ್ಲಿದ್ದರು. ಅವರಿ ಆ್ಯನ್‌ಫ್ರ್ಯಾಂಕಳ ಡೈರಿ ಜಯಶಾಲಿ ಯಾಯಿತು. ಆ ನಾಟಕದಲ್ಲಿ ಅಭಿನಯಿಸಿದ ಮುಖ್ಯ ಪಾತ್ರಧಾರಿಗಳಿಗೆ ಹಲವಾರು ಪತ್ರ ಗಳು ಬಂದುವು. ಅವುಗಳಲ್ಲಿ ವಿಶಿಷ್ಟ ವಾದೊಂದು ಪತ್ರವಿತ್ತು. ಅದರಲ್ಲಿ "ನಾ ನೊಬ್ಬ ಒಳ್ಳೆಯ ನಾಜೀಯಾಗಿದ್ದೆ. ಹಾಗೆಂದು ಭಾವಿಸಿದ್ದೆ—ನಿನ್ನೆ ರಾತ್ರಿಯ ವರೆಗೂ! ನಾಜೀಯಾಗಿರುವುದೆಂದರೇನು? ಅದರ ನಿಜವಾದ ಅರ್ಥವೇನು? ಒಂದೂ ಗೊತ್ತಿರಲಿಲ್ಲ!" ಇನ್ನೊಮ್ಮೆ ಜರ್ಮನಿಯ ಎಲ್ಲ ತರಗತಿಯ ಶಾಲಾ ಬಾಲಕರೂ ಜತೆ

ಯಾಗಿ ಸಹಿಮಾಡಿದ ಪತ್ರ ಅದರಲ್ಲಿ ಆ ಎಳೆಯರು ಬರೆದ ಒಕ್ಕಣೆ ಈ ರೀತಿ ಇತ್ತು. "ಜನಾಂಗ ದ್ವೇಷದ ಫಲಿತಾಂಶವೆಂದರೆ ಅನ್ಯಾಯ ಅತ್ಯಾಚಾರಗಳೆಂದು ಈಗ ನಮಗೆ ಗೊತ್ತಾಗಿದೆ. ಅದಕ್ಕೆ ಕಾರಣ ಆ್ಯನ್ ಫ್ರ್ಯಾಂಕಳ ಡೈರಿ. ಅವಳು ನಮ್ಮ ಕಣ್ಣುಗಳನ್ನು ಮುಸುಕಿದ್ದ ಅಜ್ಞಾನದ ಪರೆಯನ್ನು ಹರಿದೊಗೆದಿದ್ದಾಳೆ.

ಪಶ್ಚಿಮ ಬರ್ಲಿನ್ನಿನಲ್ಲಿ 'ಆ್ಯನ್ ಫ್ರ್ಯಾಂಕ್ ಹೋಮ್'—ಎಳೆಯರಿಗಾಗಿ ಆಶ್ರಮವನ್ನು ನಿರ್ಮಿಸಿದ್ದಾರೆ. ಸಮಾಜ ಸೇವೆ ಇದರ ಉದ್ದೇಶ. ಬರ್ಲಿನ್ನಿನ ಜನತೆ ವಿವಿಧ ಜನಾಂಗಗಳಲ್ಲಿ ಪರಸ್ಪರ ಸಹಿಷ್ಣುತೆ ಮತ್ತು ಸಾಮಾಜಿಕ ಸದ್ಭಾವಗಳ ಪ್ರತೀಕವಾಗಿ ಆ್ಯನ್‌ಫ್ರಾಂಕಳನ್ನು ಆರಿಸಿದರು. ಜನಾಂಗ ದ್ವೇಷದ ಚಿಕ್ಕಕುರುಹು ಅಥವಾ ಪದಚಿಹ್ನೆ ಎಲ್ಲಿ ಕಂಡರೆ ಅಲ್ಲಿ ಅವುಗಳನ್ನು ಅಳಿಸಿ ಹಾಕುವ ಪ್ರಯತ್ನ ಬೃಹತ್ ಪ್ರಮಾಣದಲ್ಲಿ ಜರ್ಮನಿಯ ಉದ್ದಗಲದಲ್ಲೆಲ್ಲ ಪ್ರಾರಂಭಗೊಂಡುವು ಮತ್ತು ಅಲ್ಲೆಲ್ಲ ಆ ಸಂಘಟನೆ, ಸಂಸ್ಥೆಗಳಿಗೆ ಆ್ಯನ್‌ಫ್ರಾಂಕಳ ಹೆಸರನ್ನಿಟ್ಟರು. ಯುರೋಪಿನ ಇತರ ದೇಶಗಳಲ್ಲೂ ಈ ಚಳುವಳಿ ವಿಸ್ತರಿಸಿತು. 'ಇಸ್ರಯೇಲ್'ನಲ್ಲಿ ಆ್ಯನ್‌ಫ್ರ್ಯಾಂಕ್'ವನವನ್ನು ನಿರ್ಮಿಸಲಿಕ್ಕಾಗಿ ಅಸ್ಟ್ರಿಯಾದೇಶದ ವಿಯನ್ನಾದಲ್ಲಿ ನಿಧಿ ಸಂಗ್ರಹಿಸಿದರು. ಆ್ಯನ್ ಫ್ರ್ಯಾಂಕಳ ಪಾರ್ಥಿವ ಶರೀರವನ್ನು ಹೂಳಿಟ್ಟ ಸಾಮೂಹಿಕ ಸಮಾಧಿಯ ಮೇಲೆ —ಬರ್ಗನ್ ಬೆಲ್ಸೆನ್ ಎಂಬ ಸ್ಥಳದಲ್ಲಿ—ಪುಷ್ಪಗುಚ್ಛಗಳನ್ನಿರಿಸಬೇಕೆಂಬ ಅಭಿಪ್ರಾಯವನ್ನು ಹ್ಯಾಂಬರ್ಗಿನ ವಿದ್ಯಾರ್ಥಿಯೊಬ್ಬ ಪತ್ರಿಕೆಯೊಂದರಲ್ಲಿ ಪ್ರಕಟಿಸಿದ ಈ ಸೂಚನೆಗೆ ಮೂರುಸಾವಿರ ವಿದ್ಯಾರ್ಥಿಗಳು ಅತ್ಯಾಸಕ್ತಿಯಿಂದ ತಮ್ಮ ಬೆಂಬಲ ವ್ಯಕ್ತಪಡಿಸಿದರು. ಆಕೆಯ ಪುಣ್ಯತಿಥಿಯಂದು ಸಹಸ್ರಾರು ಹದಿಹರೆಯದ ವಿದ್ಯಾರ್ಥಿಗಳು, ಯುವಕರು, ದ್ವಿಚಕ್ರ ವಾಹನಗಳಲ್ಲಿ, ನೂರಿಪ್ಪತ್ತು ಕಿಲೋಮೀಟರ್ ದೂರಕ್ಕಿಂತಲೂ ಹೆಚ್ಚು ದೂರದಿಂದ, ಗಾಳಿ ಮಳೆಯನ್ನೂ ಲೆಕ್ಕಿಸದೆ, ಬರ್ಗನ್-ಬೆಲ್-ಸೆನ್‌ಗೆ ಧಾವಿಸಿದರು. ಅಲ್ಲಿನ ಸಮೂಹ ಸಮಾಧಿಗಳಲ್ಲೊಂದಾದ ಆ್ಯನ್‌ಫ್ರ್ಯಾಂಕಳ ಶರೀರವಿದ್ದ ಸಮಾಧಿಯ ಮುಂದುಗಡೆ ಎಲ್ಲ ವಿದ್ಯಾರ್ಥಿ ವಿದ್ಯಾರ್ಥಿನಿಯರು ನೆರೆದರು. ಹದಿನೇಳು ವರ್ಷದ ಒಬ್ಬಾಕೆ ತನ್ನ ಅನಿಸಿಕೆಗಳನ್ನು ಅಲ್ಲಿ ನೆರೆದ ಜನ ಸಮೂಹಕ್ಕೆ ಈ ರೀತಿ ತಿಳಿಸಿದಳು—"ಆ್ಯನ್‌ಫ್ರ್ಯಾಂಕ್ ನಮ್ಮೆಲ್ಲರಿಂದ ಕಿರಿಯಳಿದ್ದಾಗಲೇ ಅತ್ಯಂತ ಭೀಕರವಾಗಿ ಮರಣ ಹೊಂದಿದಳು. ಅವಳು ಸಾಯಲೇಬೇಕಾಯಿತು.ಏಕೆಂದರೆ ಹಲವರು ಅವಳ ವಂಶವನ್ನೇ ನಿರ್ನಾಮಮಾಡಲು ಪಣತೊಟ್ಟಿದ್ದರು. ಜಗತ್ತಿನಲ್ಲಿ ಇಂಥ ಅಮಾನುಷವಾದ — ಮನುಷ್ಯತ್ವಕ್ಕೇ ಅಪಮಾನಕಾರಕವಾದ—ಜನಾಂಗದ್ವೇಷದ ಜಾಡ್ಯವು ಮುಂದೆ ಎಂದೂ ತಲೆ ದೋರಬಾರದು. ಜರ್ಮನಿಯ ಭಾವೀ ಪ್ರಜೆಗಳಾದ ವಿದ್ಯಾರ್ಥಿಗಳೇ, ನಾವೆಲ್ಲ ಒಗ್ಗಟ್ಟಿನಿಂದ ಅದಕ್ಕಾಗಿ ಶ್ರಮಿಸೋಣ." ಎಂದು ಕರೆ ಇತ್ತಳು.

ಆ್ಯನಳ ಪುಟ್ಟ ಜೀವನ ನಿಶ್ಚಯವಾಗಿಯೂ ಒಂದು ನವೀನ ಪ್ರಾರಂಭ. ಮರಣಾನಂತರವೂ ನಮ್ಮೆಲ್ಲರ ಜತೆ ಆಕೆ ಇನ್ನೂ ಬದುಕಿದ್ದಾಳೆ. ವಿಶ್ವದಾದ್ಯಂತ ಸಹನೆ ಮತ್ತು ಧೀರತೆಯ ಸಂದೇಶವನ್ನು

ಸಾರುತ್ತಿದ್ದಾಳೆ. ಅತಿಯಾದ ಕಷ್ಟಗಳ ಮಧ್ಯೆ ಅಸಾಧಾರಣ ಸಂಯಮವ ತೋರಿಸಿದಳು. ಮಾನವರ ಮೇಲೆ ಅವಳು ತಳೆದ ಅಗಾಧ ಪ್ರೇಮದಿಂದಾಗಿ ಶತ್ರುಗಳ ಹೃದಯದಲ್ಲೂ ಆಕೆ ನೆಲೆಸಿದಳು. ಹೃದಯದಲ್ಲೇ ಮತ್ತೆ ಜೀವತಳೆದು ಮಾನವ ಜನಾಂಗಕ್ಕೇ ಪ್ರೇರಣೆ ನೀಡುತ್ತಿದ್ದಾಳೆ. ಅಗರುಬತ್ತಿ ಉರಿದು ಬೂದಿಯಾದರೂ ಕೋಣೆಯೊಳಗೆ ಕಂಪು ಹರಡಿಯೇ ಇರುವಂತೆ ಆಕೆಯ ದೈವೀಗುಣಗಳ ದಿವ್ಯ ಸುಗಂಧವು ಜಗದಲ್ಲೆಲ್ಲಾ ಇಂದಿಗೂ ಪಸರಿಸುತ್ತಾ ಇದೆ.



ಜಗತ್ತಿಗೆ ಚಾಲನೆ ಕೊಡಬೇಕು ಎನ್ನುವವನು ಮೊದಲು ತನ್ನನ್ನು ತಾನು ಚಲಿಸುವಂತೆ ಮಾಡಿಕೊಳ್ಳಬೇಕು.

—ಸಾಕ್ರಟಿಸ್

ನಟನೆಯಿಂದ ಅಥವಾ ತಿರಸ್ಕಾರದಿಂದ ಯಾರಿಗೂ ದಾನ ಮಾಡಬಾರದು. ಹೀಗೆ ಮಾಡಿದ ದಾನವು ದಾನಿಯನ್ನೇ ನಾಶ ಪಡಿಸುತ್ತದೆ.

—ವಾಲ್ಮೀಕಿ

ಕಣ್ಣಿಲ್ಲದವನಿಗೆ ಕನ್ನಡಿಯಿಂದ ಹೇಗೆ ಪ್ರಯೋಜನ ಇಲ್ಲವೋ ಹಾಗೆಯೇ ಸ್ವಬುದ್ಧಿ ಇಲ್ಲದವನಿಗೆ ಶಾಸ್ತ್ರಜ್ಞಾನದಿಂದ ಪ್ರಯೋಜನ ಇಲ್ಲ.

—ಚಾಣಕ್ಯ

ಹಾಂಗ್‌ಕಾಂಗ್—೯೭ರ ಅನಂತರ

ಎಚ್. ಆರ್. ಚಂದ್ರವದನರಾವ್
೨೮೭೭/೧೦, ೩ನೇ ಕ್ರಾಸ್, ಚಾಮುಂಡಿ
ಮೈಸೂರು-೫೭೦೦೦೪

೧೯೪೦ರ ದಶಕದ ನಂತರದಲ್ಲಿ ಬ್ರಿಟನ್ ಹಾಗೂ ಅನೇಕ ಸಾಮ್ರಾಜ್ಯಶಾಹಿ ರಾಜ್ಯಗಳು ತಮ್ಮ ವಸಾಹತುಗಳನ್ನು ಬಿಟ್ಟುಕೊಡುವ ಅನಿವಾರ್ಯ ಉಂಟಾದುದು ಎಲ್ಲರಿಗೂ ಗೊತ್ತು. ಭಾರತಕ್ಕೆ ಸ್ವಾತಂತ್ರ್ಯ ಅನಂತರ ಬರ್ಮ, ಸಿಲೋನ್ (ಈಗ ಶ್ರೀಲಂಕಾ), ಆಫ್ರಿಕದ ರಾಜ್ಯಗಳು—ಇವೆಲ್ಲವನ್ನೂ ಬ್ರಿಟನ್ ಒಂದೊಂದಾಗಿ ಕಳೆದುಕೊಳ್ಳುತ್ತಾ ಬಂತು. ೯೭ ಜುಲೈ ೧ರಲ್ಲಿ ಬ್ರಿಟನ್ ಹಾಂಗ್‌ಕಾಂಗ್ ಅನ್ನು ಚೀನಕ್ಕೆ ಬಿಟ್ಟುಕೊಡಬೇಕಾಗುತ್ತದೆ. ೧೫೬ ವರ್ಷಗಳ ಅನಂತರ ಹಾಂಗ್ ಕಾಂಗ್ ಬ್ರಿಟಿಷರ ಕೈತಪ್ಪಿ, ಮಾತೃದೇಶ ಚೀನಕ್ಕೆ ಸೇರುತ್ತದೆ.

೧೮೪೨ರಲ್ಲಿ 'ಅಫೀಮ್ ಯುದ್ಧ'ದಲ್ಲಿ ಚೀನ ಸೋತಾಗ ಅದು ಪರ್ಲ್ ನದಿಯ ದಕ್ಷಿಣಕ್ಕಿರುವ ಭಾಗವನ್ನು ಬ್ರಿಟನ್ನಿಗೆ ಬಿಟ್ಟುಕೊಟ್ಟಿತು. ಇದು ಕ್ಯಾಂಟನ್‌ನ ದಕ್ಷಿಣಕ್ಕೆ ನದಿಮುಖದ ಭೂಮಿಯ ಬರೀ ಕಲ್ಲು ಪ್ರದೇಶ. ಕದನ ಜೋರಾದಾಗ ಇನ್ನಷ್ಟು ಸಣ್ಣ ಸಣ್ಣ ದ್ವೀಪಗಳು ಬ್ರಿಟಿಷರಿಗೆ ೯೯ ವರ್ಷ ಗೇಣಿಗೆ ದೊರೆಯಿತು.

ಹಾಂಗ್‌ಕಾಂಗ್, ಕೌಲೂನ್ ಮತ್ತು ನ್ಯೂ ಟೆರಿಟರಿಗಳು ಸೇರಿ 'ಕ್ರೌನ್ ಕಾಲೋನಿ ಆಫ್ ಹಾಂಗ್‌ಕಾಂಗ್' ಆಗಿದೆ. ಹಾಂಗ್ ಕಾಂಗ್ ಒಂದು ದ್ವೀಪಸ್ತೋಮ. ಗಗನಚುಂಬಿ ಬಹುಮಂತಸ್ತಿನ ಸೌಧ... ಕೌಲೂನ್ ಪರ್ಯಾಯ ದ್ವೀಪ. ಇಲ್ಲಿ ... ಕಿಲೋ ಮೀಟರಿಗೆ ೭೨೦ ಜನರಿದ್ದಾ... ಇಲ್ಲಿಯ ಪ್ರಜಾ ಸಂಖ್ಯೆ ೭೨೦೦೦. ಕೆ... ಭಾಗ ನ್ಯೂ ಟೆರಿಟರೀಸ್ ಅನ್ನಿಸಿಕೊ... ತ್ತದೆ. ಇಲ್ಲಿರುವ ಕಣಿವೆಗಳಲ್ಲಿ ಫ್ಯಾ... ಗಳು ಮತ್ತು ಹೊಸದಾಗಿ ನಿರ್ಮಿತವಾ... ರುವ ನಗರಗಳಿವೆ. ಇದರಿಂದಾಚೆ ವಿ... ವಾದ ಚೀನ. ಹಾಂಗ್‌ಕಾಂಗ್ ಮ... ಚೀನ ಬೇರ್ಪಡಿಸಿ ಕಿರಿದಾದ ನದಿ ಹರಿ... ತ್ತದೆ. ಚೀನಾದಿಂದ ಕಮ್ಯುನಿಸ್ಟರು ಬ... ಇದಕ್ಕೆಂದು ಎತ್ತರಕ್ಕೆ ಹಾಕಿರುವ ಮು... ಬೇಲಿ ಅಂಚಿನಲ್ಲಿದೆ.

ಹಾಂಗ್‌ಕಾಂಗ್‌ನ ಒಟ್ಟು ವಿಸ್ತೀ... ೧೦೭೭ ಚ. ಕಿ. ಮೀಟರ್. ಪ್ರಜಾಸಂ... ೫೭ ದಶಲಕ್ಷ. ಇದರ ರಾಜಧಾನಿ ವಿಕ್ಟೋರಿಯಾ. ಹವಾಮಾನ ಫೆಬ್ರವರಿಯಲ್ಲಿ ಸ... ಸರಿ ೧೫°C, ಜುಲೈ, ಆಗಸ್ಟ್‌ನಲ್ಲಿ ೨೮°... ಇಲ್ಲಿ ಜನ ಇಂಗ್ಲಿಷ್ ಮತ್ತು ಕ್ಯಾಂಟೋನೀ... (ಚೈನೀಸ್) ಭಾಷೆ ಮಾತನಾಡುತ್ತಾ... ಇಲ್ಲಿರುವವರು ಹೆಚ್ಚಾಗಿ ಕ್ರಿಶ್ಚಿಯನ್... ಮತ್ತು ಬೌದ್ಧರು.

ಹಾಂಗ್‌ಕಾಂಗ್‌ಗೆ ಪ್ರಾಕೃತಿಕ ಸಂ... ನ್ಮೂಲಗಳಿಲ್ಲ. ಇಲ್ಲಿ ಯಾವ ಲೋಹ...


ಿ, ಇಂಥದನ್ನೇ ಆಗಲಿ ಸಿಗುವುದಿಲ್ಲ. ಯುವ ನೀರನ್ನೂ ಕೂಡ ಅಂಶದಲ್ಲಿ ಚೀನದ ನೀರ್ದಾಣಗಳಿಂದ ತರಿಸಿಕೊಳ್ಳ ು. ಹಾಗಿದ್ದರೂ ಇದೊಂದು ಸಂಪದ್ ದ್ವೀಪ. ತಲಾದಾಯ ೫೯೭೫ ರಿಕನ್ ಡಾಲರುಗಳು. ಇದು ಬ್ರಿಟನ ದಾಯಕ್ಕಿಂತಲೂ ಜಾಸ್ತಿ. ಇಲ್ಲಿ ರೋಲ್ಸ್ ರಾಯ್ಸ್ ಕಾರುಗಳನ್ನು ನಿರುವವರು ಬ್ರಿಟನ್ನಿನಲ್ಲಿ ಹೊಂದಿರು ಗಿಂತ ಜಾಸ್ತಿ. ಹಾಂಗ್ ಕಾಂಗ್ ಸಿದ್ಧ ಡುಪುಗಳನ್ನು, ಎಲೆಕ್ಟ್ರಾನಿಕ್ ಸಾಮಾನು ನ್ನು, ಗಡಿಯಾರಗಳನ್ನು, ಅಮೆರಿಕ ಲಿಯಾ ಮೊದಲಾದ ದೇಶಗಳಿಗೆ ರಫ್ತು ಡುತ್ತದೆ. ಇಲ್ಲಿಂದ ಹೊರದೇಶಗಳಿಗೆ ಗುವಷ್ಟು ರೇಡಿಯೋ ಜಗತ್ತಿನ ವ ದೇಶದಿಂದಲೂ ರಫ್ತಾಗುವುದಿಲ್ಲ— ನಿಂದ ಕೂಡ. ವಿಶಾಲವಾದ ಚೀನ, ಯು, ಬ್ರೆಜಿಲ್ ಇವುಗಳು ಮಾಡುವುದ ಹೆಚ್ಚು ಅಂತರರಾಷ್ಟ್ರೀಯ ವ್ಯಾಪಾರ ನಡೆಯುತ್ತದೆ. ಹಾಂಗ್ ಕಾಂಗ್ ನಲ್ಲಿ ು ರಾತ್ರಿ ಎಲೆಕ್ಟ್ರಾನಿಕ್ ಉದ್ಯಮ ತ್ತಿರುತ್ತದೆ. ನಗರಕ್ಕೆ ನಿದ್ರೆ ಎನ್ನು ಇಲ್ಲ. ಫ್ಲಾಟುಗಳಿಗೆ ಸೇರಿದಂತೆ ಕೆಲವು ವರ್ಕ್‌ಶಾಪ್‌ಗಳಿವೆ. ಫ್ಲಾಟುಗಳಲ್ಲಿ ಮಾಡುವವರು ಬಹಳ ಹೊತ್ತು ವರ್ಕ್ ನಲ್ಲಿ ಕೆಲಸ ಮಾಡುತ್ತಿರುತ್ತಾರೆ. ು ಹಡಗನ್ನು ಹೊರಡಿಸುವುದಕ್ಕೆ ರಿ ಎರಡು ಮೂರು ಗಂಟೆಗಳಲ್ಲಿ ಅದು ಾಗುತ್ತದೆ. ಹಾಂಗ್ ಕಾಂಗ್ ಬಂದರಿ ದಗು ರಿಪೇರಿ ಕೆಲಸ ಸದಾ ನಡೆಯು ತ್ತದೆ. ವಿಮಾನದ ಬಿಡಿಭಾಗಗಳು ಇಲ್ಲಿ ರಾಗಿ ರಫ್ತಾಗುತ್ತವೆ. ಸಿದ್ಧ ಉಡುಪು ಗಳು ಜೇಡಿ ದೇಶಗಳಿಗೆ ಇಲ್ಲಿಂದ ರಫ್ತಾಗು ತ್ತಿದ್ದರೂ ಹಾಂಗ್ ಕಾಂಗ್ ಕಡಿಮೆ ಬೆಲೆಯ ಹೆಚ್ಚು ಬಾಳಿಕೆ ಬರದ ಉಡುಪುಗಳನ್ನು ಚೀನಾದಿಂದ ತರಿಸಿಕೊಳ್ಳುತ್ತದೆ. ಫ್ರೆಂಚ್ ವೈನ್ ಮತ್ತು ಸುಗಂಧದ್ರವ್ಯಗಳನ್ನು ಪ್ರವಾಸಿಗರಿಗೆ ಮತ್ತು ಧನಿಕ ಕೈಗಾರಿಕೋದ್ಯಮಿಗಳಿಗಾಗಿ ಹಾಂಗ್ ಕಾಂಗ್ ಆಮದು ಮಾಡಿಕೊಳ್ಳುತ್ತದೆ.

ಸ್ವಾಭಾವಿಕ ಬಂದರು ಇದೆ ಎನ್ನುವುದರ ಜೊತೆ ಹಾಂಗ್ ಕಾಂಗ್ ನ ಪ್ರವರ್ಧಮಾನಕ್ಕೆ ಇನ್ನೂ ಬೇರೆ ಕಾರಣ. 'ಚೀನೀಯರ ದುಡಿಮೆ'—ಮತ್ತು 'ಬ್ರಿಟಿಷರ ಆಡಳಿತ ಕ್ರಮ'—ಇವೆರಡನ್ನು ಹಾಂಗ್ ಕಾಂಗ್ ನ ಕೈಗಾರಿಕೋದ್ಯಮಿಗಳಲ್ಲಿ ಮಾತ್ರ ನೋಡಬಹುದು. ಜನರ ಕಾರ್ಯತತ್ಪರತೆ, ಮಾಡಲೇಬೇಕೆಂಬ ಹಠ, ಪ್ರಾಮಾಣಿಕತೆ, ಚುರುಕು ಬುದ್ಧಿ, ಅವಿಶ್ರಾಂತ ದುಡಿಮೆ ಇವೆಲ್ಲಾ ಹಾಂಗ್ ಕಾಂಗ್ ಜಗತ್ಪ್ರಸಿದ್ಧವಾಗಲು ಕಾರಣವಾಗಿವೆ. 'ಹೊಸ ವಿಮಾನ ನಿಲ್ದಾಣ ಆಗಬೇಕೆ? ಸಮುದ್ರವನ್ನು ಆಚೆ ತಳ್ಳಿ ಮತ್ತು ರನ್‌ವೇಗಳನ್ನು ಸೃಷ್ಟಿಸಿ. ಬೆಟ್ಟ ಬಹಳ ಎತ್ತರವಾಗಿದೆಯೇ? ಹಾಗಿದ್ದರೆ, ಅದಕ್ಕೆ ಎತ್ತರವಾದ ಎಲಿವೇಟರ್‌ಗಳನ್ನು ಹಾಕಿ'—ಇದು ಹಾಂಗ್ ಕಾಂಗ್ ಜನರ ಪ್ರವೃತ್ತಿ. ಸಾರ್ವಜನಿಕರು ವಾಸ ಮಾಡಲು ನೂರಾರು ಅಪಾರ್ಟ್‌ಮೆಂಟ್‌ಗಳುಳ್ಳ ಗಗನಚುಂಬಿ ಕಟ್ಟಡಗಳನ್ನು ಕಟ್ಟಲು ಹಾಂಗ್ ಕಾಂಗ್ ೯೦ ಬಿಲಿಯನ್ ಡಾಲರುಗಳನ್ನು ಖರ್ಚು ಮಾಡಿದೆ. ಶೇ. ೨೦ರಷ್ಟು ಹೆಚ್ಚು ಜಾಗವನ್ನು, ಸಮುದ್ರ ತಳ್ಳಿ ಮಣ್ಣು ತುಂಬಿ ಹೆಚ್ಚಿಸಿಕೊಂಡಿದೆ. ಗತಕಾಲದಲ್ಲಿ 'ಹಾಂಗ್ ಕಾಂಗ್ ಮತ್ತು ಶಾಂಘೈ

ಬ್ಯಾಂಕಿಂಗ್ ಕಾರ್ಪೊರೇಷನ್ನಿನವರಿಗಾಗಿ ಕಟ್ಟಿರುವ, ಮುಂಭಾಗದಲ್ಲೆಲ್ಲ ಗಾಜಿರುವ ಗಗನಚುಂಬಿ ಕಟ್ಟಡಕ್ಕೆ ಅಂದು ೬೧೫ ದಶಲಕ್ಷ ಡಾಲರುಗಳು ಖರ್ಚಾಗಿವೆ. ಇದು ಪ್ರಪಂಚದಲ್ಲೇ ದುಬಾರಿಯಾದ ಕಟ್ಟಡ ಎನ್ನಬಹುದು.

ಬ್ರಿಟನ್ ಈ ವರ್ಷದ ಜುಲೈ ೧ ರಂದು ಹಾಂಗ್‌ಕಾಂಗ್ ಮೇಲಿನ ತನ್ನ ಅಧಿಕಾರವನ್ನು ಕರಾರಿನಂತೆ ಚೀನಕ್ಕೆ ಬಿಟ್ಟುಕೊಡಲೇಬೇಕಾಗುತ್ತದೆ. ಆಗ ಅಲ್ಲೂ ಕಮ್ಯುನಿಸಂ ಬರಬಹುದೆ?

"ಹಾಂಗ್ ಕಾಂಗ್ ನಲ್ಲಿ ಈಗಿರುವ ಕ್ಯಾಪಿಟಲಿಸ್ಟ್ ಎಕಾನಮಿಯನ್ನು ಇನ್ನೂ ಐವತ್ತು ವರ್ಷಗಳ ಕಾಲ ಮುಂದುವರಿಸಿಕೊಂಡು ಹೋಗುತ್ತೇವೆ" ಎಂದು ಚೀನ ಸರ್ಕಾರ ಹೇಳುತ್ತಿದೆ. ಆದರೆ ಮುಂದೆ ಬರುವ ಸರ್ಕಾರ ಈ ನೀತಿಯಲ್ಲಿ ವ್ಯತ್ಯಾಸ ಮಾಡಿದರೆ ಹಾಂಗ್ ಕಾಂಗ್‌ನಲ್ಲಿರುವ ಉದ್ಯಮಿಗಳೇ ಆಗಲಿ, ಬ್ರಿಟನ್ ಆಗಲೀ ಏನೂ ಮಾಡಲು ಸಾಧ್ಯವಿಲ್ಲ. ಆದರೆ ಚಿನ್ನದ ಮೊಟ್ಟೆಯಿಡುವ ಬಾತನ್ನು ಕೊಲ್ಲುವುದು ಮೂರ್ಖತನವಾಗುತ್ತದೆ ಎಂದು ಚೀನಿಯರಿಗೂ ಗೊತ್ತಿದೆ.



ದೇವರ ಪ್ರೀತಿಯನ್ನು ಗಳಿಸಿಕೊಳ್ಳುವುದಕ್ಕೆ ಸುಲಭವಾದ ಮಾರ್ಗವೊಂದಿದೆ. ಅದೆಂದರೆ ದೇವರಿಂದ ಸೃಷ್ಟಿಯಾದ ಎಲ್ಲವನ್ನೂ, ಎಲ್ಲರನ್ನೂ ಪ್ರೀತಿಸುವುದು.

—ಏಸುಕ್ರಿಸ್ತ

ಯಾರು ತಮ್ಮ ಕೆಲಸಗಳನ್ನು ತಾವೇ ಮಾಡಿಕೊಳ್ಳುತ್ತಾರೊ ಅಂಥವರಿಗೆ ದೇವರೂ ಸಹಾಯ ಮಾಡುತ್ತಾನೆ.

—ಎಸ್. ರಾಧಾಕೃಷ್ಣನ್

ಇದು ಹ್ಯಾಗ್ರೀ?

ಡಾ|| ಟಿ. ಶ್ರೀವೆಂಕಟರಮಣ
ಪ್ರಾಧ್ಯಾಪಕರು, ಸಂಖ್ಯಾಶಾಸ್ತ್ರ ವಿಭಾಗ
ಬೆಂಗಳೂರು ವಿಶ್ವವಿದ್ಯಾನಿಲಯ
ಜ್ಞಾನಭಾರತಿ, ಬೆಂಗಳೂರು-೫೬೦ ೦೫೬

೧. ಒಂದು ರಾಶಿಯಲ್ಲಿ ೧೧೧ ತೆಂಗಿನ ಾಯಿಗಳಿವೆ. ಕೆಲವರು ಬಂದು, ಅವನ್ನು, ಯಾವ ಕಾಯಿಯನ್ನೂ ಒಡೆಯದೆ, ಸಮ ಾಗಿ ಹಂಚಿಕೊಳ್ಳುತ್ತಾರೆ. ಬಂದವರೆಷ್ಟು? ್ರತಿಯೊಬ್ಬನ ಪಾಲೆಷ್ಟು?

೨. ಐದು ಕೋಟೆಗಳ ಒಳಗೆ ಒಂದು ಂಬೆಗಿಡವಿದೆ. ನೀವು ಎರಡು ನಿಂಬೆ ಹಣ್ಣು ಳನ್ನು ಹೊರಗೆ ತರಬೇಕಾಗಿದೆ. ಪ್ರತಿ ೋಟೆಯ ಕಾವಲುಗಾರನಿಗೆ ನಿಮ್ಮ ಬಳಿ ುರುವ ಹಣ್ಣುಗಳ ಅರ್ಧಾಂಶ ಕೊಡ ೕಕು. ಅವನು ಬಳಿಕ ಒಂದೇ ಒಂದು ಣ್ಣನ್ನು ನಿಮಗೆ ಮರಳಿಸುತ್ತಾನೆ. ಹೀಗಿ ್ರೆ ನೀವು ಕೊಯ್ಯಬೇಕಾದ ಹಣ್ಣುಗಳ ಂಖ್ಯೆಯೆಷ್ಟು?

೩. ಒಂದು ಆಮೆ ೨೫ ಅಡಿ ಎತ್ತರದ ಂಬವನ್ನು ಹತ್ತಲಿದೆ. ಅದು ಹಗಲು ೪ ಡಿ ಹತ್ತಿ, ರಾತ್ರಿ ನಿದ್ದೆಯಲ್ಲಿ ಒಂದಡಿ ಕೆಳ ಾರುತ್ತದೆ. ಈ ಆಮೆ ಕಂಬದ ತುದಿ ುನ್ನು ತಲುಪಲು ಎಷ್ಟು ದಿವಸ ಬೇಕು?

೪. ಒಂದು ೨೫೬ ಚ.ಮೀ. ವಿಸ್ತೀರ್ಣದ ಾಳದಲ್ಲಿ ಒಂದು ವಿಚಿತ್ರ ತಾವರೆ ಹೂ ವೆ. ಈ ಹೂವಿನ ವಿಸ್ತಾರ ಪ್ರತಿ ದಿನ ದ್ಮಡಿಯಾಗುತ್ತದೆ. ಅದು ಇಡೀ ಕೊಳ ್ನು ಆವರಿಸಲು ೮ ದಿವಸಗಳು ಬೇಕಾ ದರೆ, ಸರಿಯಾಗಿ ಅರ್ಧಭಾಗವನ್ನು ಆವರಿ ಸಲು ಎಷ್ಟು ದಿನಗಳು ಬೇಕು?

೫. ಒಂದು ದೋಣಿ ತುಂಬ ಸರಕು ಹೇರಿದ್ದು ಬರಿಯ ೯೯ ನಿಂಬೆಹಣ್ಣುಗಳನ್ನು ಸೇರಿಸಲು ಇನ್ನೂ ಅವಕಾಶವಿದೆ. ಅದರಲ್ಲಿ ರುವ ನೀವು, ಈ ಸರದಿಯಲ್ಲೇ ೧೦೦ ನಿಂಬೆಹಣ್ಣುಗಳನ್ನು ತರಬೇಕಾಗಿದೆ. ಉಪಾಯ ಯೋಚಿಸಿ.

೬. ಒಂದು ಗೋಡೆ ಗಡಿಯಾರ ಮೇಲಿ ನಿಂದ ಬಿದ್ದು ಅದರ ಸಂಖ್ಯಾ ಮುಖ ಮೂರು ಭಾಗಗಳಾಗುತ್ತದೆ. ವಿಚಿತ್ರ ವೆಂದರೆ ಪ್ರತಿ ಭಾಗದಲ್ಲೂ ೪ ಸಂಖ್ಯೆಗಳಿದ್ದು ಅವುಗಳ ಮೊತ್ತ ಸಮಸಾಗಿರುತ್ತದೆ. ಇದು ಹೇಗೆ ಸಾಧ್ಯ?

೭. ಹನ್ನೊಂದು ಸೈನಿಕರು ಮತ್ತು ಅವರ ನಾಯಕ ಶತ್ರುವಶವಾಗುತ್ತಾರೆ. ಅವರನ್ನು ಗಡಿಯಾರದ ಅಂಕೆಗಳಂತೆ ವೃತ್ತಾಕಾರದಲ್ಲಿ ನಿಲ್ಲಿಸಲಾಗುತ್ತದೆ. ಶತ್ರು ಗಳು ಇವರಿಗೊಂದು ನಿಯಮವನ್ನು ಹೇರು ತ್ತಾರೆ. ಹನ್ನೆರಡರಿಂದ ಆರಂಭಿಸಿ ಒಬ್ಬ ಪಕ್ಕದವನಿಗೆ ಅನುಕ್ರಮವಾಗಿ, (ಅಂದರೆ ೧೨→೧, ೨→೩ ಇತ್ಯಾದಿಯಾಗಿ) ಗುಂಡುಹೊಡೆದು ಸಾಯಿಸಬೇಕು. ಕೊನೆಗೆ ಉಳಿಯುವ ಒಬ್ಬನನ್ನು ಜೀವಸಹಿತ ಬಿಡು

ಗಡೆ ಮಾಡಲಾಗುವುದು. ಈ ಸನ್ನಿವೇಶದಲ್ಲಿ ನಾಯಕನನ್ನು ಉಳಿಸಬೇಕಿದ್ದರೆ ಆತನನ್ನು ಯಾವ ಸ್ಥಾನದಲ್ಲಿ ನಿಲ್ಲಿಸಬೇಕು?

ಈ ಪ್ರಶ್ನೆಗಳಿಗೆ ನಿಮ್ಮ ಉತ್ತರ ಸರಿಯೋ, ತಪ್ಪೋ ಎಂದು ಖಚಿತಪಡಿಸಿಕೊಳ್ಳುವ ಮೊದಲು ಕೆಳಗಿರುವ ರಂಜನೀಯ ಗಣಿತೀಯ ಪ್ರಕರಣಗಳನ್ನು ಓದಿ ನಕ್ಕುಬಿಡಿ.

(ಅ) ಒಂದು ಮಹಿಳಾ ಕಾಲೇಜಿನಲ್ಲಿ 'ಗಣಿತ ದಿನ'ವನ್ನು ಆಚರಿಸಲು ನಿರ್ಧರಿಸಿದರು. ಪ್ರತಿ ವಿದ್ಯಾರ್ಥಿನಿಗೂ ಅಂದು ಸೂಕ್ತ ಉಡುಗೆಯಲ್ಲಿ ಬರಲು ಸೂಚಿಸಿದರು. ಆಗ ಹಿಂದಿನ ಸಾಲಿನಲ್ಲಿದ್ದ ತುಂಟಿಯೊಬ್ಬಳು 'ಅದೆಲ್ಲ ಸರಿ, ನಿಮ್ಮ ಉಡುಗೆಗೆ ಸೊನ್ನೆಯಿಂದ ಮಾತ್ರ ಗುಣಿಸಬೇಡಿ!' ಎಂದಳಂತೆ.

(ಆ) ಅಧ್ಯಾಪಕ: 'ವಿದ್ಯಾರ್ಥಿಗಳೇ' ಇವತ್ತು ತರಗತಿಯನ್ನು ಬಿಟ್ಟುಬಿಡಲು ನನಗೆ ಅರ್ಧ ಮನಸ್ಸಿದೆ.'

ವಿದ್ಯಾರ್ಥಿಗಳು: 'ಉಳಿದರ್ಧವನ್ನು ನಾವು ಕೊಡುತ್ತೇವೆ, ಸರ್!' ಆತ ಬೋರ್ ಮಹಾಶಯನಿರಬೇಕು!

'ಇದು ಹ್ಯಾಗ್ರೀ'ಯ ಉತ್ತರಗಳು:

೧. (೩, ೩೬) ಯಾ (೩೭, ೩).
೨. ಎರಡು ಹಣ್ಣುಗಳು.
೩. ಏಳು ದಿನಗಳಲ್ಲಿ ಅದು ೨೧ ಅಡಿ ಏರುತ್ತದೆ. ಎಂಟನೆ ದಿನ ಅದು ಹಾದಿ ತಲುಪುತ್ತದೆ
೪. ಏಳು ದಿನಗಳು.
೫. ಎರಡು ಹಣ್ಣುಗಳನ್ನು ಕೈಯಲ್ಲಿ ಹಿಡಿದುಕೊಂಡು. ಒಂದನ್ನು ಮೇಲೆಸೆದು, ಅದು ಕೆಳಗೆ ಬರುವಷ್ಟರಲ್ಲಿ ಇನ್ನೊಂದನ್ನು ಮೇಲೆಸೆಯಿರಿ. ಇದನ್ನು ನದಿದಾಟುವವರೆಗೆ ಮುಂದುವರಿಸಿ.
೬. (೧೧, ೧೨, ೧, ೨); (೯, ೧೦, ೩, ೪); (೮, ೭, ೬, ೫) ಪ್ರತಿ ಭಾಗದ ಮೊತ್ತ ೨೬.
೭. ಎಂಟನೆ ಸ್ಥಾನದಲ್ಲಿ ನಾಯಕನನ್ನು ನಿಲ್ಲಿಸಬೇಕು.

*　　*　　*　　*　　*

ಶೂನ್ಯ ಸಂಪಾದನೆ

ಸೊನ್ನೆಯೊಂದು ವಿಚಿತ್ರ ಸಂಖ್ಯೆಯದು
ಅದ ಕೂಡಿಸೆ ಏನೂ ಏರದು
ಅದ ಕಳೆಯೆ ಏನೂ ಇಳಿಯದು
ಆದರೆ ಅಂಕೆಗಳಲ್ಲಿ ಬಹುಮುಖ್ಯವದು ॥೧॥

ಸೊನ್ನೆಯಿಂದ ಸಂಖ್ಯೆಯೊಂದರ ಗುಣಿಸೆ
ಬಿಡು ನೀ ಅದ ಕೊಂದಂತೆ
ಅದಕೇ ಸೊನ್ನೆಯದು ಬಲು ಅಪಾಯ
ಹಿರಿಯರೆಂಬರು ಶೂನ್ಯರ ಸಂಗ ಬಿಡುವ ಉಪಾಯ ॥೨॥

ಸೊನ್ನೆಗೆ ಸೊನ್ನೆ ಸೇರಿದರೆ ಅದೂ ಸೊನ್ನೆ
ಮತ್ತೆ ಸೊನ್ನೆ ಸೇರಲು, ಇನ್ನೊಂದು, ಮತ್ತೊಂದು
ಏರದು ಕೊಂಚವೂ ಈ ದಿನ್ನೆ
ಎಲ್ಲವೂ ಬರಿಯ ಸೊನ್ನೆ, ಸೊನ್ನೆ ॥ ೩ ॥

ಸೊನ್ನೆಯಲ್ಲದ ಸಂಖ್ಯೆಗೆ ಸೊನ್ನೆಯಿಂದ ಭಾಗಿಸೆ
ಅದು ಅಪಾರ ಅನಂತಾನಂತ
ಸೊನ್ನೆಗೆ ಸೊನ್ನೆಯಿಂದ ಭಾಗಿಸೆ
ಅದು ನಿರ್ಧರಿಸಲಾಗದ ಬಾಬತ್ತು—ರಾಮಾನುಜನ್ ಪ್ರಶ್ನೆ ॥ ೪ ॥

ಸೊನ್ನೆಯನ್ನು ಬಹುಮಂದಿಗೆ ಹಂಚಲು
ಸಿಗುವುದು ಶೂನ್ಯಗಳ ಗೊಂಚಲು
ಶೂನ್ಯಸಂಪತ್ತನ್ನು ಪಾಲು ಮಾಡಿ
ತಾರತಮ್ಯವಿಲ್ಲದ ಮಜಾ ನೋಡಿ ॥ ೫ ॥

ಸಂಖ್ಯೆಯೊಂದರ ಎಡಕೆ ಹಾಕಿ ಸೊನ್ನೆ
ಅದು ಬರಿಯ ಕೆಲಸ, ವ್ಯರ್ಥವೆನ್ನಿ
ಸಂಖ್ಯೆಯ ಬಲಕ್ಕೆ ಹಾಕಿ ಸೊನ್ನೆ
ಆಗುವುದು ಮೌಲ್ಯ ಹತ್ತುಪಾಲು ಎನ್ನಿ ॥ ೬ ॥

ಸಿಗಲಿ ಪರೀಕ್ಷೆಯಲಿ ಅಂಕ ಸೊನ್ನೆ
ವಿದ್ಯಾರ್ಥಿ ಅಳುವನು 'ಅಯ್ಯೋ ಸೊನ್ನೆ'
ಆಟದಲಿ ಆಗಲಿ ಸ್ಕೋರು ಸೊನ್ನೆ
ಎತ್ತುವರು ಮುಂದಿನ ಬಾರಿ ಅವನನ್ನೇ ॥ ೭ ॥

ಸಂಖ್ಯಾಲೋಕದಲ್ಲಿ ಅಂಕೆಗಳ ರಾಜ್ಯ
ಸಾಟಿಯಿಲ್ಲದ ಸೊನ್ನೆಯೇ ರಾಜ
ಸೃಷ್ಟಿ, ಸ್ಥಿತಿ, ಲಯ ಮೂರು ಮಜಲು
ಮುಂದಿನದೇ ಶೂನ್ಯಸ್ಥಿತಿ, ಆಧಾರ ಬಯಲು ॥ ೮ ॥

ದೇವರೆಂದರೆ ಯಾರು, ಏನು ?
ಸಾಕಾರನೇ, ನಿರಾಕಾರನೇ ಅವನು ?
ದಾರ್ಶನಿಕರು ತಿಳಿಸಿರುವರು ಇದರ ಮರ್ಮ
ಶೂನ್ಯಸ್ಥಿತಿಯೇ ಈ ಒಳ ಮರ್ಮ ॥ ೯ ॥

ಕಲಿಕೆ: ತೊಂದರೆಗಳು-ಸಮಸ್ಯೆಗಳು-ಮಾರ್ಗದರ್ಶ

ಡಾ|| ಎ. ಎಸ್. ರಾಘವಕುಮಾ

೭೮, ೬ನೆಯ ಮೇನ್ ರಸ್ತೆ
(ಈಜುಕೊಳದ ರಸ್ತೆ ಸಮೀಪ)
ಸರಸ್ವತಿಪುರ, ಮೈಸೂರು-೫೭೦ ೦೦

ಕಾಲ ಬದಲಾದಂತೆ ಜನ ತಮ್ಮ ಕೆಲಸ ಕಾರ್ಯಗಳನ್ನು ಸುಲಭ ಮಾಡಿಕೊಳ್ಳುವ ದಾರಿಯನ್ನು ಹುಡುಕುತ್ತಾರೆ. ಜೀವನ ನಿರ್ವಹಣೆಯಲ್ಲಿ ಈ ಮಾತು ಸತ್ಯ. ಅಂತೆಯೇ ವಿದ್ಯಾಭ್ಯಾಸಕ್ಕೆ ಸಂಬಂಧಿಸಿದಂತೆ ಗ್ರಾಮೀಣ ಹಾಗೂ ನಗರ ಪ್ರದೇಶಗಳಲ್ಲಿ ಇರುವ ತಂದೆ ತಾಯಿಗಳು ತಮ್ಮ ತಮ್ಮ ಮಕ್ಕಳನ್ನು ಶಾಲೆಗೆ ಕಳುಹಿಸುತ್ತಾರೆ. ಆದರೆ ತಮ್ಮ ಪರಿಸರ, ಸ್ಥಿತಿಗತಿ, ಆವಶ್ಯಕತೆ, ಬಲಾಬಲ, ಮಕ್ಕಳ ಸ್ವರೂಪ, ಗುಣ, ಅವಗುಣ ಮುಂತಾದವುಗಳನ್ನು ಅರ್ಥಮಾಡಿಕೊಳ್ಳದೇ ತಮ್ಮ ಮಕ್ಕಳನ್ನು ಶಾಲೆಗೆ ಸೇರಿಸುವುದನ್ನು ಕಾಣಬಹುದು. ಶಾಲೆಯಲ್ಲಿ ನಡೆಯುವ ಪಾಠ ಪ್ರವಚನಗಳು, ಮಕ್ಕಳ ವಿದ್ಯಾಭ್ಯಾಸದಲ್ಲಿ ತಮ್ಮ ಪಾತ್ರ ಮತ್ತು ಹೊಣೆಗಾರಿಕೆ ಮುಂತಾದವುಗಳ ಬಗ್ಗೆ ಗಮನಕೊಡದೇ ಕೆಲವರಂತು ಫಲಿತಾಂಶಗಳನ್ನು ಮಾತ್ರ ನಿರೀಕ್ಷಿಸುತ್ತಾರೆ. ಹಿರಿಯರ ಬಲವಂತದಿಂದ ಶಾಲೆಗೆ ಸೇರಿದ ಮಗು ಸರಿಯಾಗಿ ಕಲಿಯಲು ಸಾಧ್ಯವೇ? ಕಲಿಯಲು ಬೇಕಾಗಿರುವ ಆಸಕ್ತಿ, ಕೌಶಲ, ಸಾಮರ್ಥ್ಯ ಮುಂತಾದವುಗಳನ್ನು ತಿಳಿಯದೆ ತಂದೆತಾಯಿಗಳ ಬಲವಂತಕ್ಕೆ ಈಡಾಗಿ ಚಿತ್ರ ದಂ... ನಿರೀಕ್ಷಿಸಿದ ಮಟ್ಟಕ್ಕೆ ಮಗುವೊಂದು ... ವುದು ಸಾಧ್ಯವೇ? ಇಂಥ ಪರಿಸ್ಥಿತಿಯ... ಅನೇಕ ತೊಂದರೆ ಹಾಗೂ ಸಮಸ್ಯೆಗ... ಎದುರಾಗುವುದು ಸಹಜವೇ. ಉತ್ತ... ಫಸಲನ್ನು ನಿರೀಕ್ಷಿಸಿ ಕಳೆತೆಗೆಯುವ... ಹೇಗೆ ಅವಶ್ಯವೋ ಹಾಗೆಯೇ ವ್ಯ... ಯೊಬ್ಬ ಉತ್ತಮ ಅರ್ಥಾತ್ ವಿ... ಕ್ಷೇತ್ರಗಳಿಗೆ ಉಪಯುಕ್ತವಾಗುವ ಲ... ಗಳನ್ನು ಬೆಳೆಸಿಕೊಳ್ಳಲು ತೊಂ... ಸಮಸ್ಯೆ, ಅಡೆತಡೆಗಳೆಂಬ ಕಳೆಗಳ... ಬುಡಸಮೇತ ನಾಶಮಾಡುವುದೂ ಅ... ಮುಖ್ಯ. ಕಮ್ಮಾರ ಕಾದ ಕಬ್ಬಿಣವ... ಬಡಿದು ವಿವಿಧ ರೀತಿಯ ಬಳಕೆ ವ... ಗಳನ್ನು ತಯಾರಿಸಿದಂತೆ ಬೆಳೆಯುತ್ತಿರ... ಮಗುವಿನಲ್ಲಿ ಇರುವ ಅವಗುಣಗಳ... ನಿರ್ಮೂಲ ಮಾಡುವುದು ಅಗತ್ಯ. ... ರಿಂದ ವಿವಿಧ ಕ್ಷೇತ್ರಗಳಲ್ಲಿ ಕೆಲಸ ಮ... ಬಲ್ಲ ವ್ಯಕ್ತಿಯನ್ನು ಹಾಗೂ ಆ ವ್ಯಕ್ತಿ... ವ್ಯಕ್ತಿತ್ವವನ್ನು ರೂಪಿಸುವುದು ಸಾ... ವಾಗುತ್ತದೆ. ಇದಲ್ಲದೆ ಪರಿಸರವೂ ವ್ಯಕ್ತಿ... ಮೇಲೆ ತನ್ನದೇ ಆದ ಪ್ರಭಾವ ಬೀ... ತ್ತಲೇ ಇರುತ್ತದೆ. ವ್ಯಕ್ತಿಗತವಾಗಿ...

ಾಗೂ ಪರಿಸರೀಯ ಅವಗುಣಗಳ
ಮೂಲನೆಗಾಗಿ ಅನುಭವವಿರುವ
ೃಕ್ತಿಯು, ಅಂದರೆ, ಶಿಕ್ಷಕನ ಮಾರ್ಗ
ರ್ಶನ ಅಗತ್ಯ ಎಂಬುದು ಗಮನಾರ್ಹ.

ರಿಸರ

ವ್ಯಕ್ತಿ ಮತ್ತು ಪರಿಸರದ ನಡುವೆ ನಡೆ
ಯುವ ನಿರಂತರ ಕ್ರಿಯೆ ಮತ್ತು ಅನು
್ರಿಯೆಗಳೇ ಜೀವನ. ಆದ್ದರಿಂದ ಜೀವನ
ಥದ ಯುಕ್ತ ಮಾರ್ಗಕ್ರಮಣಕ್ಕೆ
ಯುಕ್ತ ನಿರ್ದೇಶನ ಇಲ್ಲವೆ ಮಾರ್ಗದರ್ಶನ
ಗತ್ಯ. ಈ ಮಾತು ಶಿಕ್ಷಣಕ್ಕೂ ಅನ್ವಯಿ
ುವಂಥದು. ಯಾವುದೇ ಪರಿಸರದಲ್ಲಿ ಆಗಲಿ
ಯಾವುದೇ ಸಮಾಜದಲ್ಲಿ ಆಗಲಿ ಇತ್ತೀಚಿನ
ನಗಳಲ್ಲಿ ಶಿಕ್ಷಣ ಎನ್ನುವುದು ಬದಲಾವಣೆ
ನ್ನು ತರುವ ಸಾಧನವೆಂದೆನಿಸಿದೆ. ಶಿಕ್ಷಣ
ಡೆಯಬೇಕೆಂಬ ಹಂಬಲದಿಂದ ವಿವಿಧ
ರಿಸರ ಹಾಗೂ ಸಾಂಸ್ಕೃತಿಕ ಹಿನ್ನೆಲೆಗಳಿಂದ
ುವವರು ಅಥವಾ ಮಕ್ಕಳು
ದ್ಯಾರ್ಜನೆಗಾಗಿ ಶೈಕ್ಷಣಿಕ ಸಂಸ್ಥೆಗಳಿಗೆ
ರ್ಜಿ ಸಲ್ಲಿಸಿ ಪ್ರವೇಶ ಪಡೆಯುತ್ತಿದ್ದಾರೆ.
ಮಕ್ಕಳ ಮಾತೃಭಾಷೆ ಒಂದೇ ಆಗಿ
ರೂ ಪರಿಸರ, ಸಂಸ್ಕೃತಿ, ಕಲಿಕೆಯ ಮಟ್ಟ,
ಕ್ತಿ ಮನೋಭಾವ ಮುಂತಾದವುಗಳು
ನ್ನವಾಗಿಯೇ ಇರುತ್ತವೆ. ಕೆಲವೊಂದು
ಕ್ಷಣಿಕ ಸಂಸ್ಥೆಗಳು ಮಕ್ಕಳ ಮಾತೃ
ಷೆಯಲ್ಲಿ ಬೋಧನೆಗೆ ಅವಕಾಶಗಳನ್ನು
ಡಿಕೊಟ್ಟವೆಯಾದರೆ ಇನ್ನು ಕೆಲವು
ಗ್ಲಿಷ್ ಮತ್ತು ಪ್ರಾಂತೀಯ ಭಾಷೆ
ಲ್ಲಿ ಬೋಧನೆ ಮಾಡುತ್ತಿವೆ. ತಂದೆ
ಯಿಗಳು ತಮ್ಮ ಉದ್ಯೋಗದ ಕಟ್ಟು
ಡುಗಳ ರೀತ್ಯ ಬೇರೆಡೆಗೆ ವರ್ಗವಾದರೆ
ರ ಮಕ್ಕಳೂ ತಮ್ಮ ವಿದ್ಯಾಭ್ಯಾಸಕ್ಕೆ

ಅಲ್ಲಲ್ಲಿ ಲಭ್ಯವಾಗುವ ಕನಿಷ್ಟ ಅವಕಾಶಗಳನ್ನು ಮಾತ್ರ ಬಳಸಿಕೊಳ್ಳಬೇಕಾಗುತ್ತದೆ. ಉದಾಹರಣೆಗೆ ತರಗತಿ ಒಂದರಲ್ಲಿ ಗಣಿತವನ್ನು ಬೋಧಿಸುವ ಒಬ್ಬ ಮೇಧಾವಿ ಶಿಕ್ಷಕ ತನಗೆ ಇಂಗ್ಲಿಷಿನಲ್ಲಿ ಪಾಂಡಿತ್ಯವಿದ್ದರೂ ಕಾರಣಾಂತರಗಳಿಂದ ಕನ್ನಡದಲ್ಲಿ ಪಾಠ ಕಲಿಸಿದಾಗ, ಆ ತರಗತಿಯಲ್ಲಿನ ೩-೪ ವಿದ್ಯಾರ್ಥಿಗಳಿಗೆ ಕನ್ನಡ ಬಾರದಿದ್ದಾಗ ಶಿಕ್ಷಕನಿಗೆ, ವಿದ್ಯಾರ್ಥಿಗಳಿಗೆ ಎದುರಾಗುವ ಸಮಸ್ಯೆಗಳು ಏನೆಂಬುದನ್ನೂ ಊಹಿಸಿಕೊಳ್ಳಬಹುದು.

ಮತ್ತೊಂದು ಸನ್ನಿವೇಶವನ್ನು ಗಮನಿಸೋಣ: ಬುದ್ಧಿಸಾಮರ್ಥ್ಯದ ಎಲ್ಲ ಹಂತಗಳಿಗೆ ಸೇರಿರುವ ಮಕ್ಕಳು ಒಂದು ತರಗತಿಯಲ್ಲಿ ಇರುವುದನ್ನು ಮರೆತು ಒಬ್ಬ ಶಿಕ್ಷಕ ಕೇವಲ ಬುದ್ಧಿಶಾಲಿ ಮಕ್ಕಳನ್ನೇ ಗಮನದಲ್ಲಿ ಇಟ್ಟುಕೊಂಡು ಪಾಠವನ್ನು ವೇಗವಾಗಿ ಕಲಿಸ ಹೊರಟಾಗ ಏನಾಗುತ್ತದೆ ಎಂಬುದನ್ನು ಊಹಿಸುವುದೂ ಅಸಾಧ್ಯ. ಇಂಥ ಸನ್ನಿವೇಶಗಳಲ್ಲಿ ಕಲಿಯಲು ಹೊರಟ ವ್ಯಕ್ತಿಗೆ ಹಲವಾರು ಸಮಸ್ಯೆಗಳು ಎದುರಾಗುತ್ತವೆ. ಆದರೆ ಈ ಸಮಸ್ಯೆಗಳಿಗೆ ಪರಿಹಾರ ಕಂಡುಕೊಳ್ಳುವ ಸಾಮರ್ಥ್ಯ ಕಲಿಕಾರ್ಥಿಗೆ ಇದೆಯೇ? ಇಂಥ ವಿದ್ಯಾರ್ಥಿಗಳಿಗೆ ಕಲಿಸಬೇಕಾದ ಶಿಕ್ಷಕ ಈ ವ್ಯಕ್ತಿಗಳು ಹಾಗೂ ಇವರ ಸಮಸ್ಯೆಗಳಿಗೆ ಗಮನ ಕೊಡದೆಯೇ ತನ್ನ ಕಾರ್ಯವನ್ನು ಮುಂದುವರಿಸಿಕೊಂಡು ಹೋಗುತ್ತಿದ್ದರೆ ವಿದ್ಯಾರ್ಥಿಗಳ ಪರಿಸ್ಥಿತಿ ಏನಾಗುತ್ತದೆ? ಈ ವಿದ್ಯಾರ್ಥಿಗಳು ಕಲಿಯಲು ಸಾಧ್ಯವೇ? ಎಂಬ ಪ್ರಶ್ನೆಗಳು ಸಹಜವಾಗಿಯೇ ಮೂಡಿಬರುತ್ತದೆ.

ಸನ್ನಿವೇಶದ ವಿಶ್ಲೇಷಣೆಗಾಗಿ ಈಗ ಕೆಲವೊಂದು ಪರಿಕಲ್ಪನೆಗಳ ಬಗ್ಗೆ ತಿಳಿದುಕೊಳ್ಳೋಣ. ಅವು ಯಾವುವೆಂದರೆ ವಿದ್ಯಾರ್ಥಿ, ಶಿಕ್ಷಣ, ಶಿಕ್ಷಕ, ತೊಂದರೆಗಳು, ಸಮಸ್ಯೆಗಳು ಹಿಂದುಳಿಕೆ ಹಾಗೂ ಮಾರ್ಗದರ್ಶನ.

ವಿದ್ಯಾರ್ಥಿ

ಪ್ರತಿಯೊಂದು ಮಗುವೂ ವ್ಯಕ್ತಿ ಆಗಬೇಕಾದುದು ಅತ್ಯಗತ್ಯ. ಪ್ರತಿಯೊಬ್ಬರೂ ಒಳ್ಳೆಯ ಹಾಗೂ ಅವಗುಣಗಳನ್ನು ಬೆಳೆಸಿಕೊಳ್ಳುವುದು ಸಹಜವೇ. ಇವುಗಳನ್ನು ಪತ್ತೆಹಚ್ಚಿ ವ್ಯಕ್ತಿಯಲ್ಲಿ ಪರಿವರ್ತನೆ ತರುವಂಥ ಪ್ರಕ್ರಿಯೆಗಳಲ್ಲಿ ಈತನನ್ನು ತೊಡಗಿಸಬೇಕಾಗುತ್ತದೆ. ಆದರೆ ವ್ಯಕ್ತಿ ನಾಲ್ಕು ಬಗೆಯ ಸಮಸ್ಯೆಗಳ ಜಾಲದಲ್ಲಿ ಸಿಲುಕಿಕೊಂಡಿರುತ್ತಾನೆ—ವೈಯಕ್ತಿಕ ಸಮಸ್ಯೆಗಳು, ಸಾಮಾಜಿಕ ಸಮಸ್ಯೆಗಳು, ಕಲಿವಿನ ಸಮಸ್ಯೆಗಳು ಮತ್ತು ಪರೀಕ್ಷೆಯ ಸಮಸ್ಯೆಗಳು. ಈ ಅಂಶಗಳ ಪ್ರಭಾವದಿಂದ ಸ್ವಲ್ಪಮಟ್ಟಿಗಾದರೂ ವಿಮುಕ್ತನಾದರೆ, ಈತ ಒಬ್ಬ ವ್ಯಕ್ತಿಯಾಗಿ ಮಾರ್ಪಟ್ಟು ಹಲವಾರು ಮಹತ್ತರ ಕಾರ್ಯಗಳನ್ನು ಸಾಧಿಸಬಲ್ಲ. ಆದರೆ ಈ ಸನ್ನಿವೇಶದಿಂದ ಮತ್ತೊಂದು ಹೊಸ ಪರಿಸರಕ್ಕೆ, ಅಂದರೆ ಶಾಲೆಗೆ ಬಂದ ಈತನಿಗೆ ಎಲ್ಲವೂ ಅಪರಿಚಿತವಾಗಿಯೇ ಇರುತ್ತದೆ. ಉದಾಹರಣೆಗೆ, ತರಗತಿಯ ಪರಿಸರ, ಬೋಧನೆಯ ಶೈಲಿ, ಸಹಪಾಠಿಗಳು, ಕಲಿಯುವ ವಿಷಯ, ವಾಸಸ್ಥಳ ಮುಂತಾದವು. ಇದರ ಸಲುವಾಗಿ ಈತನಿಗೆ ಅನೇಕ ಹೊಸ ಹೊಸ ಸಮಸ್ಯೆಗಳು ಎದುರಾಗುತ್ತವೆ. ಇವು ವೈಯಕ್ತಿಕವಾಗಿರಬಹುದು ಇಲ್ಲವೆ ಸಾಮೂಹಿಕವಾಗಿರಬಹುದು. ವ್ಯಕ್ತಿಯ ಸಾಮಾಜಿಕ ಹಿನ್ನೆಲೆಯ ಮೇಲೆ ಪ್ರಭಾವ ಬೀರುವಂಥವುಗಳು ಕೆಲವು ಸಮಸ್ಯೆಗಳಾದರೆ ಬೌದ್ಧಿಕ ಪರಿಸರದ ಮೇಲೆ ಇಲ್ಲವೇ ಕಲಿಕೆಯ ಮೇಲೆ ಹೆಚ್ಚು ಪ್ರಭಾವ ಬೀರುವಂಥ ಸಮಸ್ಯೆಗಳೂ ಕೆಲವಿರಬಹುದು. ಇಂಥ ಸಮಸ್ಯೆಗಳ ಜಾಲದಲ್ಲಿ ಸಿಕ್ಕಿಕೊಂಡಿರುವ ವ್ಯಕ್ತಿಯೇ ವಿದ್ಯಾರ್ಥಿ. ಪ್ರಸ್ತುತ ಲೇಖನದಲ್ಲಿ ವಿದ್ಯಾರ್ಥಿಯೆಂದೆನಿಸಿರುವ ವ್ಯಕ್ತಿಯ ಕಲಿವಿನ ತೊಂದರೆಗಳು ಹಾಗೂ ಸಮಸ್ಯೆಗಳನ್ನು ಕುರಿತು ಚರ್ಚಿಸಲಾಗಿದೆ.

ಶಿಕ್ಷಣ

ಕಲಿಯಲು ಸ್ವಲ್ಪಮಟ್ಟಿನ ಹಂಬಲ, ಆಸಕ್ತಿ, ಮನೋಭಾವ, ಅಭಿರುಚಿ, ಹಾಗೂ ಅರ್ಹತೆಗಳು ಇರುವ ವ್ಯಕ್ತಿಗಳು ಒಂದೆಡೆ, ಕಲಿಯಬೇಕೆಂಬ ಹಂಬಲ, ಆಸಕ್ತಿ, ಮನೋಭಾವ ಮುಂತಾದವುಗಳಲ್ಲೂ ಅವಕಾಶ ಸೌಲಭ್ಯಗಳು ಲಭ್ಯವಾಗದ ವ್ಯಕ್ತಿಗಳು ಇನ್ನೊಂದೆಡೆ. ಇಂಥವರುಗಳಿಗಾಗಿಯೇ ವಿವಿಧ ಪರಿಸರಗಳಲ್ಲಿ ವೈವಿಧ್ಯಮಯ ಅನುಭವಗಳನ್ನು ನೀಡುವುದಕ್ಕಾಗಿ ಪಾಂಡಿತ್ಯ ಹಾಗೂ ಪರಿಣತಿಗಳನ್ನು ಪಡೆದುಕೊಂಡಿರುವ ಅನುಭವಿ ವ್ಯಕ್ತಿಯೇ ಶಿಕ್ಷಕ ಎಂದೆನಿಸಿಕೊಳ್ಳುತ್ತಾನೆ. ಶಿಕ್ಷಕ ಉದ್ದೇಶಪೂರ್ವಕವಾಗಿ ರೂಪಿಸಿಕೊಂಡು ಆಯ್ಕೆ ಮಾಡಿಕೊಂಡಿರುವಂಥ ಅರ್ಥಪೂರ್ಣ ಚಟುವಟಿಕೆಗಳನ್ನು ಒಳಗೊಂಡಿರುವ ಪ್ರಕ್ರಿಯೆಯೇ ಶಿಕ್ಷಣವೆನಿಸುತ್ತದೆ.

ಶಿಕ್ಷಕ

ಅಪೇಕ್ಷಿತ ವಿದ್ಯಾರ್ಹತೆ ಹಾಗೂ ಅನುಭವಗಳನ್ನು ಪಡೆದು ಅನನುಭವಿ ವ್ಯಕ್ತಿಗಳಾದ ಮಕ್ಕಳು ಇಲ್ಲವೆ ವಿದ್ಯಾರ್ಥಿಗಳಿಗೆ ಕಲಿಸುವಂಥ ವ್ಯಕ್ತಿ. ಈತ ಶೈಕ್ಷಣಿಕ ಪ್ರಕ್ರಿಯೆಯಲ್ಲಿ ಅತಿಮುಖ್ಯವಾದ ಸ್ಥಾನವನ್ನು ಪಡೆದಿದ್ದಾನೆ. ಶೈಕ್ಷಣಿಕ ವ್ಯವಸ್ಥೆಗಳ ಆಂತರಿಕ ಭಾಗವೇ ಶಿಕ್ಷಕ ಎನ್ನುವುದೂ ಸಮಂಜಸವೇ ಸರಿ. ಹೊಸ ಹೊಸ ವಿನ್ಯಾಸಗಳನ್ನು ರೂಪಿಸಿಕೊಂಡು ಪ್ರತಿಯೊಂದು ಶೈಕ್ಷಣಿಕ ಸಂಸ್ಥೆಯ ಮೂಲಕ ಚಿಕ್ಕ ಮಕ್ಕಳನ್ನು ಸಮಾಜೀಕರಣಕ್ಕೆ ಒಳಗಾಗಿಸುತ್ತಾನೆ ಶಿಕ್ಷಕ.

ಸಮಾಜದಲ್ಲಿ ಉತ್ತಮ ಜೀವನ ನಡೆಸಲು ಕೆಲವೊಂದು ಮೂಲಭೂತ ಸೌಲಭ್ಯಗಳು ಹೇಗೆ ಅಗತ್ಯವೋ ಹಾಗೆಯೇ ಜೀವನವನ್ನು ರೂಪಿಸಿಕೊಂಡು ಪರಿಷ್ಕರಿಸಿಕೊಳ್ಳುವಲ್ಲಿ ಶಿಕ್ಷಣವೂ ಅಗತ್ಯ. ಸಾಮಾಜಿಕ ಜೀವನದ ನಿರ್ವಹಣೆಗೆ ಸಾಮರ್ಥ್ಯ ಎನ್ನುವುದು ಕೀಲಿಕೈಯಾಗಿದ್ದರೆ; ಜ್ಞಾನ, ಕೌಶಲ ಮತ್ತು ಸಾಮರ್ಥ್ಯಗಳ ಸರಿಪಡಿಸುವಿಕೆಗೆ ಶಿಕ್ಷಣ ಕೀಲಿಕೈ ಎನಿಸುತ್ತಿದೆ. ಶಿಕ್ಷಕನನ್ನು 'ಸಾಮಾಜಿಕ ಶಿಲ್ಪಿ' ಎಂದೂ ಸಂಬೋಧಿಸುವುದಿದೆ. ಆತನನ್ನು ರಾಷ್ಟ್ರದ ರೂವಾರಿ ಎಂದೆನ್ನಲೂಬಹುದು. ಹೀಗಾಗಿ ಶಿಕ್ಷಕ ಬಗೆಬಗೆಯ ಪಾತ್ರಗಳನ್ನು ನಿರ್ವಹಿಸುತ್ತಾನೆ. ಪಾತ್ರಗಳ ಹರವು ಬಲು ವ್ಯಾಪಕವಾದದ್ದು. ಸರ್ವತೋಮುಖ ಬೆಳವಣಿಗೆಗಾಗಿ ಶಿಕ್ಷಕರು ಮಕ್ಕಳನ್ನು ರೂಪಿಸಬೇಕಾಗಿರುವುದರಿಂದ ಅವನ ಪಾತ್ರದ ವ್ಯಾಪಕತೆಯೂ ಯುಕ್ತ ರೀತಿಯಲ್ಲಿ ಹೆಚ್ಚಾಗಬೇಕಾಗುತ್ತದೆ. ಆದ್ದರಿಂದ ಪ್ರತಿಯೊಬ್ಬ ವಿದ್ಯಾರ್ಥಿಯನ್ನೂ ಜಾಗರೂಕತೆಯಿಂದ ಅಧ್ಯಯನ ಮಾಡಿ, ಸಮಾಜದ ಅತ್ಯಗತ್ಯಗಳಿಗೆ ಅನುಗುಣವಾಗಿ, ಸಮಾಜ ಒಪ್ಪುವ ರೀತಿಯಲ್ಲಿ ವಿದ್ಯಾರ್ಥಿಯ ವ್ಯಕ್ತಿತ್ವವನ್ನು ರೂಪಿಸುವಲ್ಲಿ ಶಿಕ್ಷಕ ನೆರವಾಗುತ್ತಾನೆ.

ಈ ರೀತಿ ಹಲವಾರು ಅನುಭವಗಳನ್ನು ಪಡೆದ ಶಿಕ್ಷಕನಿಂದ ಮಕ್ಕಳಿಗೆ ಯುಕ್ತ ಶಿಕ್ಷಣ ದೊರೆಯಬೇಕು. ಈ ಶಿಕ್ಷಣ ಮಗುವಿನಲ್ಲಿ ತನ್ನ ವೈವಿಧ್ಯಮಯ ಪ್ರಕ್ರಿಯೆಗಳಿಂದ ಹಲವಾರು ಉತ್ತಮೋತ್ತಮ ಅಂಶಗಳಿಗೆ ಕಾರಣವಾಗುತ್ತದೆ. ಇವುಗಳೆಂದರೆ—ಸ್ಥಿರತೆ, ಆತ್ಮವಿಶ್ವಾಸ, ಸದೃಢ ಮನೋಭಾವ, ಬುದ್ಧಿಸಾಮರ್ಥ್ಯ, ಜ್ಞಾನ, ಆಸಕ್ತಿ, ಅಭಿರುಚಿ, ಯುಕ್ತಾಯುಕ್ತ ವಿವೇಚನೆ, ಕೆಲಸವನ್ನು ನಿಭಾಯಿಸುವ ಸಾಮರ್ಥ್ಯ ಮುಂತಾದವು. ಶಿಕ್ಷಣದಿಂದ ಲಭಿಸುವ ಈ ಎಲ್ಲ ಅಂಶಗಳನ್ನು ಪಡೆದುಕೊಂಡು ಮಗು ಇಲ್ಲವೆ ವ್ಯಕ್ತಿ ತನ್ನ ವ್ಯಕ್ತಿತ್ವವನ್ನು ರೂಪಿಸಿಕೊಳ್ಳುವುದು ಸಾಧ್ಯ. ಪರಿಸ್ಥಿತಿ ಇಲ್ಲವೆ ಪರಿಸರದ ಕಾರಣದಿಂದಾಗಿ ತನಗೆ ಎದುರಾಗಬಹುದಾದಂಥ ಅಡಚಣೆ–ತೊಂದರೆ ಇಲ್ಲದೆ ಸಮಸ್ಯೆಗಳನ್ನು ಈ ಮೊದಲು ಪ್ರಸ್ತಾಪಿಸಿರುವ ಸದೃಢ ಅಂಶಗಳನ್ನು ಪಡೆದುಕೊಂಡಿರುವ ವ್ಯಕ್ತಿ ಇಲ್ಲವೆ ಮಗುವಿಗೆ ಯಶಸ್ವಿಯಾಗಿ ನಿಭಾಯಿಸಲು ಅವಕಾಶವಿರುತ್ತದೆ.

ಪ್ರತಿಯೊಬ್ಬ ವಿದ್ಯಾರ್ಥಿಯನ್ನೂ ಒಬ್ಬ ವ್ಯಕ್ತಿಯಾಗಿ ಪರಿಗಣಿಸಿ ತನ್ನ ಪಾತ್ರಗಳನ್ನು ಯುಕ್ತ ವೇಳೆಯಲ್ಲಿ ಯುಕ್ತ ರೀತಿಯಲ್ಲಿ ನಿರ್ವಹಿಸಬೇಕು. ತನಗೆ ಸಾಧ್ಯವಾದಷ್ಟುಮಟ್ಟಿಗೆ ವಿದ್ಯಾರ್ಥಿಗಳ ಮನಸ್ಸು,

ಪರಿಸ್ಥಿತಿ, ಸಮಸ್ಯೆ ಮತ್ತು ತೊಂದರೆಗಳನ್ನು ಪತ್ತೆ ಹಚ್ಚಿ, ಅರ್ಥ ಮಾಡಿಕೊಂಡು, ವಿಶ್ಲೇಷಿಸಿ, ಪರಿಹಾರ ಪಡೆಯುವುದಕ್ಕೂ ಕಲಿಕಾರ್ಥಿಗೆ ಅವಕಾಶ ಮಾಡಿಕೊಡಬೇಕು. ಇಲ್ಲವೇ ಅವು ಒದಗಲು ಅವಶ್ಯಕವಾದ ಮಾರ್ಗದರ್ಶನ ನೀಡಬೇಕು. ವಾಸ್ತವ ಉದಾಹರಣೆಗಳ ಮೂಲಕ ಕಠಿಣತರವಾದ, ಹೆಚ್ಚು ತೊಂದರೆಗಳಿರುವ ಪರಿಸ್ಥಿತಿಯಲ್ಲೂ ಯುಕ್ತ ಮಾರ್ಗದರ್ಶನ ಒದಗಿಸಲು ಪ್ರಯತ್ನಿಸಬೇಕು. ಒಬ್ಬ ಉತ್ತಮ ಶಿಕ್ಷಕನಾದವನು ಪ್ರತ್ಯಕ್ಷವಾಗಿ ಕೆಲವು ವೇಳೆ ಮತ್ತು ಪರೋಕ್ಷವಾಗಿ ಮಿಕ್ಕ ವೇಳೆಗಳಲ್ಲಿ ವಿದ್ಯಾರ್ಥಿಯ ಹಿತ ಚಿಂತಕನಾಗಿ ಇರುವುದು ಸಹಜವೇ.

ತೊಂದರೆಗಳು

ವ್ಯಕ್ತಿಯಲ್ಲಿ ಅವಶ್ಯವಾಗಿ ಇರಬೇಕಾದ ಮಟ್ಟದಲ್ಲಿ ಕೆಲವೊಂದು ಸಾಮರ್ಥ್ಯ, ಆಸಕ್ತಿ, ಅಭಿರುಚಿ, ಮನೋಭಾವ, ಕೌಶಲ ಮುಂತಾದವುಗಳು ಇಲ್ಲದಿದ್ದಾಗ ಎದುರಾಗುವ ಪ್ರತಿಕೂಲ ಸನ್ನಿವೇಶಗಳೇ ತೊಂದರೆಗಳು ಎನಿಸಿಕೊಳ್ಳುತ್ತವೆ. ಇವುಗಳ ಸ್ವರೂಪ, ತೀವ್ರತೆ, ಮತ್ತು ಪ್ರಭಾವಗಳನ್ನು ತಿಳಿದುಕೊಂಡು ಕೆಲಸದಲ್ಲಿ ಮುಂದುವರೆಯುವುದು ಅತ್ಯಗತ್ಯ. ಇವುಗಳನ್ನು ಅಲಕ್ಷ್ಯಮಾಡಿ ಮುಂದೆ ಹೊರಟಾಗ ವ್ಯಕ್ತಿಗೆ ಸಿಗುವುದು ನಿರಾಸೆ, ಆಪತ್ತುಗಳೇ ವಿನಾ ಬೇರಾವುವೂ ಅಲ್ಲ. ಇವು ಎಲ್ಲಾ ವ್ಯಕ್ತಿಗಳಿಗೂ ಎದುರಾಗುತ್ತವೆ. ಹೆಜ್ಜೆ ಹೆಜ್ಜೆಗೂ ಎದುರಾಗುವ ತೊಂದರೆಗಳ ನಿವಾರಣೆಗಾಗಿ ತನ್ನೆಲ್ಲ ಹಿಂದಿನ ಅನುಭವಗಳ ಹಿನ್ನೆಲೆಯಲ್ಲಿ ಯುಕ್ತ ಉಪಾಯಗಳ ಮೂಲಕ ಮುಂದುವರಿದಿದ್ದೇ ಆದರೆ ವ್ಯಕ್ತಿ ಪರಿಪೂರ್ಣ ವ್ಯಕ್ತಿತ್ವದ ಹಾದಿಯ ಮಾರ್ಗಕ್ರಮಣ ಮಾಡುವುದು ಸಾಧ್ಯವಾಗುತ್ತದೆ.

ಸಮಸ್ಯೆಗಳು

ಯಾವುದಾದರೊಂದು ಸನ್ನಿವೇಶ ಇಲ್ಲವೆ ಅನುಭವದ ಫಲವಾಗಿ ಮೈದಳೆಯುವ ಆಲೋಚನೆಗೆ ಈಡುಮಾಡುವ ಅಂಶಗಳು. ಇವು ವ್ಯಕ್ತಿ, ಸಮೂಹ, ವಿಕಾಸ, ಮನೋಭಾವ, ಕೌಶಲ, ವೃತ್ತಿ, ಕಲಿಕೆ, ಪ್ರಗತಿ, ಸಾಧನೆ, ಮುಂತಾದವುಗಳಿಗೆ ಸಂಬಂಧಪಟ್ಟವುಗಳಾಗಿರುತ್ತವೆ. ಇವು ತಾತ್ಕಾಲಿಕವಾಗಿರಬಹುದು ಇಲ್ಲವೆ ದೀರ್ಘಕಾಲಿಕಗಳಾಗಿರಬಹುದು. ತಕ್ಷಣ ಪರಿಹಾರ ಕಂಡುಬರದಿದ್ದಾಗ ಇವು ವ್ಯಕ್ತಿಗೆ ಬಹಳಷ್ಟು ತೊಂದರೆ ಕೊಡುತ್ತವೆ. ಒಮ್ಮೊಮ್ಮೆ ವಿವಿಧ ಸನ್ನಿವೇಶಗಳಲ್ಲಿ ವಿವಿಧ ಪಾತ್ರಗಳನ್ನು ವ್ಯಕ್ತಿ ನಿರ್ವಹಿಸುವಾಗಲೂ ಇವು ತಮ್ಮ ಪ್ರಭಾವವನ್ನು ವಿವಿಧ ರೀತಿಯಲ್ಲಿ ಪ್ರಕಟಪಡಿಸುತ್ತವೆ. ಆದ್ದರಿಂದ ಪ್ರತಿಯೊಬ್ಬ ವ್ಯಕ್ತಿಯೂ ಅತಿಜಾಗರೂಕತೆಯಿಂದ ಯೋಜನೆಗಳನ್ನು ಮಾಡುವಾಗಲೇ ಎದುರಿಸಬಹುದಾದ ಸಮಸ್ಯೆಗಳ ಬಗ್ಗೆಯೂ ಗಮನಹರಿಸುವುದು ಅನಿವಾರ್ಯ. ಉದಾಹರಣೆಗೆ, ಹೊಸ ಪರಿಕಲ್ಪನೆಗಳನ್ನು ಕಲ್ಪಿಸುವುದು, ಇಲ್ಲವೆ ಪ್ರಯೋಗ ಮಾಡಲೆಂದು ಹೊಸ ವಿಷಯವೊಂದನ್ನು ಆಯ್ಕೆಮಾಡಿಕೊಳ್ಳುವುದು. ಇಲ್ಲಿ ಬರುವಂಥ ಸಮಸ್ಯೆಗಳು ಇಂತಿವೆ:

೧. ಪರಿಕಲ್ಪನೆಗಳನ್ನು ಅರ್ಥಮಾಡಿಕೊಳ್ಳಲು ಬೇಕಾಗಿರುವ ಸಾಮರ್ಥ್ಯದ ಅಭಾವ.

೩. ಪರಿಕಲ್ಪನೆಗಳ ಬಗ್ಗೆ ಬೆಳೆಸಿಕೊಂಡಿರುವ ತಪ್ಪುಗ್ರಹಿಕೆಗಳು.

೩. ಕಲಿಯಲು ಸಿದ್ಧವಾಗದಿರುವುದು.

೪. ಅವಶ್ಯಕವಾದ ಕೌಶಲಗಳ ಅಭಾವ ಇಲ್ಲವೆ ಕೊರತೆ.

೫. ವಿಷಯದ ಬಗೆಗಿರುವ ಅದೃಢ ಮನೋಭಾವ.

೬. ವಿವಿಧ ಪರಿಸರ ಇಲ್ಲವೆ ಸ್ಥಳಗಳಲ್ಲಿ ಹೊಂದಾಣಿಕೆ ಇಲ್ಲದಿರುವುದು.

೭. ಆರ್ಥಿಕ ಮುಗ್ಗಟ್ಟು.

೮. ಪುಸ್ತಕಗಳ ಕೊರತೆ.

೯. ಮರೆವು.

೧೦. ವಿಷಯ ಇಲ್ಲವೆ ಭಾವನೆ ವ್ಯಕ್ತಪಡಿಸದಿರುವುದು.

೧೧. ಶೈಕ್ಷಣಿಕ ಹಿಂದುಳಿಕೆ, ಮುಂತಾದವು.

ಈ ಮೊದಲಾದ ಅಂಶಗಳೇ ಸಮಸ್ಯೆಗಳಿಗೆ ಪೂರಕವಾಗಿ ಎದ್ದು ನಿಲ್ಲುವಂಥವು.

ಹಿಂದುಳಿಕೆ

ವ್ಯಕ್ತಿ ಇಲ್ಲವೆ ಮಗು ಸರಾಸರಿ ಮಟ್ಟದಲ್ಲಿ ಕಲಿಯುತ್ತಿರುವ ಮಗುವಿಗಿಂತ ಕಲಿಕೆಯಲ್ಲಿ ಹಿಂದುಳಿದಿರುವುದೇ ಹಿಂದುಳಿಕೆ. ಇಲ್ಲಿ ಮಗು ವಿಷಯವನ್ನು ಕಲಿಯಲಾಗದ ಸ್ಥಿತಿಯಲ್ಲಿ ಇರುತ್ತದೆ. ಇದು ಒಂದು ವಿಷಯದಲ್ಲಿರಬಹುದು ಇಲ್ಲವೆ ಒಂದಕ್ಕಿಂತ ಹೆಚ್ಚು ವಿಷಯಗಳಲ್ಲಿ ಇರಬಹುದು. ಈ ಪರಿಸ್ಥಿತಿಯಿಂದ ಹೊರಬರುವುದಕ್ಕೆ ಮಗುವಿಗೆ ತಂದೆ ತಾಯಿಗಳಾಗಲೀ ಶಿಕ್ಷಕನಾಗಲಿ ಸಹಾಯಮಾಡದಿದ್ದರೆ, ಆ ಮಗುವಿನ ಕಲಿಕೆ ಅಲ್ಲಿಗೇ ನಿಂತು ಹೋಗುತ್ತದೆ. ಈ ಸಂದರ್ಭದಲ್ಲಿಯೇ ಮಾರ್ಗದರ್ಶನದ ಮಹತ್ವವನ್ನು ಅರ್ಥ ಮಾಡಿಕೊಳ್ಳಬೇಕಾಗಿದೆ. ಕಲಿಯುವ ಪರಿಸರದಲ್ಲಿ ವಿದ್ಯಾರ್ಥಿಗೆ ಎದುರಾಗುವ ಸಮಸ್ಯೆಗಳು ಅನೇಕ. ಉದಾಹರಣೆಗೆ ಭಾಷೆ, ಬೋಧಿಸುವ ವೇಗ, ವಿಷಯದಲ್ಲಿನ ಅನಾಸಕ್ತಿ, ಕಲಿಯಲು ಅವಶ್ಯಕವಾಗಿರುವ ಸಾಮರ್ಥ್ಯ ಹಾಗೂ ಕೌಶಲಗಳ ಕೊರತೆ, ಮುಂತಾದವು.

ಮಾರ್ಗದರ್ಶನ

ಕಲಿಕೆಗೆ ಬೇಕಾಗಿರುವ ಸಾಮರ್ಥ್ಯ, ಅಭಿರುಚಿ, ಆಸಕ್ತಿ, ಆತ್ಮವಿಶ್ವಾಸ, ಮುಂತಾದವುಗಳ ಅಸ್ತಿತ್ವ, ಅಭಾವಗಳನ್ನು ಪತ್ತೆಹಚ್ಚಿ ವ್ಯಕ್ತಿ ಇವುಗಳನ್ನು ಪಡೆದುಕೊಳ್ಳಲು ಸರಿಯಾದ ದಾರಿ ತೋರಿಸಿ, ಉತ್ತೇಜನಕೊಟ್ಟು, ಮುಂದುವರೆಯಲು ಹೆಚ್ಚು ಹೆಚ್ಚು ಅವಕಾಶಗಳನ್ನು ಪಡೆಯಲು ಬಳಸುವ ಒಂದು ಕಾರ್ಯ ಇಲ್ಲವೆ ಪ್ರಕ್ರಿಯೆ. ಇದು ಎಲ್ಲ ವ್ಯಕ್ತಿಗಳಿಗೂ ಎಲ್ಲ ವೇಳೆಗಳಲ್ಲೂ ಒಂದಲ್ಲ ಒಂದು ರೀತಿ ಉಪಯೋಗಕ್ಕೆ ಬರುತ್ತದೆ.

ತೊಂದರೆಗಳು ಹಾಗೂ ಸಮಸ್ಯೆಗಳು ವ್ಯಕ್ತಿಗೆ ಬರುವುದು ಸಹಜ. ಆದರೆ ಇವುಗಳಿಗೆ ಯಾವುದೇ ವ್ಯಕ್ತಿ ಆಗಲಿ ತಂತಾನೇ ಪರಿಹಾರ ಕಂಡು ಹಿಡಿಯಲು ಸಾಧ್ಯವಿಲ್ಲದಿರಬಹುದು. ಅದರಲ್ಲೂ ಮುಖ್ಯವಾಗಿ ವಿದ್ಯಾರ್ಥಿಗೆ ಇದು ಅಸಾಧ್ಯವಾದ ಕೆಲಸವೆ ಸರಿ. ಏಕೆಂದರೆ ಇವನಿಗೆ ಅನುಭವ ಹಾಗೂ ವಿಷಯ ಪರಿಣತಿಗಳು ಇರುವುದಿಲ್ಲ. ಆದ್ದರಿಂದ ಈ ವ್ಯಕ್ತಿ ಶಿಕ್ಷಕನಿಗೆ ಮೊರೆ ಹೋಗ

ಬೇಕು. ಆತನೊಡನೆ ಕೆಲಸಮಾಡುವ ಅವನ ಮಾರ್ಗದರ್ಶನದಲ್ಲಿ ತನ್ನ ಸಮಸ್ಯೆಗಳಿಗೆ ಪರಿಹಾರ ಕಂಡು ಕೊಳ್ಳಬಹುದು. ಇದೇ ಯುಕ್ತಪರಿಹಾರ ಎಂದು ಅರಿತ ನುರಿತ ಶಿಕ್ಷಕ ತಕ್ಕ ಯೋಜನೆ ಮಾಡಿಕೊಂಡು ವಿದ್ಯಾರ್ಥಿಗೆ ಮಾರ್ಗದರ್ಶನ ನೀಡುತ್ತಾನೆ.

ಮಾರ್ಗದರ್ಶನದ ಆವಶ್ಯಕತೆ

ಈ ಭೂಮಿಯ ಮೇಲಿರುವ ಪ್ರತಿಯೊಬ್ಬ ವ್ಯಕ್ತಿಗೂ ಒಂದಲ್ಲ ಒಂದು ರೀತಿಯ ಸಹಾಯದ ಅಗತ್ಯ ಇರುತ್ತದೆ ಎಂಬುದನ್ನು ಅಲ್ಲಗೆಳೆಯುವಂತಿಲ್ಲ. ಯಾವುದೇ ಬಗೆಯ ಸಹಾಯವನ್ನೂ ಅಪೇಕ್ಷಿಸದ ವ್ಯಕ್ತಿಯನ್ನು ಯಾವ ಸಮಾಜದಲ್ಲೇ ಆಗಲಿ ಕಾಣಲಾಗದು. ಸಹಾಯ ಪಡೆಯುವ ಪರಿ ಹಾಗೂ ಮಟ್ಟದಲ್ಲಿ ವ್ಯತ್ಯಾಸ ಇರಬಹುದೇ ವಿನಾ ಪ್ರತಿಯೊಬ್ಬ ವ್ಯಕ್ತಿಗೂ ಹಲವು ವೇಳೆಯಾದರೂ ಅವನ ಜೀವನದಲ್ಲಿ ವಿವಿಧ ರೀತಿಯ ಸಹಾಯಗಳ ಆವಶ್ಯಕತೆ ಇದ್ದೇ ಇರುತ್ತದೆ ಎಂಬುದು ಅಮೆರಿಕದ ಖ್ಯಾತ ಮನಶ್ಶಾಸ್ತ್ರಜ್ಞ ಜೋನ್ಸ್ ಎಂಬುವರು ಅಭಿಪ್ರಾಯ ಪಡುತ್ತಾರೆ. ಎರಿಕ್‌ಸನ್ ಎಂಬ ಮತ್ತೊಬ್ಬ ಮನಶ್ಶಾಸ್ತ್ರಜ್ಞರ ಪ್ರಕಾರ ವ್ಯಕ್ತಿಯನ್ನು ಜಾಗರೂಕತೆಯಿಂದ ಅಧ್ಯಯನ ಮಾಡುವುದೇ ಮಾರ್ಗದರ್ಶನದ ಮುಖ್ಯ ಉದ್ದೇಶಗಳಲ್ಲಿ ಒಂದಾಗಿದೆ. ಅಂದರೆ, ವ್ಯಕ್ತಿಯ ಸಾಮರ್ಥ್ಯ ಆಸಕ್ತಿ ಬಲಹೀನತೆ, ತೊಂದರೆ, ಮುಂತಾದವುಗಳನ್ನು ತಿಳಿದುಕೊಳ್ಳುವುದು. ಈ ಪರಿಕಲ್ಪನೆ ಅಧ್ಯಾಪಕರಿಗೆ ಮಾತ್ರವಲ್ಲದೆ ತಂದೆ ತಾಯಿಗಳು ಹಾಗೂ ಪೋಷಕರಿಗೂ ಆವಶ್ಯಕವಾಗಿದೆ.

ಇಂದು ಭಾರತದಲ್ಲಿ ಈ ಅಂಶಗಳನ್ನು ಕಾಣುತ್ತಿದ್ದೇವೆ. ಸಂಕೀರ್ಣಗೊಳ್ಳುತ್ತಿರುವ ಸಮಾಜ, ವ್ಯಕ್ತಿಭಿನ್ನತೆಗಳು, ಬದಲಾಗುತ್ತಿರುವ ಔದ್ಯಮಿಕ ಹಾಗೂ ಶೈಕ್ಷಣಿಕ ವಿನ್ಯಾಸಗಳು, ಹೆಚ್ಚುತ್ತಿರುವ ವಿರಾಮ ವೇಳೆ ಹಾಗೂ ಅದರ ದುರುಪಯೋಗ, ಬಾಲಾಪರಾಧಕ್ಕೆ ಈಡಾಗುವ ಮಕ್ಕಳು, ಜನಸಂಖ್ಯೆ ಹೆಚ್ಚಳ ಕಿಕ್ಕಿರಿಯುತ್ತಿರುವ ಪಟ್ಟಣಗಳು, ಬೋಧನೆಯಲ್ಲಿರುವ ನ್ಯೂನತೆಗಳು, ಬದಲಾಗುತ್ತಿರುವ ಕುಟುಂಬದ ವಿನ್ಯಾಸ ಮತ್ತು ಸಂಬಂಧಗಳು, ಯುವಕರ ಉದ್ವೇಗದ ಹೊನಲುಗಳು, ವೃತ್ತಿ ಆಯ್ಕೆಗೆ ಸಹಾಯಮಾಡಲಾಗದ ತಂದೆ ತಾಯಿಗಳು, ಮುಂತಾದವು. ಆದ ಕಾರಣ ಈ ಅಂಶಗಳಿಂದ ಉದ್ಭವಿಸಿದ ಸಮಸ್ಯೆಗಳನ್ನು ಪರಿಹರಿಸಿಕೊಳ್ಳುವುದು ಅನಿವಾರ್ಯವಾಗಿದೆ. ಹೀಗಾಗಿ, ನಮ್ಮ ಸಮಾಜಕ್ಕೆ ಮಾರ್ಗದರ್ಶನದ ಅಗತ್ಯ ಇದ್ದೇ ಇದೆ.

ಕಲಿಕೆಯ ತೊಂದರೆಗಳಿಗೆ ಸಂಬಂಧಿಸಿರುವ ಅಂಶಗಳು

ಇತರೆ ಸನ್ನಿವೇಶಗಳಲ್ಲಿ ಇರುವಂತೆ ಕಲಿಕಾ ಸನ್ನಿವೇಶದಲ್ಲೂ ವಿದ್ಯಾರ್ಥಿಗೆ ಅನೇಕ ತೊಂದರೆಗಳು ಎದುರಾಗುತ್ತವೆ. ಇದು ಒಂದು ರೀತಿಯಲ್ಲಿ ಸಹಜವೇ. ಕಲಿಕಾ ಪರಿಸರದಲ್ಲಿರುವ ಕೆಲವು ಅಂಶಗಳು ಇದಕ್ಕೆ ಕಾರಣವಾಗಿರಬಹುದು. ತಂದೆ ತಾಯಿಗಳು, ಪೋಷಕರು ಮತ್ತು ಶಿಕ್ಷಕರು ಇವುಗಳನ್ನು ಪತ್ತೆಹಚ್ಚಬೇಕಾಗಿದೆ. ಈ ಮುಂದೆ ನಮೂದಿಸಿರುವ ಕೆಲವು ಅಂಶಗಳು ಕಲಿಕೆಯ ಮೇಲೆ ಹೆಚ್ಚು ಪ್ರಭಾವಗಳನ್ನು ಬೀರುವಂಥವು.

೧. ಬೌದ್ಧಿಕ ಮತ್ತು ನರಸಂಬಂಧೀ ಅಂಶಗಳು

ಸಾಮಾನ್ಯ ಬುದ್ಧಿ ಸಾಮರ್ಥ್ಯವನ್ನು ನಿರ್ದಿಷ್ಟ ಮಾನಸಿಕ ಮಿತಿಗಳೊಂದಿಗೆ ಪರಿಗಣಿಸಬೇಕಾಗಿದೆ. ಉದಾಹರಣೆಗೆ ದೋಷಯುಕ್ತ ಜ್ಞಾಪಕಶಕ್ತಿ, ನರಗಳ ಹಾನಿ, ಮೆದುಳಿನ ಕೆಲಸ ಇಲ್ಲವೆ ನಿಯಂತ್ರಣ, ಮುಂತಾದವು.

೨. ಭೌತಿಕ ಅಂಶಗಳು

ವ್ಯಕ್ತಿಯ ಶಾರೀರಿಕ ಸ್ಥಿತಿಗೆ ಸಂಬಂಧಪಟ್ಟಂಥವುಗಳು. ಉದಾಹರಣೆಗೆ ಆಗಾಗ್ಗೆ ಕಾಯಿಲೆ ಬೀಳುವುದು, ಕೆಲವೊಂದು ಗ್ರಂಥಿಗಳು ಕಾರ್ಯೋನ್ಮುಖವಾಗುವುದು, ಕೆಲವು ಅಂಗಗಳಿಗೆ ಸಂಬಂಧಿಸಿದ ತೊಂದರೆಗಳು, ಇತ್ಯಾದಿಗಳು.

೩. ವೈಯಕ್ತಿಕ ಮತ್ತು ಸಾಮಾಜಿಕ ಹೊಂದಾಣಿಕೆ

ಒಬ್ಬ ವ್ಯಕ್ತಿ ಇನ್ನೊಬ್ಬ ವ್ಯಕ್ತಿ ಇಲ್ಲವೆ ಸಮೂಹಕ್ಕೆ ಹೊಂದಿಕೊಳ್ಳಲು ಆಗದಿರುವ ವಿಚಾರ ಇಲ್ಲಿ ತಿಳಿದುಬರುತ್ತದೆ. ಉದಾಹರಣೆಗೆ ತರಗತಿ ಇಲ್ಲವೆ ಆಟದ ಮೈದಾನದಲ್ಲಿ ಒಂಟಿಯಾಗಿ ಕುಳಿತಿರುವುದು.

೪. ಪರಿಸರೀಯ ಅಂಶಗಳು

ವ್ಯಕ್ತಿ ಇರುವ ಪರಿಸರಕ್ಕೆ ಸಂಬಂಧಿಸಿದ ಅಂಶಗಳನ್ನು ಇಲ್ಲಿ ಪರಿಗಣಿಸಲಾಗಿದೆ. ಉದಾಹರಣೆಗೆ ಮನೆಯ ಸ್ಥಿತಿಗತಿಗಳು, ಆಸಕ್ತಿ ಇಲ್ಲದಿರುವಿಕೆ ಇಲ್ಲವೆ ಕಳೆದುಕೊಂಡಿರುವಿಕೆ, ಹೊರೆಯಾಗಿರುವ ಪಠ್ಯಕ್ರಮ, ದೋಷಯುಕ್ತ ಬೋಧನೆ ಮುಂತಾದವು.

ನೈದಾನಿಕತೆ

ಕಲಿವಿಗೆ ಸಂಬಂಧಿಸಿದ ತೊಂದರೆಗಳನ್ನಾಗಲೀ ಸಮಸ್ಯೆಗಳನ್ನಾಗಲೀ ಅವು ಎಂಥವು ಎಂಬುದನ್ನು ತಿಳಿದುಕೊಳ್ಳುವ ವಿಧಾನವೇ ನೈದಾನಿಕತೆ. ಇದು ಕಲಿವಿನ ತೊಂದರೆಗೆ ಸಂಬಂಧಿಸಿರುವ ಮತ್ತೊಂದು ಪ್ರಕ್ರಿಯೆ ಆಗಿದೆ. ಈ ಕಾರ್ಯವನ್ನು ಮೂರು ರೀತಿಯಲ್ಲಿ ಕೈಗೊಳ್ಳಬಹುದು—ಸಾಮಾನ್ಯ ನೈದಾನಿಕತೆ, ವಿಶ್ಲೇಷಣಾತ್ಮಕ ನೈದಾನಿಕತೆ ಮತ್ತು ವ್ಯಕ್ತಿ ಅಧ್ಯಯನ. ಅರ್ಥಪೂರ್ಣ ಗುರಿಗಳನ್ನು ಸಾಧಿಸಲು ವಿದ್ಯಾರ್ಥಿಗೆ ಕಲಿಕಾರ್ಥಿಗೆ ಇದು ನೆರವಾಗುತ್ತದೆ. ಆದ್ದರಿಂದ ಈ ಪರಿಕಲ್ಪನೆ ಬೋಧನಾ-ಕಲಿಕಾ ಪ್ರಕ್ರಿಯೆಯ ಅಂತರಿಕ ಭಾಗವಾಗಬೇಕು. ನೈದಾನಿಕತೆಯಲ್ಲಿನ ಪರಿಣತಿಗೆ ಈ ಮುಂದೆ ಸೂಚಿಸಿರುವ ಕೌಶಲಗಳು ಅಗತ್ಯ :

೧. ಕಲಿಕಾ ಪ್ರಕ್ರಿಯೆಗಳನ್ನು ಚೆನ್ನಾಗಿ ಅರ್ಥಮಾಡಿಕೊಳ್ಳುವಿಕೆ.

೨. ಕಲಿವಿನ ತೊಂದರೆಗಳಿಗೆ ಕೊಡುಗೆ ನೀಡುವ ಅಂಶಗಳ ಬಗ್ಗೆ ಅರಿವು.

೩. ಅನೇಕ ಆಧಾರಕಲ್ಪನೆಗಳನ್ನು ಪರಿಗಣಿಸುವ ಕೌಶಲ.

೪. ಆಧುನಿಕ ಶೈಕ್ಷಣಿಕ ಚಿಕಿತ್ಸಾಲಯಗಳಲ್ಲಿ ಬಳಸುತ್ತಿರುವ ನೈದಾನಿಕ ವಿಧಾನಗಳು ಮತ್ತು ಸಾಧನಗಳನ್ನು ಚಾಣ್ಮೆಯಿಂದ ಮತ್ತು ಪ್ರಭಾವಯುತವಾಗಿ ಅಳವಡಿಸಿಕೊಳ್ಳುವಿಕೆ.

೫. ಕೊಡುಗೆ ನೀಡುವ ನಿಯಮಗಳ ಲಕ್ಷಣಗಳನ್ನು ಗುರ್ತಿಸುವ ಸಾಮರ್ಥ್ಯ.

೬. ತೊಂದರೆಗೆ ಎಡೆ ಮಾಡಿಕೊಡುವ ಅಂಶಗಳನ್ನು ಪತ್ತೆ ಹಚ್ಚುವ ಸಾಮರ್ಥ್ಯ.

೭. ಸುಧಾರಣಾ ಹಂತಗಳು ಮತ್ತು ವಿಧಾನಗಳು ಹಾಗೂ ಬೋಧನಾ ಸಾಮಗ್ರಿಗಳ ಉಪಯುಕ್ತತೆಯ ಬಗ್ಗೆ ಪ್ರಾತ್ಯಕ್ಷಿಕೆ ನೀಡುವ ಸಾಮರ್ಥ್ಯ, ಮುಂತಾದವು.

ನೈದಾನಿಕತೆಯ ಹಂತಗಳು

ಈ ಮುಂದಿನ ಹಂತಗಳನ್ನು ಅನುಸರಿಸುವುದರಿಂದ ಹಮ್ಮಿಕೊಳ್ಳುವ ನೈದಾನಿಕ ಕಾರ್ಯಕ್ರಮ ಯಶಸ್ವಿಯಾಗುತ್ತದೆ.

೧. ಶೈಕ್ಷಣಿಕ ಉದ್ದೇಶಗಳ ರೂಪಣೆ

೨. ವಿದ್ಯಾರ್ಥಿಗಳ ಜ್ಞಾನ, ಸಾಮರ್ಥ್ಯ ಕೌಶಲ ಮುಂತಾದವುಗಳ ಮೌಲ್ಯಮಾಪನ.

೩. ಅನನುಕೂಲಕರ ಬೆಳವಣಿಗೆಗೆ ಕಾರಣವಾಗಿರುವ ಅಂಶಗಳ ಪತ್ತೆ ಹಚ್ಚುವಿಕೆ.

೪. ಪೂರ್ವಭಾವಿ ಸಮೀಕ್ಷೆ

೫. ವ್ಯವಸ್ಥಿತ ಪರೀಕ್ಷೆ ಮತ್ತು ಮೂಲ ಅಂಶಗಳ ವಿಶ್ಲೇಷಣೆ.

೬. ಸುಧಾರಣೆಯ ಕ್ರಮಗಳು

೭. ನೈದಾನಿಕತೆಯ ಸಿಂಧುತ್ವ ನಿರ್ಣಯ.

೮. ತಿದ್ದು ಕ್ರಮಗಳ ಪರಿಣಾಮಕತೆ

ನೈದಾನಿಕ ಕಾರ್ಯಕ್ರಮದ ಸ್ವರೂಪ ಇಲ್ಲವೆ ಮೂಲಭೂತ ತತ್ವಗಳು

ಒಂದು ಉತ್ತಮ ನೈದಾನಿಕ ಕಾರ್ಯಕ್ರಮವನ್ನು ಸಂಘಟಿಸುವಾಗ ಗಮನಿಸಬೇಕಾದ ಅಂಶಗಳನ್ನು ಇಲ್ಲಿ ಕೊ... ಲಾಗಿದೆ:

೧. ಚಿಕಿತ್ಸೆ ನೈದಾನಿಕತೆಗೆ ಅನುಗ... ವಾಗಿ ಇರಬೇಕು.

೨. ಮಗುವಿನ ವೈಯಕ್ತಿಕ ಮೌ... ಗಳ ಪರಿಗಣನೆ.

೩. ಹೆಚ್ಚಿನ ಅಭಿಪ್ರೇರಣೆ ಮ... ಉತ್ತೇಜನಗಳು.

೪. ಸಾಮಗ್ರಿ, ಅಭ್ಯಾಸ ಮ... ಚಟುವಟಿಕೆಗಳ ಅರ್ಥಪೂ... ಆಯ್ಕೆ.

೫. ಮಗುವಿನ ಇಡೀ ಪರಿಸ... ಪರಿಗಣನೆ.

೬. ನಿರಂತರ ಮೌಲ್ಯಮಾಪನ

೭. ಉತ್ತಮ ಬೋಧನಾ ವಿಧಾನ...

೮. ಪ್ರಶ್ನೆ ಕೇಳಲು ಇಲ್ಲವೆ ಅಭಿಪ್ರಾ... ವ್ಯಕ್ತಪಡಿಸಲು ಅವಕಾಶ.

ಸುಧಾರಣಾ ಕ್ರಮಗಳು

ಕರ್ತವ್ಯ ಹಾಗೂ ಹೊಣೆಗಾರಿಕೆಗಳ... ಅರ್ಥಮಾಡಿಕೊಂಡ ಅನುಭವವುಳ್ಳ ವ್ಯ... ಯಾಗಿ ಶಿಕ್ಷಕ ಪರಿಸ್ಥಿತಿಯನ್ನು ಸರಿಪ... ಬೇಕಾಗಿದೆ. ಈ ಸಂದರ್ಭಕ್ಕೆ ಇಲ್ಲವೆ ಕಾರ್ಯ... ಉಪಯುಕ್ತವಾಗುವ ಕೆಲವು ಕ್ರಮಗಳ... ಇಲ್ಲಿ ಪಟ್ಟಿ ಮಾಡಲಾಗಿದೆ:

೧. ಪರೀಕ್ಷೆ ಮತ್ತು ವಿಶ್ಲೇಷಣೆಗ... ಒಳಗಾಗಿರುವ ಯೋಜನೆ.

೨. ಶಿಕ್ಷಕರು, ತಂದೆ ತಾಯಿಗ... ಪೋಷಕರು, ಸಮಾಜ...

ಹಣ ಮತ್ತು ಕಲಿಕಾರ್ಥಿಗಳು ಜವಾಬ್ದಾರಿಯನ್ನು ಹಂಚಿಕೊಳ್ಳುವುದು.

೩. ಮಗುವಿನ ಬಲಾಬಲಗಳನ್ನು ಗುರ್ತಿಸಿ ಯುಕ್ತ ಸೌಲಭ್ಯಗಳ ನೀಡಿಕೆ.

೪. ವಿವಿಧ ಬೋಧನಾ ವಿಧಾನಗಳ ಬಳಕೆ.

೫. ಮಗುವಿನ ಸಾಮರ್ಥ್ಯಕ್ಕೆ ಅನುಗುಣವಾದ ಫಲಿತಾಂಶದ ನಿರೀಕ್ಷೆ.

೬. ವ್ಯಕ್ತಿಯು ಸಾಮರ್ಥ್ಯ, ಕೌಶಲ, ಆಸಕ್ತಿ ಮುಂತಾದವುಗಳಿಗೆ ಅನುಗುಣವಾಗಿ ವಿಷಯ ಇಲ್ಲವೆ ಕೆಲಸ ಕಲಿಯಲು, ಅವಕಾಶ, ಸ್ವಾತಂತ್ರ್ಯ ಮತ್ತು ಉತ್ತೇಜನ ನೀಡುವುದು.

೭. ಮನೆ ಮತ್ತು ಶಾಲೆಗಳಲ್ಲಿ ನಿಯತಕಾಲಿಕ ಮೌಲ್ಯಮಾಪನ.

೮. ಮೌಲ್ಯಮಾಪನಾ ಫಲಿತಾಂಶದ ವಿಶ್ಲೇಷಣೆ ಮತ್ತು ತಾಯಿತಂದೆಗಳೊಡನೆ ಚರ್ಚೆ.

೯. ಮಿತ್ರತೆಯಿಂದ ಯೋಜನೆಯಲ್ಲಿ ಸಫಲರಾಗಲು ಸಂಬಂಧಪಟ್ಟ ವ್ಯಕ್ತಿಗಳ ಸಹಕಾರ.

೧೦. ತಂದೆ ತಾಯಿಗಳು ಮತ್ತು ಶಿಕ್ಷಕರು ಒಟ್ಟಾಗಿ ಕೆಲವೊಂದು ಕೆಲಸಗಳನ್ನು ಮಾಡುವುದು.

ಹಿಂದುಳಿಕೆ ಎಂಬುದು ಶೈಕ್ಷಣಿಕ ರಂಗದಲ್ಲಿ ಮಾತ್ರವಲ್ಲದೆ ಜೀವನದ ಬಹುತೇಕ ಕ್ಷೇತ್ರಗಳಲ್ಲೂ ಕಂಡು ಬರುವ ಮಾನಸಿಕ ಬೌದ್ಧಿಕ ಕ್ರಿಯಾವಿಶೇಷನೇ. ಇದನ್ನು ಹೋಗಲಾಡಿಸಲು ವ್ಯಕ್ತಿ ತನ್ನ ಅಂತರಿಕ ಹಾಗೂ ಬಾಹ್ಯ ಧೈರ್ಯ ಸ್ಥೈರ್ಯಗಳನ್ನು ಯುಕ್ತ ಮಾರ್ಗದರ್ಶನಗಳ ಸಹಾಯದಿಂದ ಬಲಪಡಿಸಿಕೊಂಡಿದ್ದೇ ಆದರೆ ವ್ಯಕ್ತಿಯಲ್ಲಿ ಮನೆ ಮಾಡಿಕೊಂಡಿರುವ ಹಿಂದುಳಿಕೆ ಎಂಬ ಹುಸಿರಾಕ್ಷಸರನ್ನು ಹೊಡೆದೋಡಿಸಬಹುದು ಮಾತ್ರವಲ್ಲ ತನ್ನ ವ್ಯಕ್ತಿತ್ವವನ್ನು ರೂಪಿಸಿಕೊಂಡು ಪರಿಷ್ಕರಿಸಿಕೊಳ್ಳಬಹುದಾಗಿದೆ.

ಅಧ್ಯಯನ, ಯೋಗ, ಧ್ಯಾನ, ತಪಸ್ಸು, ಸತ್ಯ, ಕ್ಷಮೆ, ಇಂದ್ರಿಯನಿಗ್ರಹ ಮತ್ತು ಲೋಭ ಇಲ್ಲದಿರುವಿಕೆ—ಇವು ಧರ್ಮದ ಎಂಟು ಮಾರ್ಗಗಳು.

—ಮಹಾಭಾರತ

ವಿಕಾಸವೇ ಬದುಕು. ಸಂಕೋಚವೇ ಮರಣ, ಪ್ರೇಮವೆಲ್ಲಾ ವಿಕಾಸ. ಸ್ವಾರ್ಥವೆಲ್ಲ ಸಂಕೋಚ. ಆದ್ದರಿಂದ ಪ್ರೇಮವೇ ಬದುಕಿನ ಧರ್ಮ.

—ಸ್ವಾಮಿ ವಿವೇಕಾನಂದ

ಪುಸ್ತಕ ಪರಿಚಯ

ವೈವಿಧ್ಯಮಯ ಭೋಜನ—"ವೈವಿಧ್ಯಮಯ ಊಟ" ಲೇಖಕಿ : ಡಾ॥ ಎಂ. ಪಿ. ವೈದೇಹಿ ; ಪ್ರಕಾಶಕರು : ನವಕರ್ನಾಟಕ ಪಬ್ಲಿಕೇಷನ್ಸ್ ಪ್ರೈವೇಟ್ ಲಿಮಿಟೆಡ್, ಎಂಬೆಸಿ ಸೆಂಟರ್, ಕ್ರೆಸೆಂಟ್ ರಸ್ತೆ, ಬೆಂಗಳೂರು ೫೬೦ ೦೦೧ ; ಪುಟಗಳು : ೫೬ ; ಬೆಲೆ : ರೂ. ೧೫.

ಈ ಕಿರು ಹೊತ್ತಗೆಯಲ್ಲಿ ಅನ್ನ, ಹುಳಿ, ಕೂಟು, ಪುಡಿ ಎಂಬ ನಾಲ್ಕು ವಿಭಾಗಗಳಿವೆ. ಪ್ರತಿ ವಿಭಾಗದಲ್ಲೂ ಆಯಾ ಅಡುಗೆಯಿಂದ ದೊರೆಯುವ ಪೋಷಕಗಳ ವಿವರಣೆಯೂ ಇದೆ. ಅನ್ನ, ಪುಡಿ, ಹುಳಿ ಮತ್ತು ಕೂಟುಗಳಲ್ಲಿ ವೈವಿಧ್ಯ ಮತ್ತು ಪೌಷ್ಟಿಕ ಎಂಬ ವಿಷಯವನ್ನು ಸ್ಥೂಲವಾಗಿ ವಿವರಿಸಿದ್ದಾರೆ. ತರಕಾರಿಗಳ ಪೋಷಕ ಗುಣಗಳನ್ನು ಸಂರಕ್ಷಿಸಲು ಕೆಲವು ಉಪಯುಕ್ತ ಸೂಚನೆಗಳಿವೆ. ಅನ್ನದಿಂದ ತಯಾರಿಸಬಹುದಾದ ವಿವಿಧ ಬಗೆಯ ಚಿತ್ರಾನ್ನ, ಬಾತ್, ಪೊಂಗಲ್, ಮೊಸರನ್ನ, ಪುಳಿಯೋಗರೆಗಳನ್ನು ವಿವರಿಸಿದೆ. ಆದರೆ ಮೊಳೆತ ಕಾಳಿನ ಖಾರಾಬಾತ್‌ನಲ್ಲಿ ವಿವರಣೆ ಸಾಲದು. ಹೆಸರುಕಾಳನ್ನು ಮೊದಲೇ ಮೊಳೆಯಲು ಹಾಕಿ ಸಿದ್ಧಪಡಿಸಿ ಬಳಸಬೇಕು ಎಂದು ಖಚಿತ ಸೂಚನೆ ಬರೆಯಬೇಕಿತ್ತು.

ಬಗೆ ಬಗೆಯ ಸಾರು ಮತ್ತು ಹುಳಿಗಳ ತಯಾರಿಕೆ ಎರಡನೆಯ ಭಾಗದಲ್ಲಿದೆ. ವಿವಿಧ ಸೊಪ್ಪಿನ ಸಾರನ್ನು ಮಾಡುವ ಬಗೆಯಲ್ಲಿ ಮೆಂತ್ಯದ ಸೊಪ್ಪು ಮತ್ತು ಪುದೀನ ಸೊಪ್ಪಿನ ಸಾರುಗಳಲ್ಲಿ ಸಾರನ್ನು ಜರಡಿಯಲ್ಲಿ ಸೋಸಲು ಹೇಳಿದ್ದಾರೆ. ಆದರೆ ಹಾಗೆ ಸೋಸುವಾಗ ಸೊಪ್ಪು ಜರಡಿಯಲ್ಲೇ ಉಳಿಯುತ್ತದೆ. ಇದನ್ನು ತಪ್ಪಿಸಲು ಸೊಪ್ಪನ್ನು ನುಣ್ಣಗೆ ಅರೆದು ಹಾಕುವುದು ರುಚಿಯ ದೃಷ್ಟಿಯಿಂದಲೂ ಅಪೇಕ್ಷಣೀಯ. ಮಿಶ್ರ ತರಕಾರಿ ಸಾರು ಎಂಬ ಅಡುಗೆಯಲ್ಲಿ ಎಲ್ಲ ತರಕಾರಿಗಳನ್ನು ಬೇಯಿಸಿ ಅನಂತರ ಕಟ್ಟು ಬಸಿಯಲು ಹೇಳಿದ್ದಾರೆ. ಬಸಿದ ಬಳಿಕ ಉಳಿಯುವ ಗಸಿಯ ಉಪಯುಕ್ತತೆ ಬಗ್ಗೆ ಮಾಹಿತಿ ಕೊಡಬೇಕಿತ್ತು.

ದಿನನಿತ್ಯ ಅಡುಗೆಯಲ್ಲಿ ಬಳಸುವ ಸಾರಿನ ಪುಡಿ, ಹುಳಿ ಪುಡಿ, ಗೊಜ್ಜು ಮುಂತಾದವನ್ನು ಹೇಗೆ ತಯಾರಿಸಬಹುದು. ಎಷ್ಟು ದಿನ ಇಡಬಹುದು ಎಂಬ ವಿವರಗಳು ಉಪಯುಕ್ತವಾಗಿವೆ. ಮಾಡಿದ ಅಡುಗೆಯನ್ನೇ ಮಾಡಿ ಬೇಸರವಾದಾಗ ವಿವಿಧ ಕೂಟುಗಳನ್ನು ತಯಾರಿಸಬಹುದು. ಅವರೆಕಾಳು ಕೂಟು, ಸೋರೆಕಾಯಿ ಕೂಟು ಇತ್ಯಾದಿ ಕೂಟುಗಳನ್ನು ತಯಾರಿಸುವ ವಿಧಾನ ಸರಿಯಾಗಿದೆ.

ಕೊನೆಯದಾಗಿ, ಕೆಲವು ತರಕಾರಿಗಳಲ್ಲಿರುವ ಮುಖ್ಯ ಪೋಷಕಗಳ ಉಪಯುಕ್ತ ಪಟ್ಟಿಯನ್ನು ಒದಗಿಸಿದ್ದಾರೆ. ನಮ್ಮ

ನಿತ್ಯದ ಅಡುಗೆಯಲ್ಲಿ ಯಾವ ಯಾವ ತರಕಾರಿಗಳಲ್ಲಿ ಎಷ್ಟೆಷ್ಟು ಪೋಷಕಗಳಿವೆ ಎಂದು ತಿಳಿದು ಅದರಂತೆ ಅಡುಗೆ ಮಾಡಬಹುದು. ವಯಸ್ಕ ಗಂಡಸು, ಹೆಂಗಸು, ಮಕ್ಕಳು, ಬಾಲಕ, ಬಾಲಿಕೆಯರು ದಿನ ಎಷ್ಟು ಗ್ರಾಂ ಆಹಾರ ಉಪಯೋಗಿಸಬೇಕೆಂಬ ಸಂತುಲಿತ ಆಹಾರದ ಮಾಹಿತಿಯನ್ನು ಈ ಪುಸ್ತಕ ನೋಡಿ ತಿಳಿಯಬಹುದು. ಪ್ರಮುಖ ಹಣ್ಣುಗಳಲ್ಲಿರುವ ಪೋಷಕಗಳ ಪಟ್ಟಿ ಇದೆ. ಅದರಂತೆ ನಮ್ಮ ದೇಹಕ್ಕೆ ಬೇಕಾಗುವ ಪೋಷಕಗಳನ್ನು ನಿಯಮಿತವಾಗಿ ಆಹಾರದ ಮೂಲಕ ಸೇವಿಸಿದರೆ ನಮ್ಮ ಆರೋಗ್ಯವನ್ನು ಔಷಧಿಗಳಿಲ್ಲದೆ ಕಾಪಾಡಬಹುದು.

ಉಪಯುಕ್ತ ಮಾಹಿತಿಗಳಿಂದ ಕೂಡಿರುವ ಸುಲಲಿತ ಶೈಲಿಯ ಸುಂದರ ಪುಸ್ತಕ. Nutrient ಪದಕ್ಕೆ 'ಪೋಷಕ' ಸಾಕು, ಪೋಷಕಾಂಶ' ಅನಾವಶ್ಯಕ. Nutritionಗೆ 'ಪೋಷಣೆ'. Malnutritionಗೆ 'ನ್ಯೂನಪೋಷಣೆ', Overnutritionಗೆ 'ಅಧಿಪೋಷಣೆ' ಮತ್ತು Undernutritionಗೆ 'ಅವಪೋಷಣೆ' ಪದಗಳ ಬಳಕೆ ಸೂಚಿಸಿದೆ.

ರುಕ್ಮಿಣಿಮಾಲಾ
ಮನೆ ಸಂಖ್ಯೆ ೮, 'ಅತ್ರಿ'
ಕಾಮಾಕ್ಷಿ ಆಸ್ಪತ್ರೆ ರಸ್ತೆ,
ಸರಸ್ವತೀಪುರ, ಮೈಸೂರು-೫೭೦೦೦೯

* * * * *

ರಂಗಸಂಗ (ರಂಗಭೂಮಿ ಲೇಖನಗಳ ಸಂಕಲನ)—ಲೇಖಕರು: ಡಾ|| ಹೆಚ್. ಎ. ಪಾರ್ಶ್ವನಾಥ್; ಪ್ರಕಟಣೆ: ನಿತಿನ್ ಪ್ರಕಾಶನ, ಮೈಸೂರು ; ಪ್ರಥಮ ಮುದ್ರಣ ೧೯೯೫; ಪುಟಗಳು: xiv+೧೩೨; ಬೆಲೆ: ೨೫-೦೦ ರೂ.

ಕನ್ನಡದಲ್ಲಿ ನಾಟಕ ಸಾಹಿತ್ಯ ಪ್ರಕಟವಾಗುವುದು ಇನ್ನಿತರ ಪ್ರಕಾರಗಳೊಂದಿಗೆ ಹೋಲಿಸಿದರೆ ತೀರಾ ಕಡಿಮೆ. ಅದರಲ್ಲೂ ರಂಗಭೂಮಿಯನ್ನು ಕುರಿತ ಗಂಭೀರ ಲೇಖನಗಳು ಪ್ರಕಟವಾಗುವುದೇ ತೀರಾ ಅಪರೂಪ! ಇಂಥ ಒಂದು ಅಪರೂಪದ ಪ್ರಯತ್ನವನ್ನು 'ರಂಗಸಂಗ' ಪ್ರಕಟಿಸುವುದರ ಮೂಲಕ ಸಾರ್ಥಕಗೊಳಿಸಿದ್ದಾರೆ. ಡಾ|| ಹೆಚ್. ಎ. ಪಾರ್ಶ್ವನಾಥ್ ಅವರು.


ಕನ್ನಡದ ಮೊಟ್ಟಮೊದಲ ಸಾಮಾಜಿಕ ನಾಟಕ ಎಂಬ ಖ್ಯಾತಿಯನ್ನು ಪಡೆದ ೩೧-೩-೧೮೮೭ರಲ್ಲಿ ಪ್ರಕಟವಾಯಿತು ಎನ್ನಲಾದ ಉ. ಕ. ಜಿಲ್ಲೆಯ ಹೊನ್ನಾವರ ಸಮೀಪದ ಕರ್ಕಿಗ್ರಾಮದ 'ಹವ್ಯಕ ಹಿತೇಚ್ಛು' ಸೂರಿ ವೆಂಕಟರಮಣಶಾಸ್ತ್ರಿಗಳಿಂದ ರಚಿತವಾದ 'ಇಗ್ಗಪ್ಪ ಹೆಗಡೆ ವಿವಾಹ ಪ್ರಹಸನ'ದ ವಿಶ್ಲೇಷಣೆಯಿಂದ ಪ್ರಾರಂಭವಾಗುವ ಈ ಹೊತ್ತಿಗೆಯಲ್ಲಿ ರಂಗಭೂಮಿಯನ್ನೇ ಕುರಿತಾದ ೧೮ ಲೇಖನಗಳಿವೆ.

ಉತ್ತರ ಕರ್ನಾಟಕದ ಗ್ರಾಮೀಣ, ವೃತ್ತಿ ರಂಗಭೂಮಿ, ಹುಬ್ಬಳ್ಳಿ-ಧಾರವಾಡ

ಅವಳಿ ನಗರಗಳ ಹವ್ಯಾಸಿ ರಂಗಭೂಮಿ, ಕುವೆಂಪು ನಾಟಕಗಳ ರಂಗಪ್ರಯೋಗಗಳು —ಲೇಖನಗಳಲ್ಲಿ ಲೇಖಕರು ಕೊಡುವ ಖಚಿತ ವಿವರಗಳು ಓದುಗರನ್ನು ಬೆರಗಾಗಿ ಸುತ್ತವೆ. ಮಂಗಳೂರು ಪ್ರಾಂತ್ಯದ ರಂಗ ಭೂಮಿಯ ಬಗ್ಗೆ ಲೇಖಕರು ಲೇಖನ ಬರೆ ದಿದ್ದರೆ ಸಮಗ್ರ ಕನ್ನಡ ರಂಗಭೂಮಿಯ ಒಂದು ನೋಟ ಸಿಗುತ್ತಿತ್ತು ಎನಿಸುತ್ತದೆ. ಲೇಖಕರು ಕಲೆ ಹಾಕಿರುವ ಸಾಮಗ್ರಿಗಳು, ಅದನ್ನು ಬರವಣಿಗೆಯಲ್ಲಿ ಹಿಡಿದಿಡುವ ರೀತಿ ಯನ್ನು ಗಮನಿಸಿದರೆ ಅವರಿಗೆ ಕಷ್ಟ ಎಂದೇನೂ ಅನ್ನಿಸುವುದಿಲ್ಲ.

ವೃತ್ತಿಯಲ್ಲಿ ಪೆಥಾಲಜಿ ವಿಭಾಗದ ಪ್ರಾಧ್ಯಾಪಕರಾದ ಪಾರ್ಶ್ವನಾಥರಿಗೆ ಸೂಕ್ಷ್ಮ ದರ್ಶಕದಲ್ಲಿ ನೋಡುವಷ್ಟೇ ಚತುರತೆ ಅವರ ಲೇಖನಗಳಲ್ಲಿ ಕಂಡು ಬರುತ್ತದೆ. ಕನ್ನಡ ರಂಗಭೂಮಿಯ ಎಲ್ಲ ಬಗೆಯ ಮಾಹಿತಿ ಗಳನ್ನು ಅತ್ಯಂತ ಶ್ರದ್ಧೆಯಿಂದ ಅವರು ಸಂಗ್ರಹಿಸಿದ್ದಾರೆ. ಮುನ್ನುಡಿಯಲ್ಲಿ ಎನ್ಕೆ ಯವರು ಈ ಹೊತ್ತಗೆಯನ್ನು ಕುರಿತು 'ಇದೊಂದು ಸರ್ವಾಂಗ ಸುಂದರ ರಂಗ ಕೋಶ' ಎಂದಿರುವುದರಲ್ಲಿ ಯಾವ ಉತ್ಪ್ರೇಕ್ಷೆಯೂ ಇಲ್ಲ.

ನಾಗಚಂದ್ರ
೨೧೪ ಬಿ, ಅಕ್ಷರ ಕುಟೀರ
೪ನೇ ಮುಖ್ಯ ರಸ್ತೆ, ೧೬ನೇ ತಿರುವು
ವಿದ್ಯಾರಣ್ಯಪುರಂ, ಮೈಸೂರು–೫೭೦ ೦೦೮



ದೇವರು ಒಬ್ಬನೆ. ಅವನು ಎಲ್ಲ ವಸ್ತುಗಳಲ್ಲೂ ಇದ್ದಾನೆ. ನಾನು, ನೀನು, ಅವನು ಎಲ್ಲರೂ ಒಂದೇ. ಎಲ್ಲರ ಹೃದಯದಲ್ಲಿ ಇರುವ ಪರಮಾತ್ಮ ಒಬ್ಬನೇ. ಭಕ್ತಿಯೇ ಮೋಕ್ಷಕ್ಕೆ ಸಾಧನ.

—ಶ್ರೀ ಶಂಕರಾಚಾರ್ಯ

ಓದುಗರ ಅನಿಸಿಕೆಗಳು

ಮಾನ್ಯರೆ,

೯೭ರ ಮಾರ್ಚಿ ಪುಸ್ತಕ ಪ್ರಪಂಚವು ನೇತಾಜಿ ಅವರ ವಿಶೇಷ ಸಂಚಿಕೆಯಾಗಿ ಪ್ರಕಟವಾಗಿರುವುದು ಸಮಯೋಚಿತವಾಗಿದ್ದು ಸಂಚಿಕೆಯು ಹಲವಾರು ಕಾರಣಗಳಿಂದ ಸಂಗ್ರಹ ಯೋಗ್ಯವಾಗಿದೆ.

—ಸುಭಾಷ್ ಚಂದ್ರ ಬೋಸರ ಚಿತ್ರಗಳು ಹೆಚ್ಚಾಗಿ ಮಿಲಿಟರಿ ಸಮವಸ್ತ್ರದಲ್ಲೇ ಇದ್ದು, ಪುಸ್ತಕ ಪ್ರಪಂಚದ ಮುಖಪುಟ ಹಾಗೂ ಹಿಂಭಾಗದ ಚಿತ್ರಗಳು ವಿಶೇಷವಾಗಿದ್ದು, ಆಕರ್ಷಣೀಯವಾಗಿವೆ. ಡಾ|| ದೇಜಗೌ ಅವರ ಸ್ವಾತಂತ್ರ್ಯ ಪ್ರಿಯ ನೇತಾಜಿ ಲೇಖನದಲ್ಲಿ ಗಾಂಧೀ ಮತ್ತು ನೇತಾಜಿಯವರ ತೌಲನಿಕ ಪರಿಚಯ ನೀಡಿದ್ದು, ಈ ಮಹಾನ್ ವ್ಯಕ್ತಿಯ ಚರಿತ್ರೆಯನ್ನು ದೇಜಗೌ ಅವರ ಗದ್ಯದಲ್ಲಿ ಓದುವುದೇ ಒಂದು ವಿಶೇಷ ಅನುಭವ.

—ಗಾಂಧೀ ತಲೆಮಾರಿನ ಕೊನೆಯ ಕೊಂಡಿಯಾಗಿ ಉಳಿದಿರುವ ಸ್ವಾತಂತ್ರ್ಯ ಹೋರಾಟಗಾರ ಎಂ.ಎನ್. ಜೋಯಿಸ್ ಅವರು ದಂತಕಥೆಯನಾಯಕ ಸುಭಾಷ್ ಚಂದ್ರಬೋಸ್ ಲೇಖನದಲ್ಲಿ ಭಾರತದ ಸ್ವಾತಂತ್ರ್ಯ ಸಂಗ್ರಾಮದಲ್ಲಿ ಸುಭಾಷ್ ಚಂದ್ರಬೋಸರು ವಹಿಸಿದ ಪಾತ್ರವನ್ನು ಮನೋಜ್ಞವಾಗಿ ಚಿತ್ರಿಸಿದ್ದಾರೆ.

—ಪ್ರಾಧ್ಯಾಪಕರಾದ ಸಿ. ನಾಗಣ್ಣ ಅವರು 'ಸುಭಾಷ್ ಬೋಸರ ಬಾಲ್ಯ ಕಾಲ' ಅನುವಾದ ಲೇಖನಕ್ಕೆ ಸುಭಾಷರ ದಿನಚರಿಯನ್ನೇ ಆಯ್ದುಕೊಂಡು ಸಮರ್ಥನೀಯವಾಗಿ ನಿರೂಪಿಸಿದ್ದಾರೆ.

—ಚಂದ್ರಶೇಖರಾರಾಧ್ಯ ಅವರ 'ನೇತಾಜಿ ಒಡನಾಡಿ ಐಎನ್ಎ ರಾಮರಾವ್ ರವರ ನೆನಪಿನಿಂದ' ಲೇಖನವನ್ನು ಸ್ವಾತಂತ್ರ್ಯ ಸೇನಾನಿ ರಾಮರಾವ್ ಅವರನ್ನೇ ಲೇಖಕರು ಸಂದರ್ಶಿಸಿ ಸಿದ್ಧಪಡಿಸಿರುವುದು ಹೆಚ್ಚು ಪರಿಣಾಮಕಾರಿಯಾಗಿದೆ. "ಸಪ್ಪೆ ಖಾದಿ ತೊಟ್ಟ ೭೦ರ ಐಎನ್ಎ ರಾಮರಾಯರ ೯೭ರ ಇಂದೇ ಹೀಗಿರುವಾಗ ೨೦ರ ಹರೆಯದಲ್ಲಿ ಮಿಲಿಟರಿ ಸಮವಸ್ತ್ರದಲ್ಲಿ ಅಂದು ಹೇಗಿದ್ದರು ಎಂಬುದನ್ನು ನೆನೆದರೆ ಮೆಲ್ಲನೆ ಮೈ ನಡುಕ ಉಂಟಾಗುತ್ತದೆ" ಎಂಬ ಮಾತು ನನ್ನಂಥ ಓದುಗರಿಗೂ ಅನ್ವಯವಾಗುತ್ತದೆ.

ಸುಭಾಷ್ ಚಂದ್ರ ಬೋಸರನ್ನು ಕುರಿತು ಸುಮಾರು ೨೫ ಪುಟಗಳಷ್ಟು ವ್ಯಾಪ್ತಿಯಲ್ಲಿರುವ ಲೇಖನಗಳು ಕೊಟೇಷನ್ ಗಳು, ಛಾಯಾಚಿತ್ರಗಳು ವಿಶಿಷ್ಟವಾಗಿದ್ದು ಸಂಗ್ರಹ ಯೋಗ್ಯವಾಗಿದೆ. ಆದ್ದರಿಂದ ಸಂಪಾದಕ ಮಂಡಳಿಗೆ ನನ್ನ ಅಭಿನಂದನೆಗಳು.

ಎನ್. ಸೋಮಶೇಖರರಾವ್
ಬಿ. ಎಚ್. ರಸ್ತೆ, ಶಿವಮೊಗ್ಗ

ಮಾನ್ಯರೆ,

ವಿಶ್ವಾಸ ಪೂರ್ವಕವಾಗಿ ತಾವು ಕಳುಹಿಸಿ ಕೊಟ್ಟ ೯೭ ನೆಯ ಮಾರ್ಚಿ ಪುಸ್ತಕ ಪ್ರಪಂಚ ಕೈಸೇರಿತು. ಪುಸ್ತಕ ಪ್ರಪಂಚ ಮೊದಲು ಕ್ರೌನ್ ೧/೮ ಆಕಾರದಲ್ಲಿತ್ತು. ಈಗ ಡೆಮ್ಮಿ ೧/೮ ಆಕಾರದಲ್ಲಿ ಚೆನ್ನಾಗಿ ಬರುತ್ತಿದೆ. ನನ್ನ ಸಂಪಾದಕತ್ವದಲ್ಲಿ 'ವಿನೋದ' ಮಾಸ ಪತ್ರಿಕೆ ಕಳೆದ ೪೫ ವರ್ಷಗಳಿಂದ ಪ್ರಕಟವಾಗುತ್ತಿದೆ. ಈ ತಿಂಗಳಿನಿಂದ ವಿನೋದ ಪತ್ರಿಕೆಯನ್ನು ತಮಗೆ ಕಳುಹಿಸುತ್ತಿದ್ದೇನೆ. ಇದಕ್ಕೆ ಪ್ರತಿಯಾಗಿ ಪುಸ್ತಕ ಪ್ರಪಂಚವನ್ನು ನನಗೆ ಕಳುಹಿಸಿಕೊಡಬೇಕಾಗಿ ಕೋರುತ್ತೇನೆ.

ಜಿ. ನಾರಾಯಣ
ಮಾಜಿ ಅಧ್ಯಕ್ಷರು
ಕನ್ನಡ ಅಭಿವೃದ್ಧಿ ಪ್ರಾಧಿಕಾರ
ಹನುಮಂತನಗರ, ಬೆಂಗಳೂರು–೧೯

* * * * *

ಮಾನ್ಯರೇ,

೯೭ನೇ ಮಾರ್ಚಿ "ಪುಸ್ತಕ ಪ್ರಪಂಚ" ಸಂಚಿಕೆಯಲ್ಲಿ ಪ್ರಕಟವಾದ 'ಸುಭಾಷರ ಚರಿತೆ' ಲೇಖನಗಳು ತುಂಬಾ ಮೌಲಿಕವಾದವುಗಳು. ಬೋಸರ ಬಗ್ಗೆ ಕನ್ನಡದಲ್ಲಿ ಬಂದ ಬರಹಗಳು ತುಂಬಾ ವಿರಳ. ಈ ಕೊರತೆಯನ್ನು "ಪುಸ್ತಕ ಪ್ರಪಂಚ" ಪತ್ರಿಕೆ ಅರ್ಥಪೂರ್ಣವಾಗಿ ನೀಗಿಸಿದೆ. ಸುಭಾಷ್‌ರ ಶತಮಾನೋತ್ಸವವನ್ನು ರಾಷ್ಟ್ರಾದ್ಯಂತ ಆಚರಿಸುತ್ತಿರುವ ಸಂದರ್ಭದಲ್ಲಿ ವಯಸ್ಕರ ಶಿಕ್ಷಣ ಸಮಿತಿ ಈ ಮೂಲಕ ತನ್ನ ಕೊಡುಗೆಯನ್ನು ನೀಡಿರುವುದಕ್ಕೆ ಅಭಿನಂದನೆಗಳು.

ಸುಭಾಷಚಂದ್ರ ಬೋಸರ ಬಗ್ಗೆ ದೇಜಗೌರವರ ಸಂಪಾದಕೀಯ ಮಹತ್ವವಾದದ್ದು. ಅಂತೆಯೇ ಬೋಸರನ್ನು ತೀರಾ ಹತ್ತಿರದಿಂದ ಕಂಡು ಒಡನಾಡಿಯಾಗಿದ್ದ ಐಎನ್‌ಎ ರಾಮರಾವ್‌ರವರ ಅನುಭವವನ್ನು ಬರಹದಲ್ಲಿ ತಂದಿರುವ ಚಂದ್ರಶೇಖರಾರಾಧ್ಯರ ಲೇಖನ ಚೊಕ್ಕವಾಗಿತ್ತು. ಶ್ರೀ ಎಂ. ಎನ್. ಜೋಯಿಸ್, ಶ್ರೀ ಸಿ. ನಾಗಣ್ಣನವರ ಬರಹಗಳು ಸುಭಾಷ್‌ರ ಬದುಕಿನ ಒಳ-ಹೊರಗನ್ನೂ ಸೊಗಸಾಗಿ ಬಿಂಬಿಸಿವೆ. ಪತ್ರಿಕೆ ಈ ಮಾದರಿಯ ಲೇಖನಗಳನ್ನು ಆಗಾಗ ಪ್ರಕಟಿಸಿ ಓದುಗರಿಗೆ ಸದಾವಕಾಶ ಕಲ್ಪಿಸಿಕೊಡಲು ಕೋರುತ್ತೇನೆ.

ಮಮತಾ
ಕೆ. ಎನ್. ಪುರ, ಉದಯಗಿ
ಮೈಸೂರು

Reg. No. KRNN.29 / WPP 6

LICENCE No. 21
LICENCED TO POST WITH PAYMENT

'ಕುವೆಂಪು' ಅವರ
"ಜನಪ್ರಿಯ ವಾಲ್ಮೀಕಿ ರಾಮಾಯಣ"



Edited by Chandrashekhararadhya, Printed by Papanna
Printed & Published by Karnataka State Adult Education Council.
5/1, Vinoba Road Manasa Gangothri, Mysore-570 006.
Phone: 512485